ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 19 ಶುಕ್ರವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 33 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರಲ್ಲಿ ಮ್ಯೂಸಿಯಂ ಆನ್ ವ್ಹೀಲ್ಸ್

ಪಾರಂಪರಿಕ ಇಲಾಖೆಯಿಂದ ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ಮೈಸೂರು ಸಂಗ್ರಹಾಲಯಗಳ ದರ್ಶನ

ಮೈಸೂರು, ಮೇ 18 (ಆರ್‌ಕೆ)–ಅಂತಾರಾಷ್ಟ್ರೀಯ ಸಂಗ್ರಹಾಲಯಗಳ ದಿನಾಚರಣೆ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆ ವತಿಯಿಂದ ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಗುರುವಾರ ಮೈಸೂರಿನ ಮ್ಯೂಸಿಯಂಗಳ ದರ್ಶನ ಮಾಡಿಸಲಾಯಿತು.

ಮ್ಯೂಸಿಯಂ ಆನ್ ವ್ಹೀಲ್ಸ್ ಯೋಜನೆಯಡಿ ಖಾಸಗಿ ಬಸ್ಸಿನಲ್ಲಿ ಕರೆದೊಯ್ದು ಮೈಸೂರಿನ ನಾಲ್ಕು ಪ್ರಮುಖ ಸಂಗ್ರಹಾಲಯಗಳನ್ನು ಪರಿಚಯಿಸಿದ ಅಧಿಕಾರಿಗಳು, ಅವುಗಳ ಹಿನ್ನೆಲೆ, ಇತಿಹಾಸ, ಪ್ರಾಮುಖ್ಯತೆ ಬಗ್ಗೆ ಮಾಹಿತಿ ಒದಗಿಸಿದರು. ಬೆಳಗ್ಗೆ 9 ಗಂಟೆಗೆ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪಾರಂಪರಿಕ ಇಲಾಖೆ ಆಯುಕ್ತರ ಕಚೇರಿಯ ಸಂಗ್ರಹಾಲಯವನ್ನು ವೀಕ್ಷಿಸಿದ ಬಳಿಕ 85 ಮಂದಿಯನ್ನು ಸಿದ್ದಾರ್ಥನಗರದ ರೀಜನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ (ಆರ್‌ಎಂಎನ್‌ಎಚ್)ಗೆ ಕರೆದೊಯ್ದು ದರ್ಶನ ಮಾಡಿಸಲಾಯಿತು.



ನಂತರ ಮಾನಸಗಂಗೋತ್ರಿಯಲ್ಲಿರುವ ಜಯಲಕ್ಷ್ಮಿ ಮ್ಯಾನ್ಷನ್‌ನ ಜಾನಪದ ಸಂಗ್ರಹಾಲಯಕ್ಕೆ ಭೇಟಿ ನೀಡಿ ಅಲ್ಲಿಂದ ಕೆಆರ್‌ಎಸ್ ರಸ್ತೆಯಲ್ಲಿರುವ ರೈಲ್ವೆ ಮ್ಯೂಸಿಯಂ ಅನ್ನು ವೀಕ್ಷಿಸಲಾಯಿತು. ಎಲ್ಲಾ ಸಂಗ್ರಹಾಲಯಗಳಲ್ಲಿ ಗೈಡ್‌ಗಳು ಹಾಜರಿದ್ದು, ಇತಿಹಾಸದ ಬಗ್ಗೆ ಮಾಹಿತಿ ನೀಡಿದರು. ಪಾರಂಪರಿಕ ಇಲಾಖೆ ಉಪನಿರ್ದೇಶಕಿ ಸಿ.ಎನ್. ಮಂಜುಳಾ, ಕ್ಯೂರೇಟರ್ ಸುನಿಲ್‌ಕುಮಾರ್ ಜೊತೆಗಿದ್ದು ಬಸ್ಸಿನಲ್ಲಿ ಸಂಗ್ರಹಾಲಯಗಳ ಪ್ರವಾಸ ಮುಗಿಸಿ ಮರಳಿ ವಸ್ತುಪ್ರದರ್ಶನ ಮೈದಾನದ ಇಲಾಖೆ ಕಚೇರಿಗೆ ಕರೆತಂದು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಊಟ ಮಾಡಿಸಿ ಕಳುಹಿಸಿಕೊಟ್ಟರು. ಮ್ಯೂಸಿಯಂ ಆನ್ ವ್ಹೀಲ್ಸ್ ಪ್ರವಾಸದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಾವು ಮೈಸೂರಲ್ಲೇ ಇದ್ದುಕೊಂಡು ಇಂತಹ ಅದ್ಭುತ ಸಂಗ್ರಹಾಲಯಗಳನ್ನು ನೋಡಿರಲಿಲ್ಲ. ನಮ್ಮ ಕಲೆ, ಸಂಸ್ಕೃತಿ, ಜಾನಪದ, ಪ್ರಾಣಿ–ಪಕ್ಷಿ ಸಂಕುಲ, ರಾಜಮನೆತನ, ಬುಡಕಟ್ಟು ಸಮುದಾಯದ ಇತಿಹಾಸ ಈಗ ನಮಗೆ ಪರಿಚಯವಾಯಿತು. ನಮ್ಮ ವಿದ್ಯಾಭ್ಯಾಸಕ್ಕೂ ಈ ಮಾಹಿತಿಗಳಿಂದ ಅನುಕೂಲವಾಗುತ್ತವೆ ಎಂದು ಪ್ರವಾಸದ ಅನುಭವ ಹಂಚಿಕೊಂಡರು.

ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ಆರೋಪ

ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ

ಮೈಸೂರು,ಮೇ 18(ಪಿಎಂ)– ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಯುಕ್ತಾಶ್ರಯದಲ್ಲಿ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಪ್ರಾಪ್ತ ಹೆಣ್ಣು ಮಕ್ಕಳು ಸೇರಿದಂತೆ ಖ್ಯಾತ ಮಹಿಳಾ ಕುಸ್ತಿಪಟುಗಳಿಗೆ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಸೇರಿದಂತೆ ಇನ್ನಿತರ ಸಿಬ್ಬಂದಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬುದು ಅತ್ಯಂತ ಆಘಾತಕಾರಿ ಹಾಗೂ ದೇಶವೇ ತಲೆತಗ್ಗಿಸುವಂತಹ ವಿಚಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಬೇಟಿ ಬಚಾವೋ, ಬೇಟಿ ಪಡಾವೋ' ಎಂದು ಪ್ರಚಾರ ಮಾಡುವ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಆರೋಪಿ ಬ್ರಿಜ್ ಭೂಷಣ್ ಶರಣ್ ಸಿಂಗ್ ರಕ್ಷಣೆಗೆ ನಿಂತಿದ್ದು ನಾಚಿಕೇಡಿನ ಸಂಗತಿ. ದೂರಿನ ಆಧಾರದಲ್ಲಿ ಕಾನೂನು ಕ್ರಮ ಜರುಗಿಸಿ, ನೊಂದ ಮಹಿಳಾ ಕುಸ್ತಿಪಟುಗಳಿಗೆ ರಕ್ಷಣೆ ನೀಡಬೇಕಾದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪೊಲೀಸ್ ಪಡೆಗಳನ್ನು ಬಳಸಿ, ನ್ಯಾಯಕ್ಕಾಗಿ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳ ಮೇಲೆಯೇ ಆಕ್ರಮಣಕಾರಿ ಕ್ರಮಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಮೊನ್ನೆಯಷ್ಟೇ ದೆಹಲಿ ಪೊಲೀಸರು ಕುಡಿದು ಬಂದು ಪ್ರತಿಭಟನಾಕಾರರ ಮೇಲೆ ದೌರ್ಜನ್ಯ ನಡೆಸಿದ್ದಾರೆ. ಇಷ್ಟೆಲ್ಲಾ ಅಡೆತಡೆ ನಡುವೆಯೂ ನ್ಯಾಯಕ್ಕಾಗಿ ಪ್ರತಿಭಟನೆ ಮುಂದುವರೆಸಿರುವ ಕುಸ್ತಿಪಟುಗಳಿಗೆ ದೇಶದ ನಾಗರಿಕರು ಬೆಂಬಲವಾಗಿ ನಿಲ್ಲಬೇಕಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದವರ ಮೇಲೆಯೇ ಹೀಗೆ ಲೈಂಗಿಕ ಕಿರುಕುಳ ನಡೆದರೆ ಇನ್ನು ಸಾಮಾನ್ಯ ಮಹಿಳೆಯರಿಗೆ ರಕ್ಷಣೆ ದೊರೆಯುವುದು ಸಾಧ್ಯವೇ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಈ ಕೂಡಲೇ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಬಂಧಿಸಬೇಕು. ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಜಿ.ಜಯರಾಂ, ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿರಾವ್, ಕೆಪಿಆರ್‌ಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ, ಎಸ್‌ಎಫ್‌ಐ ಜಿಲ್ಲಾ ಪದಾಧಿಕಾರಿಗಳಾದ ಡಿ.ಅಭಿ, ನಿಖಿತಾ, ಪ್ರಗತಿಪರ ಚಿಂತಕರಾದ ರತಿರಾವ್, ನಾ.ದಿವಾಕರ್, ಮುಖಂಡರಾದ ಕೆ.ಬಸವರಾಜ್, ಲ.ಜಗನ್ನಾಥ್, ರಾಜೇಂದ್ರ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಾನವರಹಿತ ಫ್ಲೈಯಿಂಗ್ ವಾಹನ ತಯಾರಿಕೆಗೆ ಒಡಂಬಡಿಕೆ

ತುರ್ತು ಸಂದರ್ಭ, ಮಹತ್ತರ ಸನ್ನಿವೇಶದಲ್ಲಿ ಬಳಕೆಗೆ ಅನುಕೂಲ

ಮೈಸೂರು,ಮೇ 18(ಎಂಟಿವೈ)– ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ಮತ್ತು ಪ್ರಿಂಟಲಿಟಿಕ್ಸ್ ಸಂಸ್ಥೆಯು ಮಾನವರಹಿತ ಯುಎವಿ ಮತ್ತು ಎಲೆಕ್ಟ್ರಿಕಲ್ ಫ್ಲೈಯಿಂಗ್ ವಾಹನಗಳ ತಯಾರಿಕೆಗಾಗಿ ಇ– ಪ್ಲೇನ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ವಿನ್ಯಾಸ್ ಸಂಸ್ಥೆಯ ಸಂಸ್ಥಾಪಕ ನರೇಂದ್ರ ನಾರಾಯಣ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ಈ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಮಾನವರಹಿತ ಹಾರುವ ವಾಹನ, ವಸ್ತುಗಳ ಸಾಗಾಟಕ್ಕೆ ಬಳಸುವ ಹಾರುವ ವಾಹನವನ್ನು ತಯಾರಿಸಲು ಮುಂದಾಗಿದ್ದೇವೆ. ವಿವಿಧ ಸಾಮರ್ಥ್ಯದ ಭಾರ ಹೊರುವ ಈ ಹಾರುವ ವಾಹನ ತುರ್ತು ಸಂದರ್ಭ ಸೇರಿದಂತೆ ಮಹತ್ತರ ಸನ್ನಿವೇಶದಲ್ಲಿ ಉಪಯೋಗಕಾರಿಯಾಗಲಿದೆ ಎಂದರು.

ಈ ಹಾರುವ ವಾಹನವನ್ನು ಎಲೆಕ್ಟ್ರಿಕಲ್ ಟ್ಯಾಕ್ಸಿಯಾಗಿಯೂ ಉಪಯೋಗಿಸಬಹುದಾಗಿದೆ. ಇದಕ್ಕೆ ಬೇಕಾದ ಎಲೆಕ್ಟ್ರಾನಿಕ್ಸ್ ಉಪಕರಣವನ್ನು ವಿನ್ಯಾಸ್ ಸಂಸ್ಥೆ ಒದಗಿಸಿದರೆ, ವಾಹನ ವಿನ್ಯಾಸವನ್ನು ಪ್ರಿಂಟಲಿಟಿಕ್ಸ್ ಸಂಸ್ಥೆ ಮಾಡಲಿದೆ. ಇ–ಪ್ಲೇನ್ ಸಂಸ್ಥೆ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಜೋಡಣೆ ಮಾಡಿ, ಹಾರುವ ವಾಹನಕ್ಕೆ ರೂಪ ನೀಡಲಿದೆ. ಈ ಒಪ್ಪಂದದ ಪ್ರಕಾರ ವಿನ್ಯಾಸ್ ಸಂಸ್ಥೆಯು ಇ–ಬೇಸ್ ಕಂಪನಿಯ ತಂತ್ರಜ್ಞಾನ ಮತ್ತು ಉತ್ಪಾದನಾ ಜ್ಞಾನವನ್ನು ಬಳಸಿಕೊಂಡು ತನ್ನ ಮೈಸೂರಿನ ಉತ್ಪಾದನಾ ಘಟಕದಲ್ಲಿ ಅತ್ಯಾಧುನಿಕ ಡ್ರೋನ್ ವ್ಯವಸ್ಥೆ ತಯಾರಿಕೆ, ಜೋಡಣೆ ನಡೆಸಲಾಗುವುದು. ಇದಲ್ಲದೆ ಸಂಸ್ಥೆ ವಿಶ್ವದಾದ್ಯಂತ ತನ್ನ ಗ್ರಾಹಕರಿಗೆ ಮಾರುಕಟ್ಟೆ ಸೇವೆ ಒದಗಿಸಲಿದೆ. ಈ ವಿದ್ಯುನ್ಮಾನ ಹಾರಾಟದ ವಿಮಾನ ಹಾಗೂ ವಾಹನಗಳನ್ನು ಭೂ ಭದ್ರತೆ, ಸರ್ವೆ ಮತ್ತು ಕಾವಲು, ವಿತರಣೆ, ರೈಲು ತಪಾಸಣೆ ಮತ್ತು ಚಾರಣ, ನಕ್ಷೀಕರಣ, ನಗರ ಪ್ರದೇಶದಲ್ಲಿ ತುರ್ತು ಪ್ರತಿಕ್ರಿಯೆಗಳನ್ನು ಪೂರೈಸಲು ಸಾಧ್ಯವಾಗುವಂತೆ ವಿನ್ಯಾಸಗೊಳಿಸಲಾಗುತ್ತಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಇ–ಪ್ಲೇನ್ ಕಂಪನಿಯ ಸ್ಥಾಪಕ ಸತ್ಯ ಚಕ್ರವರ್ತಿ ಹಾಗೂ ಪ್ರಿಂಟಲಿಟಿಕ್ಸ್ ಸಂಸ್ಥೆಯ ಕಿರಣ್ ಒಡಂಬಡಿಕೆಗೆ ಸಹಿ ಹಾಕಿದರು. ಈ ವೇಳೆ ಮೂರು ಸಂಸ್ಥೆಯ ಅಧಿಕಾರಿಗಳೂ ಉಪಸ್ಥಿತರಿದ್ದರು.

ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನಕ್ಕೆ ಆಗ್ರಹ

ಮೈಸೂರು, ಮೇ 18–ಹಳೆ ಮೈಸೂರು ಭಾಗದ ಪರಿವಾರ ನಾಯಕರ ಜನಾಂಗದ ಏಕೈಕ ಪ್ರತಿನಿಧಿ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸುವಂತೆ ನಾಯಕರ ಪಡೆ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ ಒತ್ತಾಯಿಸಿದ್ದಾರೆ.



ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಹಾಸನ ಜಿಲ್ಲೆಯು ಸೇರಿದಂತೆ ಕಾಂಗ್ರೆಸ್‌ನಿಂದ ಆಯ್ಕೆಯಾಗಿರುವ ಅನಿಲ್ ಚಿಕ್ಕಮಾದು ಏಕೈಕ ಶಾಸಕ ಹಾಗೂ ಎರಡನೇ ಬಾರಿಗೆ ಆಯ್ಕೆಯಾಗಿದ್ದು, ಯುವಕರು, ಸಂಘಟನಾ ಚತುರರು, ಹಳೇ ಮೈಸೂರು ಭಾಗದ ಸಮುದಾಯದ ಅಗ್ರಗಣ್ಯರಾಗಿದ್ದ ದಿವಂಗತ ಚಿಕ್ಕಮಾದು ಅವರ ಪುತ್ರ, ಸ್ವಾತಂತ್ರ್ಯ ಬಂದಾಗಿನಿಂದ ನಮ್ಮ ಮೈಸೂರಿನ ಪರಿವಾರ ನಾಯಕರಿಗೆ ಸಚಿವ ಸಂಪುಟದಲ್ಲಿ ಅವಕಾಶ ದೊರೆತಿಲ್ಲ. ಆದ್ದರಿಂದ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕೊಡಬೇಕು ಎಂದು ಮನವಿ ಮಾಡಿದ್ದಾರೆ.



ಮೈಸೂರು ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ನೇತೃತ್ವದಲ್ಲಿ ಕೇಕ್ ಕತ್ತರಿಸಿ, ಸಿಹಿ ವಿತರಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಮಾಜಿ ಮೇಯರ್ ಆರ್.ಲಿಂಗಪ್ಪ, ನಗರಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ವಿವಿಧ ವಾರ್ಡ್‌ಗಳ ಅಧ್ಯಕ್ಷರು, ಬ್ಲಾಕ್ ಅಧ್ಯಕ್ಷರು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಹಜ್ ಯಾತ್ರಾರ್ಥಿಗಳಿಗೆ ಆರೋಗ್ಯ ತಪಾಸಣೆ, ಲಸಿಕೆ



ಮೈಸೂರು, ಮೇ 18(ಆರ್‌ಕೆ)–ಸೌದಿ ಅರೇಬಿಯಾದ ಮೆಕ್ಕಾದ ಹಜ್ ಯಾತ್ರೆಗೆ ತೆರಳುವ ಮುಸ್ಲಿಂ ಯಾತ್ರಾರ್ಥಿಗಳಿಗೆ ಮೈಸೂರಿನ ಉದಯಗಿರಿಯಲ್ಲಿರುವ ಆರ್.ಕೆ.ಪ್ಯಾಲೇಸ್ ಹಾಲ್‌ನಲ್ಲಿ ಗುರುವಾರ ಬೆಳಗ್ಗೆ ಆರೋಗ್ಯ ತಪಾಸಣಾ ಮತ್ತು ಲಸಿಕಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮೈಸೂರು ಹಜ್ ಸಮಿತಿ ವತಿಯಿಂದ ಆಯೋಜಿಸಿದ್ದ ಶಿಬಿರದಲ್ಲಿ ಯಾತ್ರೆಗೆ ತೆರಳುವ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ನೂರಾರು ಮಂದಿಗೆ ಲಸಿಕೆ ನೀಡಲಾಯಿತು. ಮೈಸೂರಿನ ಸರ್ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಶರೀಫ್ ಅವರು ಹಜ್ ಯಾತ್ರಿಗಳಿಗೆ ಶುಭ ಕೋರಿದರು. ಸಮಿತಿಯ ಸಂಚಾಲಕ ಅಬ್ದುಲ್ ಅಜೀಜ್ ಚಂದ್, ಹಜರತ್ ಮೌಲಾನಾ ಮೊಹಮ್ಮದ್ ಜಕಾಉಲ್ಲಾ ಸಾಹೇಬ್ ಸಿದ್ದಿಖಿ, ಮೌಲಾನಾ ಕ್ವಾರಿ ಫಯಾಜ್ ಅಹಮದ್, ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಡಾ. ಶೀರಜ್ ಅಹಮದ್, ಕರ್ನಾಟಕ ರಾಜ್ಯ ಹಜ್ ಸಮಿತಿ ಅಧ್ಯಕ್ಷ ರೈಫುದ್ದಿನ್ ಕಚ್ರೇವಾಲ, ಸದಸ್ಯರಾದ ಮಾಯನುದ್ದಿನ್ ಪಾಷಾ, ಚಾಂದ್ ಪಾಷ, ಮೌಲಾನ್ ಉಮರ್ ಫಾರೂಕ್ ಹಾಗೂ ಇತರರು ಶಿಬಿರದಲ್ಲಿ ಪಾಲ್ಗೊಂಡಿದ್ದರು. ಆರೋಗ್ಯ ಇಲಾಖೆಯ ಡಾ. ಶೀರಜ್ ಅಹಮದ್, ಡಾ. ಜಯಂತ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಚೀಫ್ ಮ್ಯಾನೇಜರ್ ಕೃಷ್ಣರಾಜ್ ಕೀಲಂಜೆ ಭಟ್ ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಸಿಕೊಟ್ಟರು.

ನಾಳೆ ತಪಾಸಣಾ ಶಿಬಿರ

ಮೈಸೂರು, ಮೇ 18–ಮೈಸೂರಿನ ಶತಾಯು ಆಯುರ್ವೇದಿಕ್ ಕ್ಲಿನಿಕ್‌ನಲ್ಲಿ ಮೈಸೂರು ರೋಟರಿ ಸ್ಟಾರ್ಸ್ ಸಹಯೋಗದಲ್ಲಿ ಮೇ 20ರ ಬೆಳಗ್ಗೆ 10ರಿಂದ ಮಧ್ಯಾಹ್ನ 2.30ರವರೆಗೆ ಮಹಿಳೆಯರಿಗಾಗಿ ಉಚಿತ ಸ್ತ್ರೀರೋಗ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಮಹಿಳೆಯರ ಮಾಸಿಕ ಸಮಸ್ಯೆ, ಥೈರಾಯಿಡ್ ಮುಂತಾದ ಸಮಸ್ಯೆಗಳಿಗೆ ತಪಾಸಣೆ, ಸಲಹೆ ನೀಡಲಾಗುವುದು. ಆಸಕ್ತರು ಮೊ. 9341913583 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

ನಿಧನ

ಜಗದೀಶ್ ಗಂಗಡ್‌ಕರ್

ಮೈಸೂರು, ಮೇ 18–ಮೈಸೂರಿನ ಇಟ್ಟಿಗೆಗೂಡು ನಿವಾಸಿ ಜಗದೀಶ್ ಗಂಗಡ್‌ಕರ್(36) ಅವರು ಗುರುವಾರ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಪುತ್ರಿ, ಸೋದರ ಮಾವ ಗುತ್ತಿಗೆದಾರ ಪಿ.ವಿ.ರವಿಕುಮಾರ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಜೆಟಿಟಿಸಿ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾತಿ ಆರಂಭ, 29ರವರೆಗೆ ಅವಕಾಶ

ಮೈಸೂರು,ಮೇ 18(ಎಂಟಿವೈ)– ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜೆಟಿಟಿಸಿ)ದಲ್ಲಿ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾತಿ ಆರಂಭಿಸಲಾಗಿದೆ ಎಂದು ಜೆಟಿಟಿಸಿ ಕೇಂದ್ರದ ಡಿಪ್ಲೋಮ ವಿಭಾಗದ ಪ್ರಾಂಶುಪಾಲ ಎಸ್.ಎಸ್ ಜಗದೀಶ್‌ಕುಮಾರ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಣದೊಂದಿಗೆ ಉದ್ಯೋಗ ಭದ್ರತೆ ಕಲ್ಪಿಸುವ ಉದ್ದೇಶದಿಂದ ನಾಲ್ಕು ವರ್ಷಗಳ ಡಿಪ್ಲೊಮಾ ಟೂಲ್ ಮೇಕಿಂಗ್ ಮತ್ತು ಡಿಪ್ಲೊಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್ ಆರಂಭಿಸಲಾಗಿದೆ. ಈ ಸಾಲಿನ ದಾಖಲಾತಿ ಮೇ 9ರಿಂದಲೇ ಆರಂಭವಾಗಿದ್ದು, ಮೇ 29ರವರೆಗೆ ದಾಖಲಾಗಬಹುದಾಗಿದೆ. ಈ ಕೋರ್ಸ್ ಮಾಡಲು ವರ್ಷಕ್ಕೆ 47,500 ಶುಲ್ಕವಿದ್ದು, ಸ್ಕಾಲರ್‌ಶಿಪ್ ಮೂಲಕ ಶುಲ್ಕದ 90% ರಷ್ಟು ಶುಲ್ಕವನ್ನು ಸರ್ಕಾರವೇ ಮರುಪಾವತಿ ಮಾಡುತ್ತದೆ. ಇದರಿಂದ ಈ ಶಿಕ್ಷಣ ಬಹುತೇಕ ಉಚಿತವಾಗಿ ಸಿಕ್ಕಂತಾಗುತ್ತದೆ. ಉದ್ಯೋಗ ಭದ್ರತೆ ಇರುವುದರಿಂದ ಬಡ, ಮಧ್ಯಮ ಹಾಗೂ ಗ್ರಾಮೀಣ ಪ್ರದೇಶ ಮಕ್ಕಳಿಗೆ ಉಪಯುಕ್ತವಾಗಲಿದೆ. ನಿರುದ್ಯೋಗ ಸಮಸ್ಯೆ ಎಲ್ಲೆಡೆ ಕಂಡು ಬರುತ್ತಿರುವುದರಿಂದ ಈ 2 ಕೋರ್ಸ್ ಮಾಡುವುದರಿಂದ ಉದ್ಯೋಗ ಗಿಟ್ಟಿಸಿಕೊಳ್ಳಬಹುದು ಎಂದು ಹೇಳಿದರು.

ಜೆಟಿಟಿಸಿ ಮೈಸೂರು ಘಟಕದ ಅಧ್ಯಕ್ಷ ಹೊಬಯ್ಯ ಮಾತನಾಡಿ, ಯುವ ಜನರಿಗೆ ಶಿಕ್ಷಣ ನಂತರ ಉದ್ಯೋಗ ಒದಗಿಸುವ ಉದ್ದೇಶದಿಂದ ಕೌಶಲ್ಯ ತರಬೇತಿ ನೀಡಲು ಮುಂದಾಗಿದೆ. ಜೆಟಿಟಿಸಿ ಸಂಸ್ಥೆಯೊಂದಿಗೆ ಹಲವು ಯೋಜನೆಗಳನ್ನು ರೂಪಿಸಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ 1 ವರ್ಷ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಸಂಸ್ಥೆ ವತಿಯಿಂದ ನಡೆಸುತ್ತಿರುವ ಡಿಪ್ಲೊಮಾ ಕೋರ್ಸ್‌ನಲ್ಲಿ ತೇರ್ಗಡೆ ಗೊಂಡವರಿಗೆ ಶೇ.100ರಷ್ಟು ಉದ್ಯೋಗ ಸಿಕ್ಕಿದೆ. ಉತ್ಪಾದನಾ ಕಂಪನಿ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಹಲವರು ಉದ್ಯೋಗ ಪಡೆದಿದ್ದಾರೆ. ಕೋರ್ಸ್‌ಗೆ ಸಂಬಂಧಿಸಿದಂತೆ ಮಾಹಿತಿಗೆ 9945442654, 9449929667ಗೆ ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ಶ್ರೇಷ್ಠತಾ ಕೇಂದ್ರದ ವಿನಯ್ ಇದ್ದರು.




ಶಿಕಾರಿಪುರ ಕ್ಷೇತ್ರದ ನೂತನ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಕಾವೇರಿ ನಿವಾಸದಲ್ಲಿ ಶಾಲು ಹೊದಿಸಿ, ಹಾರ ಹಾಕಿ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಭಿನಂದಿಸಿದರು. ಈ ವೇಳೆ ನಿಖಿಲ್, ವಿನೋದ್, ಶಿವಕುಮಾರ್, ಸಂದೇಶ್, ಕಿರಣ್, ವೇಣು ಉಪಸ್ಥಿತರಿದ್ದರು.

ಹೂವಿನ ವ್ಯಾಪಾರಿ ನಾಪತ್ತೆ



ಮೈಸೂರು: ಹೂವಿನ ವ್ಯಾಪಾರಕ್ಕೆಂದು ಮನೆಯಿಂದ ತೆರಳಿದ ವ್ಯಕ್ತಿ ನಾಪತ್ತೆಯಾಗಿರುವ ಪ್ರಕರಣ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಮೈಸೂರಿನ ಸುಭಾಷ್‌ನಗರದ ನಿವಾಸಿ ಕೆಂಪಣ್ಣ (43) ನಾಪತ್ತೆಯಾದ ವ್ಯಕ್ತಿ. ಹೂವಿನ ವ್ಯಾಪಾರಕ್ಕೆಂದು ತೆರಳಿದ್ದು, ಮನೆಗೆ ಹಿಂದಿರುಗಿಲ್ಲ ಎಂದು ಕೆಂಪಣ್ಣ ಅವರ ಪತ್ನಿ ಭಾಗ್ಯಮ್ಮ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ.0821–2418339 ಸಂಪರ್ಕಿಸುವಂತೆ ಕೋರಲಾಗಿದೆ.




ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಶ್ರೀವತ್ಸ ಅವರನ್ನು ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘದಿಂದ ಅಭಿನಂದಿಸಲಾಯಿತು. ಈ ವೇಳೆ ಮುಖಂಡರಾದ ಉಮೇಶ್, ಸಂಘದ ಅಧ್ಯಕ್ಷ ಅಂಕಯ್ಯ, ಕಾರ್ಯದರ್ಶಿ ಎಚ್.ಜಿ.ರಾಜಣ್ಣ, ಸದಸ್ಯರಾದ ಎಂ.ಜಿ. ಪ್ರಭು, ನಿತೇಶ್‌ಕುಮಾರ್, ನಾಗಲಿಂಗಸ್ವಾಮಿ, ಆಕಾಶ್ ಇನ್ನಿತರರು ಹಾಜರಿದ್ದರು.



ನಂಜನಗೂಡು ಮೀಸಲು ಕ್ಷೇತ್ರದ ನೂತನ ಶಾಸಕ ದರ್ಶನ್ ಧ್ರುವನಾರಾಯಣ್ ಅವರನ್ನು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಸಂಚಾಲಕ ಪಿ.ರಾಜು, ಇತಿಹಾಸ ತಜ್ಞ ಪ್ರೊ. ನಂಜರಾಜ ಅರಸು, ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಕೆ.ಶಿವಕುಮಾರ್, ಕನ್ನಡ ಹೋರಾಟಗಾರ ಅರವಿಂದ್ ಶರ್ಮ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.5.2023 ಶುಕ್ರವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜು:** ಬೆಳಗ್ಗೆ 10.30ಕ್ಕೆ ಅಂತರ ಕಾಲೇಜು ಹಬ್ಬ, ವಿಷಯ : ವಿಶ್ವ ಪರಿಸರ, ತೀರ್ಪುಗಾರರು: ಡಾ.ವಿ.ದೀಪಾ, ಡಾ.ಜಿ.ವಿ.ನರಸಿಂಹನ್, ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮಹಾರಾಣಿ ಸರ್ಕಾರಿ ಪಿಯು ಕಾಲೇಜು ಪ್ರಿನ್ಸಿಪಾಲ್ ಎಂ.ಸೋಮಣ್ಣ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಶಾರದ, ಉಪಸ್ಥಿತರು: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ.ಶಿವರಾಜಪ್ಪ, ಉಪ ಪ್ರಾಂಶುಪಾಲ ಡಾ.ಜಿ.ಪ್ರಸಾದಮೂರ್ತಿ, ಡಾ.ಎನ್.ಜಿ.ಲೋಕೇಶ್, ಸ್ಥಳ: ಶ್ರೀ ನಟರಾಜ ಸಭಾ ಭವನ.

■ **ಚೇತನ ಬುಕ್‌ಹೌಸ್ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಪರಿಕಲ್ಪನೆಯಲ್ಲಿ ಹೊರತಂದಿರುವ 'ದಿನಕ್ಕೊಂದು ಪೌರಾಣಿಕ ಕತೆ' ಮಕ್ಕಳಿಗಾಗಿ ಪೌರಾಣಿಕ ಕತೆಗಳ ವಿಶೇಷ ಪುಸ್ತಕಗಳ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಕೃತಿ ಕುರಿತು ಮಾತನಾಡುವವರು : ಹಿರಿಯ ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಉಪಸ್ಥಿತರು : ಕೃತಿ ಲೇಖಕ ಡಾ. ಬೆ.ಗೋ. ರಮೇಶ್, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪತ್ರಕರ್ತ ಜಿ.ಆರ್. ಸತ್ಯಲಿಂಗರಾಜು, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ:** ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ತೆಲುಗು ಮತ್ತು ಕನ್ನಡ ಕವಿಗಳ ಪಾತ್ರ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು: ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಪ್ರಾಜೆಕ್ಟ್ ಡೈರೆಕ್ಟರ್ ಪ್ರೊ.ಎನ್.ಎಂ.ತಳವಾರ್, ಪ್ರಾಸ್ತಾವಿಕ ನುಡಿ: ತೆಲ್ಲಾ ಅರುಣಕುಮಾರಿ, ಉಪಸ್ಥಿತರು: ಪ್ರೊ.ಎಂ.ರಾಮನಾಥಮ್ ನಾಯ್ಡು, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಜೆಎಸ್‌ಎಸ್ ಮಹಾವಿದ್ಯಾಪೀಠ :** ಅಧ್ಯಯನ ಶಿಬಿರ, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ್ಯ, ಉಪನ್ಯಾಸ–1, ಡಾ. ಮೃತ್ಯುಂಜಯ ರುಮಾಲೆ ಅವರಿಂದ ಸಮಕಾಲೀನ ಅಗತ್ಯ, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ಬೆಳಗ್ಗೆ 10 ರಿಂದ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾಂಸರಾದ ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿಗಳವರ ಬೃಂದಾವನ ಸನ್ನಿಧಾನ, ಕೃಷ್ಣಮೂರ್ತಿಪುರಂ :** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ಕಪಿಲಾಚಾರ್ಯ ಗಲಗಲಿ, ಧಾರವಾಡ ಅವರಿಂದ ಶ್ರೀಮದ್ಭಾಗವತ ಪ್ರವಚನ, ಸ್ಥಳ: ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣ, ಸಂಜೆ 6ಕ್ಕೆ.

■ **ಗಾನಭಾರತೀ :** ಸಂಜೆ 6 ರಿಂದ ವಿದ್ವಾನ್ ಸಾಗರ್ ತುಮಕೂರು ಅವರಿಂದ ಭರತನಾಟ್ಯ, ಸಂಜೆ 7 ರಿಂದ ವಿದ್ವಾನ್ ಕಣ್ಣನ್ ಮೈಸೂರು ಅವರಿಂದ ಭರತನಾಟ್ಯ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ನಿರಂತರ ಫೌಂಡೇಷನ್:** ರಂಗ ವಸಂತ–2023, ಉದ್ಘಾಟನೆ: ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಅಧ್ಯಕ್ಷ ಆರ್.ರಘು, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ನಿರಂತರದ ಪ್ರಸಾದ ಕುಂದೂರು, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.15ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ಪ್ರಶಿಕ್ಷಣಾರ್ಥಿಗಳಿಂದ ಕಲವಿಂಕ ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ಸಂಗೀತ : ಅಮಿತ್ ಜೆ. ರೆಡ್ಡಿ, ಸುಬ್ರಹ್ಮಣ್ಯ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು–ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್ ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ ಪ್ರಸ್ತುತಿ–ಡಾ.ಬಿ.ವಿ.ವಸಂತಕುಮಾರ್, 7.15 ಭಾವಗೀತೆಗಳು–ಹೆಚ್.ಕೆ.ನಾರಾಯಣ, ಅರ್ಚನಾ ಉಡುಪ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಎಂ.ಚಂದ್ರಶೇಖರನ್–ವಯೋಲಿನ್, 11.30 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ–ಪುತ್ತೂರು ನರಸಿಂಹ ನಾಯಕ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್. 1.20 ಭಾವಗೀತೆ–ಕೆ.ಎಸ್.ಸುರೇಖಾ, 2.50 ಸಿರಿಗನ್ನಡಂ ಗೆಲ್ಗೆ–ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು– ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾ ರಂಗ–"ಕೈಗನ್ನಡಿ", ಪ್ರಸ್ತುತಿ–ನಿಶಿತಾ ಕೃಷ್ಣಸ್ವಾಮಿ, 4.30 ವೃತ್ತಿ ಮಾರ್ಗದರ್ಶನ–ಸೂಕ್ಷ್ಮಜೀವಿ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸುಮನಾ ಕೆ.ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ಹವಾಮಾನ ಆಧಾರಿತ ಕೃಷಿ ತಂತ್ರಜ್ಞಾನಗಳು ಕುರಿತು ಡಾ.ಕೆ.ವಿ.ಕೇಶವಯ್ಯ ಅವರೊಂದಿಗೆ ಸಂದರ್ಶನ. 8.00 ರಸಮಂಜರಿ, 9.15 ಜಾನಪದಸಂಗೀತ–ಚಾಮಮ್ಮ ಮತ್ತು ಸಂಗಡಿಗರು, 10.30 ವಾದ್ಯವೃಂದ–ನಿಲಯದ ಕಲಾವಿದರಿಂದ 10.30 ಸವಿನೆನಪು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 19 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 33 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಸಿದ್ದರಾಮಯ್ಯ ಮುಖ್ಯಮಂತ್ರಿ

ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ

ನಾಳೆ ಪ್ರಮಾಣವಚನ ಸ್ವೀಕಾರ

ಕೊನೆಗೂ ಸೋನಿಯಾ ಗಾಂಧಿ ಸಂಧಾನ ಸೂತ್ರ ಯಶಸ್ವಿ



ಸೋನಿಯಾ ಗಾಂಧಿ ಸಂಧಾನದಂತೆ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ನಿರ್ಣಯವಾದ ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉಭಯ ನಾಯಕರೊಂದಿಗೆ ಒಗ್ಗಟ್ಟು ಪ್ರದರ್ಶಿಸಿದರು.

ಬೆಂಗಳೂರು, ಮೇ 18(ಕೆಎಂಶಿ)–ರಾಜ್ಯ ಕಾಂಗ್ರೆಸ್ ಹಿರಿಯ ನಾಯಕ ಸಿದ್ದರಾಮಯ್ಯ ಅವರನ್ನು ಕರ್ನಾಟಕದ ಮುಖ್ಯಮಂತ್ರಿಯನ್ನಾಗಿಯೂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿ, ಎಐಸಿಸಿ ದೆಹಲಿಯಲ್ಲಿ ಇಂದು ಅಧಿಕೃತವಾಗಿ ಪ್ರಕಟಿಸಿತು. ಮೇ 20ರಂದು ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಜನಸ್ತೋಮ ಸಭೆಯಲ್ಲಿ ಉಭಯ ನಾಯಕರು ಅಧಿಕಾರ, ಗೌಪ್ಯತಾ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅಂದು ಮಧ್ಯಾಹ್ನ 12.30ಕ್ಕೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ನೂತನ ಮುಖ್ಯಮಂತ್ರಿ ಸೇರಿದಂತೆ ಸಂಪುಟ ಸದಸ್ಯರಿಗೆ ಪ್ರಮಾಣವಚನ ಬೋಧಿಸಲಿದ್ದಾರೆ.

ಕಳೆದ ನಾಲ್ಕು ದಿನಗಳಿಂದ ದೆಹಲಿಯಲ್ಲಿ ನಾಯಕತ್ವಕ್ಕಾಗಿ ನಡೆದ ಮುಸುಕಿನ ಗುದ್ದಾಟಕ್ಕೆ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾಗಾಂಧಿ ಮಧ್ಯೆ ಪ್ರವೇಶಿಸಿದ ನಂತರ ಇಂದು ಮುಂಜಾನೆ 2 ಗಂಟೆಗೆ ನಾಯಕತ್ವದ ವಿವಾದ ಬಗೆಹರಿದಿದೆ.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅಭ್ಯರ್ಥಿಗಳ ಘೋಷಣೆ ಮಾಡಿದ ನಂತರ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಶಾಸಕಾಂಗ ಪಕ್ಷದ ನಾಯಕರಾಗಿ ಸಿದ್ದರಾಮಯ್ಯ ಆಯ್ಕೆಗೊಂಡಿದ್ದಾರೆ. ಅವರ ನೇತೃತ್ವದ ಸರ್ಕಾರ ರಚನೆಗೆ ಅವಕಾಶ ಕಲ್ಪಿಸುವಂತೆ ಪತ್ರವೊಂದನ್ನು ಮಾಜಿ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರ ಮೂಲಕ ರಾಜಭವನಕ್ಕೆ ಕಳುಹಿಸಿದರು. ಅದರಂತೆ ಡಾ.ಪರಮೇಶ್ವರ್ ರಾಜಭವನಕ್ಕೆ ತೆರಳಿ ರಾಜ್ಯಪಾಲರ ಭೇಟಿ ಮಾಡಿ, ಪತ್ರ ಸಲ್ಲಿಸಿದರು. ಸರ್ಕಾರ ರಚನೆಗೆ ಹಕ್ಕು ಪ್ರತಿಪಾದನೆ ಮಾಡಿದ್ದಲ್ಲದೆ, ವಿಧಾನಸಭೆಯಲ್ಲಿ ಬಹುಮತ ಪಡೆದಿರುವ ನಮ್ಮ ಪಕ್ಷಕ್ಕೆ ಸರ್ಕಾರ ರಚನೆಗೆ ಆಹ್ವಾನ ನೀಡಬೇಕು ಹಾಗೂ ಈ ಸರ್ಕಾರದ ನಾಯಕತ್ವವನ್ನು ಸಿದ್ದರಾಮಯ್ಯ ಅವರು ವಹಿಸಲಿದ್ದು, ಅವರಿಗೆ ● 9ನೇ ಪುಟಕ್ಕೆ

ಸಿಎಂ, ಡಿಸಿಎಂ ಜೊತೆ 12 ಸಚಿವರ ಪ್ರಮಾಣ

ಬೆಂಗಳೂರು, ಮೇ 18 (ಕೆಎಂಶಿ)– ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲೇ 12 ಸದಸ್ಯರು ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸಿಎಲ್‌ಪಿ ನಾಯಕನ ಆಯ್ಕೆ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಸಿದ್ದರಾಮಯ್ಯ ಮತ್ತು ಶಿವಕುಮಾರ್, ಸರ್ಕಾರ ರಚನೆ ಕುರಿತಂತೆ ಗುರುವಾರ ಬೆಳಗ್ಗೆ ದೆಹಲಿಯಲ್ಲಿ ಚರ್ಚೆ ನಡೆಸಿದರು. ಸಮಾರಂಭಕ್ಕೆ ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಮುಖ್ಯಮಂತ್ರಿಗಳು ಹಾಗೂ ಬಿಜೆಪಿಯೇತರ ● 9ನೇ ಪುಟಕ್ಕೆ

ಶಾಸಕಾಂಗ ಪಕ್ಷದ ನಾಯಕರಾಗಿ ಸಿದ್ದರಾಮಯ್ಯ ವಿಧ್ಯುಕ್ತ ಆಯ್ಕೆ; ರಾಜ್ಯಪಾಲರಲ್ಲಿ ಸರ್ಕಾರ ರಚನೆ ಹಕ್ಕು ಪ್ರತಿಪಾದನೆ

ನಾಳೆ ಪ್ರಮಾಣ ವಚನ ಸ್ವೀಕಾರಕ್ಕೆ ರಾಜ್ಯಪಾಲರ ಆಹ್ವಾನ



ಬೆಂಗಳೂರು, ಮೇ 18–ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಸಿದ್ದರಾಮಯ್ಯ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಡಗೂಡಿ ಒಂದೇ ಕಾರಿನಲ್ಲಿ ರಾಜಭವನಕ್ಕೆ ಆಗಮಿಸಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಇದನ್ನು ಪುರಸ್ಕರಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮೇ 20ರಂದು ಮಧ್ಯಾಹ್ನ 12.30ಕ್ಕೆ ಕಂಠೀರವ ಸ್ಟೇಡಿಯಂನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸುವಂತೆ ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದ್ದಾರೆ. ಅಲ್ಲದೇ ರಾಜ್ಯಪಾಲರು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಇದೇ ವೇಳೆ ಸಿಹಿ ತಿನಿಸಿ, ಶುಭ ಕೋರಿದರು. ಇದಕ್ಕೂ ಮುನ್ನ ಸಿದ್ದರಾಮಯ್ಯ, ಡಿಕೆಶಿವಕುಮಾರ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಅವರು ದೆಹಲಿಯಿಂದ ವಿಶೇಷ ವಿಮಾನದಲ್ಲಿ ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ಇವರನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ ಪುಷ್ಪವೃಷ್ಟಿಗರೆದು ಅದ್ದೂರಿಯಾಗಿ ಬರಮಾಡಿಕೊಂಡರು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ತಮ್ಮ ತಮ್ಮ ನಿವಾಸಗಳಿಗೆ ತೆರಳಿ ಕೆಲ ನಿಮಿಷ ವಿಶ್ರಾಂತಿ ಪಡೆದು ಶಾಸಕಾಂಗ ಪಕ್ಷದ ಸಭೆ ಏರ್ಪಡಿಸಿದ್ದ ಕ್ವೀನ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯ ಇಂದಿರಾಗಾಂಧಿ ಭವನಕ್ಕೆ ಆಗಮಿಸಿದರು. ಇತರ ಶಾಸಕರೊಂದಿಗೆ ಸಿದ್ದರಾಮಯ್ಯ ಮುಖ್ಯ ದ್ವಾರದಲ್ಲೇ ಸಭಾಂಗಣ ಪ್ರವೇಶಿಸಿದರೆ, ಡಿ.ಕೆ.ಶಿವಕುಮಾರ್ ವಾಸ್ತುಪ್ರಕಾರ ಕೆಪಿಸಿಸಿ ಕಚೇರಿಯ ಎಡ ಭಾಗದಲ್ಲಿರುವ ಪ್ರತ್ಯೇಕ ದ್ವಾರದ ಮೂಲಕ ಸಭಾಂಗಣ ಪ್ರವೇಶಿಸಿದರು. 25 ನಿಮಿಷ ಕಾಲ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವರು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಸಿದ್ದರಾಮಯ್ಯ ಅವರ ಹೆಸರನ್ನು ಪ್ರಸ್ತಾಪಿಸಿದರೆ, ಡಾ. ಜಿ.ಪರಮೇಶ್ವರ್, ಹೆಚ್.ಕೆ.ಪಾಟೀಲ್, ಆರ್.ವಿ. ದೇಶಪಾಂಡೆ, ಎಂ.ಬಿ.ಪಾಟೀಲ್, ಕೆ.ಹೆಚ್. ಮುನಿಯಪ್ಪ, ತನ್ವೀರ್ ಸೇಠ್, ಲಕ್ಷ್ಮೀ ಹೆಬ್ಬಾಳ್ಕರ್ ಅನುಮೋದಿಸಿದರು. ಈ ಪ್ರಸ್ತಾವನೆಯನ್ನು ● 9ನೇ ಪುಟಕ್ಕೆ


ಒಂಟಿಕೊಪ್ಪಲಲ್ಲಿ ರೌಡಿಶೀಟರ್

ಚಂದ್ರು ಭೀಕರ ಹತ್ಯೆ

● ಹುಣಸೂರು ಜೋಡಿಕೊಲೆ, ಪಡುವಾರಹಳ್ಳಿ 'ದೇವು' ಹತ್ಯೆ ಪ್ರಕರಣದಲ್ಲಿ ದೋಷಮುಕ್ತನಾಗಿದ್ದ ಚಂದ್ರು ● ಬೈಕ್‌ನಲ್ಲಿ ಬಂದ ನಾಲ್ಕೈದು ಮಂದಿಯಿಂದ ಹಾಡಹಗಲೇ ಮಾರಕಾಸ್ತ್ರಗಳಿಂದ ದಾಳಿ

ಮೈಸೂರು, ಮೇ 18(ಎಸ್‌ಬಿಡಿ)– ಹುಣಸೂರು ಜೋಡಿಕೊಲೆ ಹಾಗೂ ಪಡುವಾರಹಳ್ಳಿ ದೇವು ಹತ್ಯೆ ಪ್ರಕರಣಗಳಲ್ಲಿ ದೋಷಮುಕ್ತನಾಗಿದ್ದ ರೌಡಿ ಶೀಟರ್ ಚಂದ್ರುನನ್ನು, ಇಂದು ಹಾಡಹಗಲೇ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಮೈಸೂರಿನ ಒಂಟಿಕೊಪ್ಪಲು ಮುಖ್ಯ ರಸ್ತೆ(ಕಾಳಿದಾಸ ರಸ್ತೆ) 2ನೇ ಕ್ರಾಸ್ ಬಳಿ 'ಮೂನ್ ಡ್ರೆಸ್‌ವೇರ್ಸ್' ಟೈಲರ್ ಅಂಗಡಿ ಮುಂಭಾಗ ಗುರುವಾರ ಸಂಜೆ ಸುಮಾರು 5 ಗಂಟೆ ಸಮಯ ಚಂದ್ರು ಅಲಿಯಾಸ್ ಚಂದು (45), ಟೈಲರ್ ಜೊತೆ ಮಾತನಾಡುತ್ತಾ ಕುಳಿತಿದ್ದಾಗ ಹಂತಕರು ಮಾರಕಾಸ್ತ್ರಗಳಿಂದ ದಾಳಿ ನಡೆಸಿದ್ದಾರೆ. ದ್ವಿಚಕ್ರ ವಾಹನಗಳಲ್ಲಿ ಬಂದ ನಾಲ್ಕೈದು ● 6ನೇ ಪುಟಕ್ಕೆ



ಹತ್ಯೆಯಾದ ಚಂದ್ರು



ಸ್ಥಳ ಪರಿಶೀಲಿಸಿದ ನಗರ ಪೊಲೀಸ್ ಆಯುಕ್ತ ರಮೇಶ್

ಓದುಗರ ಗಮನಕ್ಕೆ

ತಿದ್ದುಪಡಿ

ನಿನ್ನೆಯ, ಮೇ 18 ಗುರುವಾರ 2023ರ 'ಮೈಸೂರು ಮಿತ್ರ' ಸಂಚಿಕೆಯ 4ನೇ ಪುಟದಲ್ಲಿ ಪ್ರಕಟವಾಗಿದ್ದ **ವಿಕ್ರಂ ಮುತ್ತಣ್ಣ** ಅವರ **ಬಿಚ್ಚುನುಡಿ** ಅಂಕಣದಲ್ಲಿ ಕೆಲವು ತಪ್ಪುಗಳು ಕಣ್ತಪ್ಪಿನಿಂದಾಗಿ ಆಗಿವೆ. ಹಾಗಾಗಿ ಅದರ ಶೀರ್ಷಿಕೆಯನ್ನು **"ಜನಾದೇಶ 2023, ಕಲಿಸಿದ ಪಾಠಗಳು ಮತ್ತು ಕೊಟ್ಟ ಎಚ್ಚರಿಕೆ"** ಎಂದು ಓದಿಕೊಳ್ಳುವುದು. ಹಾಗೆಯೇ ಅಂಕಣದ ಎರಡನೇ ಕಾಲಂನ ಕೊನೆ ಎರಡು ಸಾಲನ್ನು ಈ ರೀತಿ ಓದಿಕೊಳ್ಳುವುದು.

"ಕರ್ನಾಟಕದಲ್ಲಿ 'ಮೋದಿ ಮಂತ್ರ'ದಿಂದ ಪ್ರಯೋಜನವಿಲ್ಲ. ಏನಿದ್ದರೂ 'ಯಡ್ಡಿ ತಂತ್ರ' ಮಾತ್ರ ಕೆಲಸ ಮಾಡುತ್ತದೆ."

ಕಣ್ತಪ್ಪಿನಿಂದಾದ ಈ ಪ್ರಮಾದಗಳಿಗೆ ಓದುಗರ ಕ್ಷಮೆ ಇರಲಿ. –**ಸಂ.**

ಹತ್ಯೆಗೆ ಸಂಬಂಧಿಸಿದಂತೆ ಆರೋಪಿಗಳ ಸುಳಿವು ಸಿಕ್ಕಿದೆ

ಪೊಲೀಸ್ ಆಯುಕ್ತ ಬಿ.ರಮೇಶ್ ಮಾಹಿತಿ

ಮೈಸೂರು: ಚಂದ್ರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಳಿವು ಸಿಕ್ಕಿದ್ದು ಆರೋಪಿಗಳ ಪತ್ತೆ ಹಚ್ಚಿದ ಬಳಿಕ ಘಟನೆಗೆ ನಿಖರ ಕಾರಣ ತಿಳಿಯಲಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ಸ್ಥಳ ಪರಿಶೀಲನೆ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಂಜೆ ಸುಮಾರು 4.45ರಿಂದ 5 ಗಂಟೆ ಸಮಯದಲ್ಲಿ ಟೈಲರ್ ಅಂಗಡಿ ಮುಂದೆ ಚಂದ್ರು ಕುಳಿತಿದ್ದಾಗ ಅಪರಿಚಿತರು ದ್ವಿಚಕ್ರ ವಾಹನಗಳಲ್ಲಿ ಬಂದು ಹಲ್ಲೆ ಮಾಡಿದ್ದಾರೆ. ಇಲ್ಲಿಂದ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಚಂದ್ರು ಸಾವನ್ನಪ್ಪಿದ್ದು ಮೃತದೇಹವನ್ನು ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ಸ್ಥಳಾಂತರ ಮಾಡಲಾಗಿದೆ. ಆರೋಪಿಗಳ ಪತ್ತೆಗೆ ● 9ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಗೆಳೆಯ : "ಪ್ರಾಣಿ ಸಂಗ್ರಹಾಲಯದಲ್ಲಿನ ಸಿಂಹದ ಪಂಜರದೊಳಗೆ ಹೋಗಿ ಅಲ್ಲಿ ಒಂದು ಗಂಟೆ ಇದ್ದು ಹೊರಗೆ ಬರಬಹುದಾ?"

ಆತ : "ಖಂಡಿತ! ನನಗೆ ಆ ಧೈರ್ಯ ಇದೆ. ಆದರೆ ಆ ಸಮಯದಲ್ಲಿ ಸಿಂಹ ಪಂಜರದೊಳಗೆ ಇರಬಾರದು, ಅಷ್ಟೆ!"

ಮೈಸೂರು ಮಿತ್ರ

ಶುಕ್ರವಾರ, 19 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆ ಇದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೆ ತಾನೇ ಒದಗುತ್ತವೆ. – ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿವಂತನೇ ಬಲವಂತ

ನಿಮ್ಮ ಪತ್ರಗಳು

ಯಮಸ್ವರೂಪಿ ಗುಂಡಿಯನ್ನು ಮುಚ್ಚಿಸಿ



ಮಾನ್ಯರೆ,

ಮೈಸೂರು–ಬನ್ನೂರು ಮುಖ್ಯ ರಸ್ತೆಯಲ್ಲಿ, ಗಿರಿಯಾಬೋವಿಪಾಳ್ಯ ಗೇಟಿನ ನಂತರ ಸಿದ್ದಾರ್ಥ ಬಡಾವಣೆಗೆ ತಿರುಗುವ ಸಮೀಪ ರಸ್ತೆಯ ಮಧ್ಯ ಒಂದು ಅಡಿಯಷ್ಟು ಆಳದ ಗುಂಡಿಯು ಸುಮಾರು ಒಂಬತ್ತು ತಿಂಗಳಿಂದಲೂ ಅಪಾಯ ಕಾರಿಯಾಗಿದೆ. ಇಲ್ಲಿಯವರೆಗೂ ಇದನ್ನು ಮುಚ್ಚುವುದಕ್ಕೆ ಸಂಬಂಧಿಸಿದವರು ಕ್ರಮ ವಹಿಸಿರುವುದಿಲ್ಲ. ಹಾಲಿನ ಡೈರಿಯಿಂದ ರಿಂಗ್ ರಸ್ತೆಯ ವೃತ್ತದವರೆಗೂ ಗುಂಡಿಗಳಿಲ್ಲದೆ ರಸ್ತೆ ಚೆನ್ನಾಗಿರುವುದರಿಂದ ವೇಗವಾಗಿ ಬರುವ ವಾಹನಗಳು ವಿಶೇಷವಾಗಿ ದ್ವಿಚಕ್ರ ವಾಹನಗಳು ಆಗಾಗ್ಗೆ ಅಪಘಾತಕ್ಕೀಡಾಗುತ್ತಿವೆ. ಸ್ವತಃ ನಾನೇ ಈ ಗುಂಡಿಗೆ ನನ್ನ ದ್ವಿಚಕ್ರ ವಾಹನ ಇಳಿಸಿ ಸ್ವಲ್ಪದರಲ್ಲಿ ಪಾರಾಗಿದ್ದೇನೆ. ಇತ್ತೀಚೆಗೆ ಬಿದ್ದ ಮಳೆಯ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಬ್ಬರು ರಾತ್ರಿ ವೇಳೆ ನೀರಿನಿಂದ ತುಂಬಿದ್ದ ಇದೇ ಗುಂಡಿಗೆ ಸ್ಕೂಟರ್ ಇಳಿಸಿ, ಗಾಡಿ ಸಮೇತ ಬಿದ್ದು ಒದ್ದಾಡುವುದನ್ನು ಕಣ್ಣಾರೆ ಕಂಡೆ. ಈ ಭಾಗದ ಜನಪ್ರತಿನಿಧಿಗಳು ಇತ್ತ ಗಮನ ಹರಿಸಿ ಗುಂಡಿಯನ್ನು ಮುಚ್ಚಿಸಿ ನಿತ್ಯವೂ ಸಂಭವಿಸುತ್ತಿರುವ ಅಪಘಾತಗಳನ್ನು ತಪ್ಪಿಸುವುದು.

–ಮಿರ್ಲೆ ಚಂದ್ರಶೇಖರ, ಮೈಸೂರು.

ಖಾಸಗಿ ಸುದ್ದಿ ಚಾನಲ್‌ಗಳ ಸುದ್ದಿ ಭರಾಟೆ ಗೊಂದಲ

ಮಾನ್ಯರೆ,

ಕೆಲವು ಖಾಸಗಿ ಸುದ್ದಿ ಚಾನಲ್‌ಗಳು ನಿಖರವಾದ ಮಾಹಿತಿ ಪಡೆದುಕೊಳ್ಳದೇ, ಸುದ್ದಿ ಪ್ರಸಾರ ಮಾಡಿ ಸಾರ್ವಜನಿಕರನ್ನು ಗೊಂದಲಕ್ಕೀಡು ಮಾಡುತ್ತಿವೆ.

ನಿನ್ನೆ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕೇಂದು ದೆಹಲಿಯಲ್ಲಿ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆಯುತ್ತಿರುವಾಗಲೇ ಸಿದ್ದರಾಮಯ್ಯ ಮುಂದಿನ ಸಿಎಂ ಆಗಿ, ಡಿಸಿಎಂ ಆಗಿ ಡಿ.ಕೆ.ಶಿವಕುಮಾರ್ ಆಯ್ಕೆ ಮಾಡಲಾಗಿದೆ. ನಾಳೆ (ಗುರುವಾರ) ಮಧ್ಯಾಹ್ನ 3.30 ಕ್ಕೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿದೆ ಎಂದು ಸುದ್ದಿ ಹಬ್ಬಿಸಿದರು.

ಇದಾದ ಅರ್ಧ ಗಂಟೆಯ ಸುಮಾರಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸುದ್ದಿಗೋಷ್ಠಿಯಲ್ಲಿ ಕರ್ನಾಟಕದ ನೂತನ ಮುಖ್ಯಮಂತ್ರಿ ವಿಚಾರವಾಗಿ ಇನ್ನೂ ಏನು ತೀರ್ಮಾನವಾಗಿಲ್ಲ. ಇನ್ನು ಚರ್ಚೆ ನಡೆಯುತ್ತಿದೆ. ಮುಂದಿನ 48 ಗಂಟೆಯೊಳಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಯಾರು ಯಾವುದೇ ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದರು.

ಇದಕ್ಕೂ ಮೊದಲು, ಕೆಲವು ಚಾನಲ್‌ನವರು ಸಿದ್ದರಾಮಯ್ಯ ಅವರ ತವರು, ಸಿದ್ದರಾಮನ ಹುಂಡಿಯಲ್ಲಿ ಅವರ ಸಹೋದರರು, ಆಪ್ತರು ಮತ್ತು ಕೆಲವು ಗ್ರಾಮಸ್ಥರನ್ನು ಸಂದರ್ಶಿಸಿದ್ದು ಆಯಿತು. ಈ ಸುದ್ದಿ ನಮ್ಮ ಚಾನಲ್‌ನಲ್ಲೇ ಮೊದಲು ಎನ್ನುವುದು, ಹೀಗೆ ಹಸಿ ಸುಳ್ಳುಗಳನ್ನು ಬಿತ್ತರಿಸುವುದು ಎಷ್ಟರ ಮಟ್ಟಿಗೆ ಸರಿ? ಕೇಂದ್ರ ಸರ್ಕಾರದ, ವಾರ್ತಾ ಮತ್ತು ಪ್ರಚಾರ ಇಲಾಖೆ ಇಂತಹದ್ದಕ್ಕೆ ಕಡಿವಾಣ ಹಾಕಲು ಸಾಧ್ಯವಿಲ್ಲವೇ?

ಹಿಂದೊಮ್ಮೆ ಮಾಜಿ ಪ್ರಧಾನಮಂತ್ರಿ ದಿ. ಅಟಲ್ ಬಿಹಾರಿ ವಾಜಪೇಯಿ ಅವರು ನಿಧನಕ್ಕೆ ಮೂರು ದಿನಗಳ ಮುಂಚಿತವಾಗಿಯೇ ಅವರು ನಿಧನರಾದರೆಂದು ಬಿತ್ತರಿಸಿ, ನಂತರ ಸಾರ್ವಜನಿಕರ ಕ್ಷಮೆ ಕೇಳಲಾಗಿತ್ತು. ಇನ್ನು ಮುಂದಾದರೂ ನಿಖರ ಮಾಹಿತಿ ಪಡೆದು ಸುದ್ದಿ ಪ್ರಕಟಿಸಿ, ಸಾರ್ವಜನಿಕ ವಿಶ್ವಾಸ ಗಳಿಸುವಂತಾಗಲಿ.

– ಬೂಕನಕೆರೆ ವಿಜೇಂದ್ರ, ಮೈಸೂರು

ರೂಟ್ ನಂ.304ರ ಲೇಡಿ ಕಂಡಕ್ಟರ್ ಸಭ್ಯತೆಯಿಂದ ವರ್ತಿಸಲಿ

ಮಾನ್ಯರೆ,

ಮೈಸೂರು ನಗರ ಬಸ್ ನಿಲ್ದಾಣದಿಂದ ಹಿನಕಲ್–ಹೂಟಗಳ್ಳಿ ಮಾರ್ಗವಾಗಿ ಕೆಆರ್‌ಎಸ್‌ಗೆ ತೆರಳುವ ಬಸ್ ಮಾರ್ಗ ಸಂಖ್ಯೆ 304ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಕಂಡಕ್ಟರ್ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಲಿ. ದೊಡ್ಡವರು, ಚಿಕ್ಕವರು ಎಂದು ನೋಡದೇ ಅನುಚಿತವಾಗಿ ವರ್ತಿಸುತ್ತಿದ್ದಾರೆ. ಪ್ರಯಾಣಿಕರು ಮಾಸಿಕ ಪಾಸ್ ತೋರಿಸುವಾಗ ತುಂಬಾ ಅವಸರದಿಂದ ಕೂಗಾಡುತ್ತಾರೆ. ತನ್ನ ಮನೆಯ ಜಗಳವನ್ನು ಪ್ರಯಾಣಿಕರ ಮೇಲೆ ತೋರಿಸುವಂತಿದೆ. ಅವರ ಸಮಸ್ಯೆ ಏನೇ ಇರಲಿ ಕರ್ತವ್ಯದಲ್ಲಿದ್ದಾಗ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಬಸ್ ಹತ್ತುವಾಗ, ಇಳಿಯುವಾಗ ಬೇಗ ಇಳಿಯಿರಿ, ಹತ್ತಿರಿ ಎನ್ನುತ್ತಾರೆ. ವಯಸ್ಸಾದವರು ಇವರ ಆತುರಕ್ಕೆ ಕಾಲು ಜಾರಿ ಬಿದ್ದರೆ ಏನು ಗತಿ? ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗಿಂತ ಪುರುಷರೇ ಸಾರ್ವಜನಿಕರೊಂದಿಗೆ ಅತೀ ಸೌಜನ್ಯದಿಂದ ವರ್ತಿಸುತ್ತಿದ್ದಾರೆ. ಇನ್ನು ಮುಂದಾದರೂ ಈ ಮಹಿಳಾ ಕಂಡಕ್ಟರ್‌ಗಳು ಸಮಾಧಾನದಿಂದ ವರ್ತಿಸಲಿ. ಇವರ ವಿರುದ್ಧ ಕೆಎಸ್‌ಆರ್‌ಟಿಸಿ ನಿಯಂತ್ರಣಾಧಿಕಾರಿಗಳು ಕ್ರಮ ಕೈಗೊಳ್ಳಲಿ.

–ನಾಗರತ್ನ, ಹಿರಿಯ ನಾಗರಿಕರು, ಹಿನಕಲ್, ಮೈಸೂರು

ಹಾಳಾದ ರಸ್ತೆ ರಿಪೇರಿ ಯಾವಾಗ?

ಮಾನ್ಯರೆ,

ಕಳೆದ ಎರಡು ವರ್ಷಗಳಿಂದ ಮೈಸೂರಿನ ರಸ್ತೆಗಳು ರಿಪೇರಿ ಕಂಡಿರಲಿಲ್ಲ. ಬಹುಶಃ ಪ್ರಸ್ತುತ ಚುನಾವಣೆ ಬೆನ್ನಲ್ಲಿ ಮೈಸೂರಿನ ಹಲವು ರಸ್ತೆಗಳನ್ನು ರಿಪೇರಿಗೊಳಿಸಿ ಡಾಂಬರೀಕರಣ ಕಾರ್ಯ ಪೂರ್ಣಗೊಳಿಸಿ ಸರಿಪಡಿಸಲಾಯಿತು. ಅದರಂತೆ ಶ್ರೀರಾಂಪುರ ವಿವೇಕಾನಂದ ಸರ್ಕಲ್‌ಗೆ ಸೇರುವ ಎರಡು ರಸ್ತೆಗಳನ್ನು ರಿಪೇರಿ ಮಾಡಿ ನವೀಕರಿಸಲಾಯಿತು. ಆದರೆ, ಶ್ರೀರಾಂಪುರದ ಬೆಮೆಲ್ ಆರ್ಚ್‌ನಿಂದ ವಿವೇಕಾನಂದ ಸರ್ಕಲ್‌ವರೆಗಿನ ಸುಮಾರು ಒಂದು ಕಿ.ಮೀ. ರಸ್ತೆ ರಿಪೇರಿ ಕಾಣದೆ ಗುಂಡಿಗಳಿಂದ ತುಂಬಿ ವಾಹನ ಚಾಲಕರು ಅಪಘಾತದ ಭಯದಿಂದ ಪರದಾಡುವಂತಾಗಿದೆ.

ಎರಡು ರಸ್ತೆಗಳನ್ನು ಡಾಂಬರೀಕರಿಸಿದ ಅಧಿಕಾರಿಗಳು ಈ ರಸ್ತೆಯನ್ನು ಕಡೆಗಣಿಸಿರುವ ಕಾರಣ ತಿಳಿದಿಲ್ಲ. ಕಾಗದದ ಮೂಲಕ ಡಾಂಬರೀಕರಿಸಿದೆಯೆಂದು ತೆಪ್ಪಗೆ ಕುಳಿತಿರಬಹುದು. ಮೈಸೂರು ನಗರ ಕಾರ್ಪೊರೇಷನ್ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಈ ನಿಟ್ಟಿನಲ್ಲಿ ಕಣ್ತೆರೆದು ಇನ್ನಾದರೂ ಶೀಘ್ರಾತಿ ಶೀಘ್ರವೇ ಈ ರಸ್ತೆಗಳ ಗುಂಡಿಗಳನ್ನು ಮುಚ್ಚಿಸಿ ವಿವೇಕಾನಂದನಗರ ಸರ್ಕಲ್‌ನಿಂದ ಬಿಇಎಂಎಲ್ ಆರ್ಚ್‌ವರೆಗಿನ ರಸ್ತೆ ಡಾಂಬರೀಕರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವರೇ?. **–ಗುರುರಾಜ್ ಪಿ., ಶ್ರೀರಾಂಪುರ, ಬೆಮೆಲ್ ಬಡಾವಣೆ, ಮೈಸೂರು.**



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ಕನಸು ನನಸು: ಕೊಟ್ಟ ಭರವಸೆ ಈಡೇರಿಸು!



ಗಜ ಗರ್ಭದಂತಾಗಿದ್ದ ಮುಖ್ಯಮಂತ್ರಿ ಆಯ್ಕೆಯ ಕಗ್ಗಂಟು ಅಂತೂ–ಇಂತೂ ಬಗೆಹರಿದು ರಾಜ್ಯದ ಜನತೆಗೆ ಅಕ್ಷರಶಃ ನೆಮ್ಮದಿ ತಂದಿದೆ. ಪಟ್ಟು ಬಿಡದೆ ಸಿದ್ದರಾಮಯ್ಯನವರು ಕೊನೆಗೂ ಮುಖ್ಯಮಂತ್ರಿ ಸ್ಥಾನ ದಕ್ಕಿಸಿಕೊಂಡಿದ್ದಾರೆ. ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಡಿ.ಕೆ.ಶಿವಕುಮಾರ್ ಅತ್ತೂ–ಕರೆದು ಕೊನೆಗೆ ಉಪಮುಖ್ಯಮಂತ್ರಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

ಮೈಸೂರಿನ ಟಗರು ನಿರಂತರ ಹೋರಾಟ ಮಾಡಿ ಹೈಕಮಾಂಡ್ ಮನ ಗೆಲ್ಲುವ ಮೂಲಕ ಕನಕಪುರದ 'ಬಂಡೆ' ಕನಸನ್ನು ಪುಡಿ–ಪುಡಿ ಮಾಡಿದೆ. ಏನೇ ಆಗಲೀ, ನಾನೇ ಮುಖ್ಯಮಂತ್ರಿ ಎಂದು ಬೀಗುತ್ತಿದ್ದ 'ಡಿ.ಕೆ.ಶಿವಕುಮಾರ್' ಬಾಯಿಗೆ ಅಂತೂ ಬೀಗ ಹಾಕಿದಂತಾಗಿದೆ. ಅರ್ಹತೆ ಇದ್ದರೂ ಅನಿವಾರ್ಯವಾಗಿ ಗಾಂಧಿ ಕುಟುಂಬಕ್ಕೆ ತಲೆ ಬಾಗಿ ಸಿಕ್ಕಿದ್ದು ಸೀರುಂಡೆ ಎನ್ನುವಂತೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ಸಮ್ಮತಿಸಿದ್ದಾರೆ.

ಇಬ್ಬರ ಜಟ್ಟಿ ಕಾಳಗದಲ್ಲಿ ಕಾಂಗ್ರೆಸ್ ಹೈಕಮಾಂಡ್ ಸ್ಥಿತಿ ಪಾಪ ಎನ್ನುವಂತಾಗಿದೆ. ಇಬ್ಬರು ನಾಯಕರ ನಡುವೆ ನ್ಯಾಯ ಪಂಚಾಯ್ತಿ ಮಾಡಿ ಇತ್ಯರ್ಥಗೊಳಿಸುವುದರಲ್ಲಿ ಸಾಕು ಸಾಕಾಗಿ ಹೋಗಿದೆ. ಇವರಿಗೆ 'ಕೈ' ಎತ್ತಿದ ರಾಜ್ಯದ ಜನತೆ ನಾಚಿಕೆ ಪಡುವಂತೆ ಜಂಗೀಕುಸ್ತಿ ನಡೆದಿದೆ.

ನೋವಿನ ಸಂಗತಿ ಎಂದರೆ ನಿರೀಕ್ಷೆಗೂ ಮೀರಿ ಜನ ಬೆಂಬಲ ಪಡೆದ ಮೇಲಾದರೂ ಪ್ರಜಾಪ್ರಭುತ್ವದ ಪದ್ಧತಿಯಂತೆ ಮುಖ್ಯಮಂತ್ರಿ ಆಯ್ಕೆ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ನಡೆಯಬೇಕಿತ್ತು. ಆದರೆ ಈ ಮಾರ್ಗ ಬಿಟ್ಟು, ದೆಹಲಿಯಲ್ಲಿ ಬೀಡುಬಿಟ್ಟು ಮುಖ್ಯಮಂತ್ರಿ ಆಯ್ಕೆಗೆ ಹೋರಾಟ ಮಾಡಿದ್ದು ಕಾಂಗ್ರೆಸ್‌ಗೆ ಶೋಭೆ ತರುವಂತದ್ದಲ್ಲ. ಈಗ ನಡೆದದ್ದು ಪ್ರಜಾಪ್ರಭುತ್ವದ 'ಅಣಕು' ಪ್ರದರ್ಶನ. ಇನ್ನು ಮೇಲಾದರೂ ಈ ಹೈಕಮಾಂಡ್ ಸಂಸ್ಕೃತಿಗೆ ತಿಲಾಂಜಲಿ ನೀಡಿ ಪ್ರಜಾಪ್ರಭುತ್ವದ ಹಾದಿ ಹಿಡಿಯುವುದು ಸೂಕ್ತ.

ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಪರಿಶ್ರಮ ಅಲ್ಲಗಳೆಯುವಂತಿಲ್ಲ. ಇಬ್ಬರದ್ದೂ ಹೆಚ್ಚು–ಕಮ್ಮಿ ಸಮಾನ ಹುದ್ದೆ, ಸಮಾನ ಸ್ಥಾನಮಾನ. ಹೀಗಿರುವಾಗ ಸುಗಮವಾಗಿ ಬಗೆಹರಿಸಬಹುದಾಗಿದ್ದ ಸಮಸ್ಯೆಯನ್ನು ಕಗ್ಗಂಟು ಮಾಡಿಕೊಂಡು ನಗೆಪಾಟಲಿಗೆ ಗುರಿಯಾದದ್ದು ವಿಪರ್ಯಾಸ. ತಮಗೆ ಮತ ನೀಡಿದ ಜನತೆಗೆ ಅವಮಾನ ಮಾಡದಂತೆ ಮುಂದೆಯಾದರೂ ಎಚ್ಚರ ವಹಿಸಲಿ.

ಚುನಾವಣೆಗೆ ಮೊದಲು ಪರಸ್ಪರ ತಬ್ಬಿಕೊಂಡು, ರಾಮ–ಲಕ್ಷ್ಮಣರಂತೆ ನಾಟಕ ಮಾಡಿದವರು ಈಗ ಮಾಡಿದ್ದೇನು ಎಂದು ಆತ್ಮವಿಮರ್ಶೆ ಮಾಡಿಕೊಳ್ಳಲಿ.

> **ನೋವಿನ ಸಂಗತಿ ಎಂದರೆ ನಿರೀಕ್ಷೆಗೂ ಮೀರಿ ಜನ ಬೆಂಬಲ ಪಡೆದ ಮೇಲಾದರೂ ಪ್ರಜಾಪ್ರಭುತ್ವದ ಪದ್ಧತಿಯಂತೆ ಮುಖ್ಯಮಂತ್ರಿ ಆಯ್ಕೆ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲ ನಡೆಯಬೇಕಿತ್ತು. ಆದರೆ ಈ ಮಾರ್ಗ ಬಿಟ್ಟು, ದೆಹಲಿಯಲ್ಲ ಬೀಡುಬಿಟ್ಟು ಮುಖ್ಯಮಂತ್ರಿ ಆಯ್ಕೆಗೆ ಹೋರಾಟ ಮಾಡಿದ್ದು ಕಾಂಗ್ರೆಸ್‌ಗೆ ಶೋಭೆ ತರುವಂತದ್ದಲ್ಲ. ಈಗ ನಡೆದದ್ದು ಪ್ರಜಾಪ್ರಭುತ್ವದ 'ಅಣಕು' ಪ್ರದರ್ಶನ. ಇನ್ನು ಮೇಲಾದರೂ ಈ ಹೈಕಮಾಂಡ್ ಸಂಸ್ಕೃತಿಗೆ ತಿಲಾಂಜಲಿ ನೀಡಿ ಪ್ರಜಾಪ್ರಭುತ್ವದ ಹಾದಿ ಹಿಡಿಯುವುದು ಸೂಕ್ತ.**

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅಧಿಕಾರದಿಂದ ದೂರ ಉಳಿದ ಗಾಂಧೀಜಿ ಹಾಗೂ ನಂತರ ಜಯಪ್ರಕಾಶ್ ನಾರಾಯಣ್ (ಜೆಪಿ) ರಂತಹ ದೇಶಭಕ್ತರ ಮಾದರಿ ಮರೆತು, ಗಾದಿಗಾಗಿ ಬೀದಿಯಲ್ಲಿ ಹಗ್ಗ ಜಗ್ಗಾಟ ಮಾಡಿದ್ದು ಇವರ ಅಧಿಕಾರ ದಾಹಕ್ಕೆ ಸಾಕ್ಷಿ.

ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಣಕಾಸು ಖಾತೆ, ಉಪಮುಖ್ಯಮಂತ್ರಿ ಶಿವಕುಮಾರ್ ಇಂಧನ ಹಾಗೂ ಜಲಸಂಪನ್ಮೂಲ (ಸಂಪತ್ತಿನ ಮೂಲ), ಮಾಜಿ ಡಿಸಿಎಂ ಪರಮೇಶ್ವರ್‌ಗೆ ಗೃಹ ಖಾತೆ, ಎಂ.ಬಿ.ಪಾಟೀಲ್‌ಗೆ ಲೋಕೋಪಯೋಗಿ ಹೀಗೆ ಖಾತೆಗಳಿಗೆ 'ಗುತ್ತಿಗೆ' ಪಡೆದವರಂತೆ ಆಸೆಪಡುತ್ತಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರದಲ್ಲಿ ಶೇ.40ರಷ್ಟು ಭ್ರಷ್ಟಾಚಾರ ನಡೆದಿತ್ತು ಎಂದು ಬೊಬ್ಬೆ ಹಾಕುತ್ತಿದ್ದ ಕಾಂಗ್ರೆಸ್ ನಾಯಕರೀಗ ಹೀಗೇಕೆ ಖಾತೆಗಳ ಮೇಲೆ ಕಣ್ಣಿಟ್ಟಿದ್ದಾರೆ ಎಂಬುದು ಜನಸಾಮಾನ್ಯರಿಗೆ ಅರ್ಥವಾಗದ ವಿಷಯವೇನಲ್ಲ. ಎಚ್ಚರದಿಂದ ಹೆಜ್ಜೆ ಇಡದೆ, ಎಲ್ಲಕ್ಕೂ 'ಕೈ' ಚಾಚಿ ಬಾಚಿಕೊಳ್ಳಲು ಪ್ರಯತ್ನ ಪಟ್ಟರೆ, ಲೋಕಸಭಾ ಚುನಾವಣೆಯಲ್ಲಿ ಇವರ ಹಣೇಬರಹ ಬದಲಾಗುವುದು ಖಂಡಿತ.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅಂತೂ ತಮಗೆ ನ್ಯಾಯ ದೊರಕಿಸಿಕೊಂಡರು. ಉಳಿದಂತೆ, ಮಾಜಿ ಡಿಸಿಎಂಗಳಾದ ಪರಮೇಶ್ವರ್, ಲಕ್ಷ್ಮಣ್ ಸವದಿ, ಹಿರಿಯರಾದ ಎಂ.ಬಿ. ಪಾಟೀಲ್, ಆರ್.ವಿ.ದೇಶಪಾಂಡೆ, ಹೆಚ್.ಕೆ.ಪಾಟೀಲ್, ಬಿ.ಕೆ.ಹರಿಪ್ರಸಾದ್, ಕೆ.ಹೆಚ್.ಮುನಿಯಪ್ಪ ಯು.ಟಿ.ಖಾದರ್ ಈ ಹಿರಿಯರ ಪಾಲಿಗೆ ಬಂದದ್ದು ಪಂಚಾಮೃತ ಎಂಬಂತಾಗುತ್ತದೆ. ಏಕೆಂದರೆ 'ಚೌಕಾಸಿ' ಮುಖ್ಯಮಂತ್ರಿ, ಡಿಸಿಎಂಗೆ ಮಾತ್ರ ಮೀಸಲಾಗಿತ್ತು.

ಇದರಿಂದ ಸಂಪುಟ ರಚನೆ, ಖಾತೆಗಳ ಹಂಚಿಕೆ ಈ ಇಬ್ಬರ ಪಾಲಿಗೆ ಸರ್ಕಸ್ ಮೇಲಿನ ತಂತಿ ನಡಿಗೆಯಂತಾಗಿದೆ. ಇಬ್ಬರೂ ಪರಸ್ಪರ ಸೋತು–ಗೆಲ್ಲುವ ರೀತಿ ನಡೆದುಕೊಂಡರೆ ಇವರ ಸಾಮಾಜಿಕ ನ್ಯಾಯ ನಗೆಪಾಟಲಿಗೆ ಗುರಿಯಾಗುತ್ತದೆ. ಜತೆಗೆ ಹದಗೆಟ್ಟಿರುವ ಆಡಳಿತ, ಬ್ರಹ್ಮಾಂಡ ಭ್ರಷ್ಟಾಚಾರದಿಂದ ಬೇಸತ್ತಿರುವ ರಾಜ್ಯದ ಜನತೆಗೆ ಮತ್ತೆ ನಿರಾಶೆಯಾಗಬಾರದು. ಲಂಚ, ವರ್ಗಾವಣೆ ದಂಧೆ, ಜಾತಿ ವ್ಯಾಮೋಹಕ್ಕೆ ಅಂಟಿಕೊಂಡರೆ, ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ರಾಜ್ಯದ ಹಣೇಬರಹವೇ ಇಷ್ಟು ಎಂದು ಜನ ಹಾದಿ–ಬೀದಿಯಲ್ಲಿ ಮಾತನಾಡಿಕೊಳ್ಳುವಂತೆ ಆಗುತ್ತದೆ. ಎಚ್ಚರ...

ಇನ್ನೂ ರಾಜಕಾರಣಿಗಳು ಮಠ–ಮಾನ್ಯಗಳ, ಪೀಠಾಧಿಪತಿಗಳ ಪ್ರಭಾವಕ್ಕೆ ಒಳಗಾಗಬಾರದು. ಸ್ವಾಮೀಜಿಗಳು ಎಲ್ಲಾ ಸಮಾಜಕ್ಕೂ ಹಿತ ಬಯಸುವವರು. ಜಾತಿಗೆ ಸೀಮಿತವಾಗಬಾರದು. ಎಲ್ಲರೂ ನಮ್ಮವರು ಎಂದ ಮೇಲೆ ಗುಂಪು ಕಟ್ಟಿಕೊಂಡು ಹೋಗಿ ಸರ್ಕಾರದ ಮುಂದೆ ಭಿಕ್ಷಾಪಾತ್ರೆ ಹಿಡಿದು ಕೈ ಚಾಚಬಾರದು. ಪೂಜೆ–ಪುನಸ್ಕಾರ, ಧಾರ್ಮಿಕ ಕೆಲಸಗಳು, ಬಡ ವಿದ್ಯಾರ್ಥಿಗಳಿಗೆ ಅನ್ನ, ವಿದ್ಯೆ, ವಸತಿ ನೀಡಲು ಮುಂದಾಗಬೇಕು. ಮಠ–ಮಠಗಳ ನಡುವೆ ಸರ್ಕಾರದ ಸಹಾಯಕ್ಕಾಗಿ ಪೈಪೋಟಿ ನಡೆಯಬಾರದು.

ಕೆಲವು ಸ್ವಾಮೀಜಿಗಳು ಜಾತಿಯನ್ನು 'ಗುತ್ತಿಗೆ' ಪಡೆದವರಂತೆ ಸರ್ಕಾರವನ್ನು 'ಬ್ಲಾಕ್‌ಮೇಲ್' ಮಾಡುವ ಪ್ರವೃತ್ತಿಯನ್ನು ಬಿಡಬೇಕು. ಬೇಕಿದ್ದರೆ, ಅವರೂ ಸಕ್ರಿಯ ರಾಜಕಾರಣಕ್ಕೆ ಬಂದು ಜನರಿಂದ (ಭಕ್ತರಿಂದ) ನೇರವಾಗಿ ಆಯ್ಕೆಯಾಗಿ ಅಧಿಕಾರದ ಚುಕ್ಕಾಣಿ ಹಿಡಿಯಲಿ. ಇಲ್ಲವೇ ಮಠಕ್ಕೆ ಬಂದವರಿಗೆ ಹಿತವಚನ ಹೇಳಿ ಆಶೀರ್ವದಿಸಲಿ. ಇದು ಎಲ್ಲರಿಗೂ ಕ್ಷೇಮ ಹಾಗೂ ಗೌರವ. ಇನ್ನು ಬಿಜೆಪಿ ಹಾಗೂ ಜೆಡಿಎಸ್‌ಗೆ ಆತ್ಮವಿಮರ್ಶೆಗೆ ಇದು ಸಕಾಲ. ಸರಿ, ಈಗ ಕಾಂಗ್ರೆಸ್‌ನ ಗತವೈಭವ ಮೇಳೈಸಲಿ.

ಪಕ್ಷ ಸೋತಿದ್ದರಿಂದ ಅಪಾಯಕ್ಕೆ ಸಿಲುಕಿರುವುದು ಕಾರ್ಯಕರ್ತರೇ ಹೊರತು, ಯಾವ ನಾಯಕನೂ ಅಲ್ಲ!



ಮೈಸೂರು: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದ್ದು, ಬಿಜೆಪಿ ಹೀನಾಯವಾಗಿ ಸೋತಿದೆ. ಈ ವಿಚಾರದ ಕುರಿತಾಗಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಸೋಷಿಯಲ್ ಮೀಡಿಯಾ ಮೂಲಕ ಬೇಸರ ವ್ಯಕ್ತಪಡಿಸಿದ್ದಾರೆ.

ದಯವಿಟ್ಟು ನಮ್ಮನ್ನು ಕ್ಷಮಿಸಿ ಎಂದು ಹೇಳುವ ಮೂಲಕ ಸಂಸದ ಪ್ರತಾಪ್ ಸಿಂಹ ಬಿಜೆಪಿ ಕಾರ್ಯಕರ್ತರಲ್ಲಿ ಕ್ಷಮೆ ಯಾಚಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಸಂಸದರು, ನಮ್ಮ ಪರವಾಗಿ ಮತ ಕೇಳುವ, ಮನೆ ಮಠ ಬಿಟ್ಟು ಪಕ್ಷಕ್ಕಾಗಿ ದುಡಿಯುವ ಹಾಗೂ ಗೆದ್ದಾಗ ಹೊತ್ತು ಮೆರೆಯುವ ಕಾರ್ಯಕರ್ತನಿಗೆ, ಪಕ್ಷ ಸೋತಾಗ ನಮ್ಮ ಮೇಲೆ ಸಿಟ್ಟನ್ನು ತೀಕ್ಷ್ಣವಾಗಿ ಹೊರಹಾಕುವ ಹಕ್ಕೂ ಇರುತ್ತದೆ. ಪಕ್ಷ ಸೋತು ಅನಾಥವಾಗಿರುವುದು, ಅಪಾಯಕ್ಕೆ ಸಿಲುಕಿರುವುದು ಕಾರ್ಯಕರ್ತನೇ ಹೊರತು ಯಾವ ನಾಯಕನೂ ಅಲ್ಲ. ದಯವಿಟ್ಟು ನಮ್ಮನ್ನು ಕ್ಷಮಿಸಿ ಎಂದಿದ್ದಾರೆ. ಅಲ್ಲದೇ ಯಾರದ್ದೋ ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಸೃಷ್ಟಿಯಾಗುವ ಷಡ್ಯಂತರಕ್ಕೆ ಬಲಿಯಾಗುವುದು, ಯಾರು ಯಾರನ್ನೋ ತೆಗಳುವುದು ಬೇಡ ಕಾರ್ಯಕರ್ತರೇ ಎಂದು ಸಂಸದ ಪ್ರತಾಪ್ ಸಿಂಹ ಟ್ವೀಟ್ ಮಾಡಿದ್ದಾರೆ.

ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೋದಲ್ಲಿ ಮಿಂಚಿದ ಮೈಸೂರು ರೈಲು ಮ್ಯೂಸಿಯಂ



ನವದೆಹಲಿ: ನವದೆಹಲಿಯ ಪ್ರಗತಿ ಮೈದಾನದಲ್ಲಿ ಆರಂಭವಾಗಿರುವ ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೋ–2023ಯಲ್ಲಿ ಮೈಸೂರಿನ ರೈಲ್ ಮ್ಯೂಸಿಯಂ ಭಾಗಿಯಾಗಿರುವುದು ಗಮನಾರ್ಹ. ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ದೆಹಲಿಯ ಪ್ರಗತಿ ಮೈದಾನದಲ್ಲಿ 47ನೇ ಅಂತಾರಾಷ್ಟ್ರೀಯ ಮ್ಯೂಸಿಯಂ ದಿನ ಆಚರಿಸಲಾಗುತ್ತಿದೆ. ವಸ್ತುಸಂಗ್ರಹಾಲಯಗಳು, ಸುಸ್ಥಿರತೆ ಹಾಗೂ ಸಂಕ್ಷೇಮ ಎಂಬುದು ಈ ವರ್ಷದ ಧ್ಯೇಯವಾಗಿದೆ. ಮೇಳವನ್ನು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಒಂದು ಸುತ್ತು ಹಾಕಿ ಮಳಿಗೆಗಳನ್ನು ಪರಿಶೀಲಿಸಿದರು. 3 ದಿನಗಳ ಕಾಲ ನಡೆಯಲಿರುವ ಮೇಳದಲ್ಲಿ ಮೈಸೂರು ರೇಲ್ ಮ್ಯೂಸಿಯಂ ಭಾಗಿಯಾಗಿದೆ. 1979ರಲ್ಲಿ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರಾಂತೀಯ ರೈಲ್ ಮ್ಯೂಸಿಯಂ ಮೈಸೂರಿನಲ್ಲಿ ಆರಂಭವಾಗಿದೆ. ಈ ಮ್ಯೂಸಿಯಂನಲ್ಲಿ ಮೈಸೂರು ರಾಜವಂಶಸ್ಥರು ಆರಂಭಿಸಿರುವ ರೈಲ್ವೆ ಹಳೆಯ ಇಂಜಿನ್‌ಗಳು, ವಿಂಟೇಜ್ ಬೋಗಿಗಳು, 19ನೇ ಶತಮಾನದ ಆರಂಭದ ರೈಲುಗಳ ಮಾದರಿಯನ್ನು ಸಂರಕ್ಷಿಸಲಾಗಿದೆ. ಈ ಮೇಳದಲ್ಲಿ ಅತ್ಯಂತ ಮುಖ್ಯ ಆಕರ್ಷಣೆಯಾಗಿರುವುದು 1899ರಲ್ಲಿ ನಿರ್ಮಿಸಲಾಗಿರುವ ಮಹಾರಾಣಿ ರಾಯಲ್ ಕೋಚ್‌ನ ಮಾದರಿ ಹಾಗೂ ಉಗಿಬಂಡಿ ಇಂಜಿನ್ ಎಕ್ಸ್‌ಪೋದಲ್ಲಿ ಎಲ್ಲರ ಗಮನ ಸೆಳೆಯುತ್ತಿದೆ.

ಮೈಸೂರು–ಬೆಂಗಳೂರು ನಡುವೆ ನಿತ್ಯವೂ ಎಂಟು ಎಲೆಕ್ಟ್ರಿಕ್ ಬಸ್‌ಗಳಲ್ಲಿ 1032 ಮಂದಿ ಸುಖ ಪ್ರಯಾಣ

ಎಸ್.ಟಿ. ರವಿಕುಮಾರ್



ಮೈಸೂರಿಂದ ಬೆಳಗ್ಗೆ 6ರಿಂದ ಗಂಟೆಗೊಂದ ರಂತೆ ರಾತ್ರಿ 7 ಗಂಟೆವರೆಗೂ, ಬೆಂಗಳೂರಿಗೆ ಬಸ್‌ಗಳು ಸಂಚರಿಸುತ್ತಿವೆ. ಮೈಸೂರು ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್‌ನಿಲ್ದಾಣದಿಂದ ಬೆಂಗಳೂರಿನ ಸ್ಯಾಟಿಲೈಟ್ ಬಸ್ ಸ್ಟ್ಯಾಂಡಿಗೆ 320 ರೂ. ಹಾಗೂ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣಕ್ಕೆ 340 ರೂ. ಪ್ರಯಾಣ ದರವಿದ್ದು, ಕೇವಲ ಎರಡೂ ಕಾಲು ಗಂಟೆಯಲ್ಲಿ ತಲುಪಬಹುದಾಗಿದೆ. ಬೆಂಗಳೂರಿನಿಂದ ಮಡಿಕೇರಿ, ವಿರಾಜಪೇಟೆ, ದಾವಣಗೆರೆ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೂ ವಿದ್ಯುತ್ ಚಾಲಿತ ಬಸ್ಸುಗಳನ್ನು ಸಾರಿಗೆ ಸಂಸ್ಥೆಯು ಓಡಿಸುತ್ತಿದೆ. ದಿನದಿಂದ ದಿನಕ್ಕೆ ಬೇಡಿಕೆ ಹೆಚ್ಚುತ್ತಿರುವುದರಿಂದ ಮತ್ತಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಕೆಎಸ್‌ಆರ್‌ಟಿಸಿ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು, ಮೇ 18–ಮೈಸೂರು–ಬೆಂಗಳೂರು ನಡುವೆ ಜೋಡಿ ರೈಲು ಮಾರ್ಗ ಹಾಗೂ ವಿಮಾನ ಹಾರಾಟ ಸಂಪರ್ಕವಿದ್ದಾಗ್ಯೂ ದಶಪಥ ರಸ್ತೆ ಅಭಿವೃದ್ಧಿಯಾಗಿರುವುದರಿಂದ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಈ ಎರಡೂ ನಗರಗಳ ನಡುವೆ ಸಂಚರಿಸಲು ಪ್ರಯಾಣಿಕರು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ.

ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನ ಪಟ್ಟಣ, ರಾಮನಗರ, ಬಿಡದಿಗಳಲ್ಲಿ ಬೈಪಾಸ್ ರಸ್ತೆ ಮೂಲಕ ಸಾಗುವುದರಿಂದ ಯಾವುದೇ ಅಡೆ–ತಡೆಯಿಲ್ಲದೆ ಅತೀ ಕಡಿಮೆ ಅವಧಿಯಲ್ಲಿ ಮೈಸೂರು – ಬೆಂಗಳೂರು ತಲುಪಬಹುದಾದ್ದರಿಂದ ಹಾಗೂ ಅಂತಾರಾಷ್ಟ್ರೀಯ ಗುಣಮಟ್ಟದ ಹೆದ್ದಾರಿ ನಿರ್ಮಾಣವಾಗಿರುವುದರಿಂದ ನಿರಾಯಾಸವಾಗಿ ಪ್ರಯಾಣಿಸಬಹುದಾದ್ದರಿಂದ ಪ್ರಯಾಣಿಕರು ರಸ್ತೆ ಮೂಲಕ ಕಾರು, ಬಸ್ಸುಗಳಲ್ಲಿ ಸಂಚರಿಸಲು ಮುಂದಾಗುತ್ತಿದ್ದಾರೆ.

ಬೆಂಗಳೂರಿನಂತೆ ಮೈಸೂರು ನಗರದಲ್ಲೂ ಕೈಗಾರಿಕೆಗಳು, ಐಟಿ–ಬಿಟಿ ಕಂಪನಿಗಳು, ಶೈಕ್ಷಣಿಕ ಸಂಸ್ಥೆಗಳು, ಯೋಗ ತರಬೇತಿ ಕೇಂದ್ರಗಳು, ಆಯುರ್ವೇದ, ಯೋಗ, ನ್ಯಾಚುರೋಪತಿ ಪದ್ಧತಿಯ ಆರೋಗ್ಯ ಚಿಕಿತ್ಸಾ ಸೌಲಭ್ಯಗಳು ಹೆಚ್ಚಾಗುತ್ತಿರುವುದರಿಂದ ರಾಜ್ಯ ಹಾಗೂ ದೇಶದ ವಿವಿಧ ಭಾಗಗಳಿಂದ ಜನರು ಮೈಸೂರಿನತ್ತ ಮುಖ ಮಾಡಿದ್ದಾರೆ. ಸಾಫ್ಟ್‌ವೇರ್ ಕಂಪನಿ, ಸರ್ಕಾರಿ ಕಚೇರಿ, ವಿವಿಧ ಉದ್ದಿಮೆಗಳಲ್ಲಿ ಕೆಲಸ ಮಾಡುವವರು ಪ್ರತೀ ದಿನ ಮೈಸೂರು–ಬೆಂಗಳೂರು ನಡುವೆ ಪ್ರಯಾಣಿಸ ಲಾರಂಭಿಸಿದ್ದಾರೆ. ಸುಸಜ್ಜಿತ ರಸ್ತೆಯಾಗಿರುವುದರಿಂದ ಕಾರಿನಲ್ಲಿ ಒಂದೂವರೆ ಗಂಟೆ, ಬಸ್ಸಿನಲ್ಲಿ ಎರಡು ಗಂಟೆಯಲ್ಲಿ ತಲುಪಬಹುದಾಗಿರುವ ಕಾರಣ ರೈಲು ಮತ್ತು ವಿಮಾನಕ್ಕಿಂತ ರಸ್ತೆ ಮಾರ್ಗದಲ್ಲಿ ಪ್ರಯಾಣಿಸಲು ಜನರು ಬಯಸುತ್ತಿದ್ದಾರೆ. ವಿಮಾನ ನಿಗದಿತ ಅವಧಿಯಲ್ಲಿ ನಿಯಮಿತ ಟ್ರಿಪ್‌ಗಳು ಮಾತ್ರ ಕಾರ್ಯಾಚರಣೆ ಮಾಡುವುದಲ್ಲದೆ, ದುಬಾರಿ ಪ್ರಯಾಣ ವೆಚ್ಚವಾಗಲಿದೆ. ರೈಲುಗಳಲ್ಲಿ ನಿಲುಗಡೆ ಹಾಗೂ ಕ್ರಾಸಿಂಗ್‌ಗಾಗಿ ಜನರು ಈ ಎರಡೂ ಮಾರ್ಗಕ್ಕಿಂತ ರಸ್ತೆ ಮಾರ್ಗವನ್ನೇ ಆದ್ಯತೆ ಮೇಲೆ ಆಯ್ಕೆ ಮಾಡಿಕೊಳ್ಳುತ್ತಾರೆ.

ಇದೀಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (KSRTC)ವು ಎಲೆಕ್ಟ್ರಿಕ್ ಬಸ್‌ಗಳನ್ನು ರಾಜ್ಯಕ್ಕೆ ಪರಿಚಯಿಸಿದ್ದು, ಮಾರ್ಚ್ 21ರಿಂದ ಪ್ರಥಮವಾಗಿ ಬೆಂಗಳೂರು–ಮೈಸೂರು ನಗರಗಳ ನಡುವೆ ಸುಸಜ್ಜಿತವಾದ 8 ಐಷಾರಾಮಿ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಸೇವೆ ಆರಂಭಿಸಿದೆ. ಅದಕ್ಕೂ ಮೊದಲು 1 ಎಲೆಕ್ಟ್ರಿಕ್ ಬಸ್ ಅನ್ನು ಈ ಮಾರ್ಗದಲ್ಲಿ ಪ್ರಯೋಗಾರ್ಥ ಓಡಿಸಿದಾಗ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿತ್ತು. ಬೇಡಿಕೆಯನ್ನರಿತ ಸಾರಿಗೆ ಸಂಸ್ಥೆಯು ಒಂದೇ ಬಾರಿಗೆ 8 ಎಲೆಕ್ಟ್ರಿಕ್ ಬಸ್‌ಗಳನ್ನು ಈ ನಗರಗಳ ನಡುವೆ ಓಡಿಸಲಾರಂಭಿಸಿತು. ಅಂದಿನಿಂದ ಈವರೆಗೂ ಎಲ್ಲಾ ಟ್ರಿಪ್ಪಿನಲ್ಲೂ ಬಸ್‌ಗಳಲ್ಲಿ ಪೂರ್ಣ ಪ್ರಮಾಣದ ಆಸನಗಳು ಭರ್ತಿಯಾಗುತ್ತಿವೆ. ದಿನಕ್ಕೆ 8 ಬಸ್‌ಗಳು 12 ಟ್ರಿಪ್ ಮಾಡುತ್ತಿವೆ. ಎರಡೂ ಕಡೆಯಿಂದ ಒಟ್ಟು 24 ಟ್ರಿಪ್‌ಗಳಾಗುತ್ತಿವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ಪ್ರಭಾರ ವ್ಯವಸ್ಥಾಪಕ ಮರೀಗೌಡ ತಿಳಿಸಿದ್ದಾರೆ.


43 ಆಸನ ಸಾಮರ್ಥ್ಯದ 8 ಬಸ್‌ಗಳು ನಿತ್ಯ 12 ಸಿಂಗಲ್ ಟ್ರಿಪ್ ಮಾಡುತ್ತಿದ್ದು, ಎರಡೂ ಕಡೆಯಿಂದ ಒಟ್ಟು 24 ಟ್ರಿಪ್‌ಗಳಾಗುತ್ತಿವೆ. ಅದರಂತೆ ದಿನಕ್ಕೆ ಮೈಸೂರು–ಬೆಂಗಳೂರು ನಡುವೆ 1,032 ಮಂದಿಯಂತೆ ತಿಂಗಳಿಗೆ ಎಲೆಕ್ಟ್ರಿಕ್ ಬಸ್‌ಗಳಲ್ಲಿ ಒಟ್ಟು ಸರಾಸರಿ 31,000 ಮಂದಿ ಪ್ರಯಾಣಿಸುತ್ತಿದ್ದಾರೆ.

ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಲ್ಲಿ ಸಾರಿಗೆ ಸಂಸ್ಥೆಯಿಂದ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಲಾಗಿದ್ದು, ಬೆಂಗಳೂರಿನಿಂದ ಬರುವ ಎಲೆಕ್ಟ್ರಿಕ್ ಬಸ್‌ಗಳು ಎಲೆಕ್ಟ್ರಿಕ್ ಚಾರ್ಜಿಂಗ್ ಮಾಡಿಕೊಂಡು ಹೊರಡುತ್ತಿವೆ. ವಾಯು ಮಾಲಿನ್ಯ, ಶಬ್ದ ಮಾಲಿನ್ಯವಿಲ್ಲದೆ ಹವಾನಿಯಂತ್ರಿತ ಐಷಾರಾಮಿ ಬಸ್ಸಿನಲ್ಲಿ ನಿರಾಯಾಸವಾಗಿ ಪ್ರಯಾಣಿಸಬಹುದಾದ್ದರಿಂದ ಹಾಗೂ ಬೆಂಗಳೂರಿನ ಮೆಜೆಸ್ಟಿಕ್‌ಗೆ ನೇರವಾಗಿ ತಲುಪಬಹುದಾಗಿರುವ ಕಾರಣ ಸ್ವಲ್ಪ ದುಬಾರಿ ದರವಾದರೂ ಪ್ರಯಾಣಿಕರು ಎಲೆಕ್ಟ್ರಿಕ್ ಬಸ್‌ಗಳನ್ನು ಆಯ್ಕೆ ಮಾಡುತ್ತಿರುವುದು ಕಂಡು ಬಂದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶಾಸಕಾಂಗ ಪಕ್ಷದ ನಾಯಕರಾಗಿ ಸಿದ್ದರಾಮಯ್ಯ ಆಯ್ಕೆ





ಬೆಂಗಳೂರಿನ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯ ಇಂದಿರಾ ಭವನದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ವೀಕ್ಷಕರಾದ ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ್ ಶಿಂಧೆ, ನಿಯೋಜಿತ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರಿಗೆ ಪುಷ್ಪಗುಚ್ಛ ನೀಡಿ, ಅಭಿನಂದಿಸಿದರು. ಬಲಚಿತ್ರದಲ್ಲಿ ಕಾಂಗ್ರೆಸ್ ಶಾಸಕರನ್ನು ಕಾಣಬಹುದು.

ಕೊಹ್ಲಿ ಶತಕ, ಆರ್‌ಸಿಬಿಗೆ ಭರ್ಜರಿ ಜಯ; ಪ್ಲೇಆಫ್‌ಗೆ ಇನ್ನೊಂದೇ ಹೆಜ್ಜೆ

ಹೈದರಾಬಾದ್, ಮೇ 18(ಸಿಎನ್)– ಸತತ 7 ವರ್ಷಗಳ ಬಳಿಕ ಐಪಿಎಲ್‌ನಲ್ಲಿ ವಿರಾಟ್ ಕೊಹ್ಲಿ ಭರ್ಜರಿ ಶತಕ ಹಾಗೂ ಫಾಫ್ ಡುಪ್ಲೆಸ್ಸಿ ಅರ್ಧಶತಕ ನೆರವಿನಿಂದ ಹೈದರಾಬಾದ್ ವಿರುದ್ಧ 8 ವಿಕೆಟ್‌ಗಳಿಂದ ವಿಜಯ ಸಾಧಿಸಿ, ಆರ್‌ಸಿಬಿ ಪ್ಲೇ ಆಫ್‌ಗೆ ಮತ್ತೊಂದು ಹೆಜ್ಜೆ ಸನಿಹವಾಯಿತು.

ಇಲ್ಲಿನ ರಾಜೀವ್‌ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 186 ರನ್ ಪೇರಿಸಿತು.

ಹೈದರಾಬಾದ್ ಒಡ್ಡಿದ ಗುರಿ ಬೆನ್ನತ್ತಿದ ಆರ್‌ಸಿಬಿ 4 ಎಸೆತ ಬಾಕಿ ಇರುವಾಗಲೇ ಗುರಿ ತಲುಪಿ ಜಯ ಸಾಧಿಸಿತು. 19.2 ಓವರುಗಳಲ್ಲಿ 2 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿತು. ಆರಂಭಿಕರಾಗಿ ಕಣಕ್ಕಿಳಿದ ವಿರಾಟ್‌ಕೊಹ್ಲಿ 63 ಎಸೆತಗಳಲ್ಲಿ 4 ಆಕರ್ಷಕ ಸಿಕ್ಸರ್ ಹಾಗೂ 12 ಬೌಂಡರಿ ಒಳಗೊಂಡ 100 ರನ್ ಗಳಿಸಿ ಅನಗತ್ಯ ಹೊಡೆತಕ್ಕೆ ಕೈ ಹಾಕಿ ಭುವನೇಶ್ವರ್ ಎಸೆತದಲ್ಲಿ ವಿಕೆಟ್ ಕೈ ಚೆಲ್ಲಿದರು. ಇನ್ನೊಂದೆಡೆ ಬ್ಯಾಟ್ ಬೀಸುತ್ತಿದ್ದ ಫಾಫ್‌ಡುಪ್ಲೆಸ್ಸಿ 47 ಎಸೆತಗಳಲ್ಲಿ 7 ಬೌಂಡರಿ 2 ಸಿಕ್ಸರ್ ಒಳಗೊಂಡ 71 ರನ್ ಗಳಿಸಿ ನಟರಾಜನ್ ಎಸೆತದಲ್ಲಿ ಕ್ಯಾಚ್ ನೀಡಿ ನಿರ್ಗಮಿಸಿದರು. ಬಳಿಕ ಬಂದ ಮ್ಯಾಕ್ಸ್‌ವೆಲ್ 5 ರನ್ ಹಾಗೂ ಬ್ರೇಸ್‌ವೆಲ್ 4 ರನ್ ಗಳಿಸಿ ತಂಡವನ್ನು ಜಯದ ದಡ ದಾಟಿಸಿದರು.

ಹೈದರಾಬಾದ್ ಪರ ಭುವನೇಶ್ವರ್, ಟಿ.ನಟರಾಜನ್ ತಲಾ ಒಂದೊಂದು ವಿಕೆಟ್ ಪಡೆದರು. ಉಳಿದ ಬೌಲರ್‌ಗಳು ಹೆಚ್ಚು ರನ್ ಬಿಟ್ಟುಕೊಟ್ಟು ದುಬಾರಿಯಾಗಿ ತಂಡದ ಸೋಲಿಗೆ ಕಾರಣರಾದರು.

ಇದಕ್ಕೂ ಮುನ್ನ ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ತಂಡ 5 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿತು. ಆರಂಭಿಕ ಆಟಗಾರರಾದ ಅಭಿಷೇಕ್ ಶರ್ಮಾ (11), ರಾಹುಲ್‌ತ್ರಿಪಾಠಿ 15 ರನ್ ಗಳಿಸಿ ಬಹುಬೇಗನೆ ವಿಕೆಟ್ ಒಪ್ಪಿಸಿದರು. ಹೆನ್ರಿಚ್‌ಕ್ಲಾಸೆನ್ ಕೇವಲ 51 ಎಸೆತಗಳಲ್ಲಿ ಭರ್ಜರಿ 6 ಸಿಕ್ಸರ್ ಹಾಗೂ 8 ಬೌಂಡರಿ ಒಳಗೊಂಡ 104 ರನ್ ಸಿಡಿಸಿ ಆರ್‌ಸಿಬಿ ಬೌಲರ್‌ಗಳನ್ನು ಚೆಂಡಾಡಿದರು. ಬಳಿಕ ಹರ್ಷಲ್ ಪಟೇಲ್ ಎಸೆತದಲ್ಲಿ ಅನಗತ್ಯ ಹೊಡೆತಕ್ಕೆ ಕೈ ಹಾಕಿ ವಿಕೆಟ್ ಕೈ ಚೆಲ್ಲಿದರು. ಹ್ಯಾರಿ ಬ್ರೂಕ್ 27 ರನ್ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರು. ಆರ್‌ಸಿಬಿ ಪರ ಬ್ರೇಸ್‌ವೆಲ್ 2 ವಿಕೆಟ್ ಕಬಳಿಸಿದರೆ, ಸಿರಾಜ್, ಶಬಾಜ್‌ಅಹ್ಮದ್ ತಲಾ ಒಂದೊಂದು ವಿಕೆಟ್ ಪಡೆದರು.



ವಿರಾಟ್‌ಕೊಹ್ಲಿಗೆ ಪಂದ್ಯ ಶ್ರೇಷ್ಠ

ಅಂಕಪಟ್ಟಿಯಲ್ಲಿ 14 ಅಂಕಗಳೊಂದಿಗೆ ಹಾಗೂ ಉತ್ತಮ ನೆಟ್ ರನ್‌ರೇಟ್ ಹೊಂದಿರುವ ಆರ್‌ಸಿಬಿ ತಂಡದ ಪ್ಲೇ ಆಫ್ ಪ್ರವೇಶಾವಕಾಶಕ್ಕೆ ಇನ್ನೊಂದೆ ಹೆಜ್ಜೆ ಸನಿಹದಲ್ಲಿದೆ.

ಕೊಹ್ಲಿಯ ಮೇ 18ರ ಶತಕ ವಿಶೇಷ

2016ರ ಮೇ 18ರಂದು ಪಂಜಾಬ್ ವಿರುದ್ಧ ಶತಕ ಗಳಿಸಿದ್ದ ಕೊಹ್ಲಿ, 7 ವರ್ಷಗಳ ಬಳಿಕ ಅದೇ ದಿನದಂದು ಶತಕ ಸಿಡಿಸಿ, ಶತಕದ ಬರ ನೀಗಿಸಿಕೊಂಡಿದ್ದು ವಿಶೇಷವಾಗಿತ್ತು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು ನಗರ, ವೆಂಕಟೇಶ್ವರನಗರ, ಆಲನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಮಹದೇವುರವರ ಮಗನಾದ ಶ್ರೀ ರಘು ಪಿ.ಎಂ ರವರು ಈ ಕೆಳಕಂಡ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆ.ಎಂ. ಹುಂಡಿ ಗ್ರಾಮ ಅರಳಿಮರದ ಬೀದಿಯಲ್ಲಿ ವಾಸವಾಗಿರುವ ಲೇಟ್ ಚಲುವರಾಜುರವರ ಮಗನಾದ ಸಿ.ದೀಪು ಮತ್ತು ಇವರ ಧರ್ಮಪತ್ನಿಯಾದ ಶ್ರೀಮತಿ ಜ್ಯೋತಿ ಇವರಿಂದ ಖರೀದಿಸಲು ಇಚ್ಛಿಸಿ ಇವರ ಇಚ್ಛೆ ಮೇರೆಗೆ ದಿನಾಂಕ 17–11–2022 ರಂದು ಕ್ರಯದ ಕರಾರನ್ನು ಮಾಡಿಕೊಂಡಿದ್ದು, ಷಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾರೂ ವ್ಯವಹರಿಸಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಪಡಿಸಲಾಗುತ್ತಿದ್ದು ಒಂದೊಮ್ಮೆ ಈಗಿರುವಾಗ್ಯೂ ಯಾರಾದರೂ ವ್ಯವಹರಿಸಿದಲ್ಲಿ ಅಂತಹ ವ್ಯವಹಾರಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತುಗಳು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ದೇವನೂರಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 33/1, 35ರಲ್ಲಿ ವಿಸ್ತೀರ್ಣ ಎಕರೆ 1–77 ಗುಂಟೆ ಮತ್ತು 0.24 ಗುಂಟೆ ಜಮೀನನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪಡೆಸಿಕೊಂಡಿದ್ದು ಸದರೀ ಪ್ರಾಧಿಕಾರವು ಮಂಜೂರು ಮಾಡಬಹುದಾದ ಪ್ರೋತ್ಸಾಹದಾಯಕ ನಿವೇಶನಗಳ ಅಳತೆ 40x60, 20x30 ಅಡಿಗಳ ಎರಡು ನಿವೇಶನಗಳು.

ಸಹಿ/– **ಮನುಕುಮಾರ್,**
ಬಿಎಎಲ್., ಎಲ್‌ಎಲ್‌ಬಿ
ವಕೀಲರು, ನಂ.35, ಕುವೆಂಪು ಟ್ರಸ್ಟ್ ಬಿಲ್ಡಿಂಗ್, ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–12.
ಮೊ: 9620828974
ಸ್ಥಳ: ಮೈಸೂರು ದಿನಾಂಕ: 18–03–2022

PUBLIC NOTICE

Notice is hereby issued to the general public that Sri. VIKRAM SAMSI, S/O. Late. Anant Vaman Samsi, Residing at # 120, Prestige Oasis Addevishwanathapura, Doddaballapur Road, Raj ankunte, Bengaluru has agreed to sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within FIFTEEN (15) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF THE PROPERTY BEARING # 68, MEASURING EAST TO WEST 75 FEET AND NORTH TO SOUTH $67^1/_2$ FEET, SITUATED AT BLOCK 3/A, 12th CROSS, V. V. PURAM (KALIDASA CROSS ROAD), V. V. MOHALLA, MYSURU COMPRISING OF GROUND & FIRST FLOOR BUILDING & BOUNDED ON:-
EAST BY: CONSERVANCY, WEST BY: ROAD,
NORTH BY: PROPERTY BEARING NO. 67,
SOUTH BY : PROPERTY BEARING NO. 69

Sd/- M.SANJAY JAIN
B.B.M.L.L.B.CCL, CMJFS, ADVOCATE
#L, 50/2A, I Floor, Ashoka Road MYSORE 570001, email: msj186@yahoo.co.in
Mobile: 93414-64636

Place: Mysuru | Date: 18.05.2023

ಮೈಸೂರು ಜಿಲ್ಲೆಯ ಮಹದೇವಪ್ಪ, ತನ್ವೀರ್, ವೆಂಕಟೇಶ್ ಸಂಪುಟ ಸೇರುವ ವಿಶ್ವಾಸ


ಮಹದೇವಪ್ಪ


ತನ್ವೀರ್ ಸೇಠ್


ಕೆ.ವೆಂಕಟೇಶ್

ಮೈಸೂರು, ಮೇ 18(ಎಸ್‌ಬಿಡಿ)– ಕಾಂಗ್ರೆಸ್ ಸರ್ಕಾರ ರಚನೆಗೆ ಮುಹೂರ್ತ ನಿಗದಿಯಾಗಿದ್ದು, ಮೈಸೂರು ಜಿಲ್ಲೆಯ ಯಾವ ಶಾಸಕರಿಗೆ ಸಚಿವ ಸ್ಥಾನ ಲಭಿಸಲಿದೆ ಎಂಬ ಕುತೂಹಲ ಜನರಲ್ಲಿ ಮೂಡಿದೆ.

ಮುಖ್ಯಮಂತ್ರಿಯಾಗಲಿರುವ ಸಿದ್ದರಾಮಯ್ಯ ಸೇರಿ 8 ಮಂದಿ ಮೈಸೂರು ಜಿಲ್ಲೆಯ ಶಾಸಕರಿದ್ದಾರೆ. ಇವರಲ್ಲಿ ಚಾಮರಾಜ ಕ್ಷೇತ್ರದ ಕೆ.ಹರೀಶ್‌ಗೌಡ, ನಂಜನಗೂಡಿನ ದರ್ಶನ್ ಧ್ರುವನಾರಾಯಣ್ ಹಾಗೂ ಕೆ.ಆರ್.ನಗರದ ಡಿ.ರವಿಶಂಕರ್ ಮೊದಲ ಬಾರಿ ವಿಧಾನಸಭೆಗೆ ಪ್ರವೇಶಿಸಿದ್ದಾರೆ. ಇನ್ನು ಹೆಚ್.ಡಿ.ಕೋಟೆ ಅನಿಲ್ ಚಿಕ್ಕಮಾದು 2ನೇ ಬಾರಿ ಶಾಸಕರಾಗಿದ್ದು, ಇನ್ನೂ ಯುವಕ.

ಉಳಿದಂತೆ ನರಸಿಂಹರಾಜ ಕ್ಷೇತ್ರದ ತನ್ವೀರ್ ಸೇಠ್, ಪಿರಿಯಾಪಟ್ಟಣದ ಕೆ.ವೆಂಕಟೇಶ್ ಹಾಗೂ ತಿ.ನರಸೀಪುರದ ಡಾ.ಹೆಚ್.ಸಿ.ಮಹದೇವಪ್ಪ ಹಿರಿಯ ಶಾಸಕರಾಗಿದ್ದಾರೆ. ಕೆ.ವೆಂಕಟೇಶ್ ಹೊರತುಪಡಿಸಿ ಉಳಿದಿಬ್ಬರು 2013ರ ಸಿದ್ದರಾಮಯ್ಯನವರ ಕ್ಯಾಬಿನೆಟ್‌ನಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಾಗಾಗಿ ಈ ಮೂವರಲ್ಲಿ ಯಾರಾದರೊಬ್ಬರು ಸಚಿವ ಸಂಪುಟ ಸೇರಬಹುದೆಂದು ಹೇಳಲಾಗಿದೆ.

ಈ ಸಂಬಂಧ ಪ್ರತಿಕ್ರಿಯಿಸಿದ ಶಾಸಕ ತನ್ವೀರ್ ಸೇಠ್, ಸರ್ಕಾರ ರಚನೆಗೆ ದಿನಾಂಕ ನಿಗದಿಯಾಗಿದೆ. ಸಿಎಲ್‌ಪಿ ಸಭೆಯಲ್ಲಿ ಏನೆಲ್ಲಾ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಾರೆ ನೋಡೋಣ ಎಂದಿದ್ದಾರೆ. ಡಾ.ಹೆಚ್.ಸಿ.ಮಹದೇವಪ್ಪ ಅವರ ಸಂಪರ್ಕ ಸಾಧ್ಯವಾಗಿಲ್ಲವಾದರೂ ಅವರು ಮತ್ತೆ ಸಚಿವರಾಗುವ ಸಾಧ್ಯತೆ ಇದೆ ಎಂದು ಅವರ ನಿಕಟವರ್ತಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಿರಿಯಾಪಟ್ಟಣ ಶಾಸಕ ಕೆ.ವೆಂಕಟೇಶ್ ಅವರನ್ನು ಈ ಬಾರಿ ಸಚಿವರನ್ನಾಗಿ ಮಾಡುವುದು ನಿಶ್ಚಿತ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ಕೆ.ವೆಂಕಟೇಶ್ ಅವರಿಗೂ ಈ ವಿಶ್ವಾಸವಿದೆ. ಕಳೆದ ಬಾರಿಯೇ ಸಚಿವ ಸ್ಥಾನ ನೀಡುತ್ತಾರೆಂಬ ನಿರೀಕ್ಷೆಯಿತ್ತು. ಈ ಬಾರಿ ನನ್ನನ್ನು ಪರಿಗಣಿಸಬಹುದೆಂಬ ವಿಶ್ವಾಸವಿದೆ ಎಂದಿದ್ದಾರೆ.

ಸಿದ್ದರಾಮಯ್ಯ ಸಂಪುಟ ಸೇರಲು ಐವರ ನಡುವೆ ಪೈಪೋಟಿ

ಚಲುವರಾಯಸ್ವಾಮಿಗೆ ಸಂಪುಟದಲ್ಲಿ ಮೊದಲ ಆದ್ಯತೆ ಸಾಧ್ಯತೆ

● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಮೇ 18– ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾಗಿದ್ದು, ಇವರೊಂದಿಗೆ ಮೇ 20ರಂದು 20ಕ್ಕೂ ಹೆಚ್ಚು ಸಚಿವರು ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇರುವುದರಿಂದ ಸಿದ್ದರಾಮಯ್ಯ ಸಂಪುಟ ಸೇರಲು ಜಿಲ್ಲೆಯ ಕಾಂಗ್ರೆಸ್ ಶಾಸಕರ ನಡುವೆ ಪೈಪೋಟಿ ಏರ್ಪಟ್ಟಿದೆ.

ಈ ಬಾರಿಯ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ 7 ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳಲ್ಲಿ (ದರ್ಶನ್ ಪುಟ್ಟಣ್ಣಯ್ಯ ಸೇರಿ) ಕಾಂಗ್ರೆಸ್ ಗೆದ್ದು ಬೀಗಿದ್ದು, ಈ ಪೈಕಿ ನಾಗಮಂಗಲ ಕ್ಷೇತ್ರದ ಶಾಸಕ ಎನ್.ಚಲುವರಾಯಸ್ವಾಮಿ, ಮಳವಳ್ಳಿ ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ಇವರೊಂದಿಗೆ ಎಂಎಲ್‌ಸಿಗಳಾದ ದಿನೇಶ್ ಗೂಳಿಗೌಡ ಹಾಗೂ ಮಧು ಜಿ.ಮಾದೇಗೌಡ ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ಎನ್.ಚಲುವರಾಯಸ್ವಾಮಿ: ನಾಗಮಂಗಲ ಕ್ಷೇತ್ರದಲ್ಲಿ 1999, 2004, 2013ರಲ್ಲಿ ಜೆಡಿಎಸ್‌ನಿಂದ ಶಾಸಕರಾಗಿದ್ದ ಚೆಲುವರಾಯಸ್ವಾಮಿ, ಪ್ರಸ್ತುತ ಮೊದಲ ಬಾರಿಗೆ ಕಾಂಗ್ರೆಸ್‌ನಿಂದ ಶಾಸಕರಾಗಿದ್ದಾರೆ. 2004 ರಲ್ಲಿ 2ನೇ ಬಾರಿ ಶಾಸಕರಾದಾಗ ಸಮ್ಮಿಶ್ರ ಸರ್ಕಾರದಲ್ಲಿ ಧರಂಸಿಂಗ್ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಸಂಪುಟದಲ್ಲಿ ಆರೋಗ್ಯ ಹಾಗೂ ಸಾರಿಗೆ ಸಚಿವರಾಗಿ ಕೆಲಸ ಮಾಡಿರುವ ಅನುಭವವಿರುವ ಚಲುವರಾಯಸ್ವಾಮಿ 2009ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಮಂಡ್ಯ ಕ್ಷೇತ್ರದ ಸಂಸದರಾಗಿದ್ದರು. ಒಂದು ಕಾಲದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರ ಪರಮಾಪ್ತರಾಗಿದ್ದ ಚಲುವರಾಯಸ್ವಾಮಿ, 2017ರಲ್ಲಿ ಅಡ್ಡ ಮತದಾನ ಮಾಡಿ ಜೆಡಿಎಸ್‌ನಿಂದ ಅಮಾನತುಗೊಂಡಿದ್ದರು. ಬಳಿಕ 2018 ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋಲನುಭವಿಸಿದ್ದ ಅವರು ಈ ಬಾರಿಯ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ್ದಾರೆ.

ಕಳೆದ 5 ವರ್ಷದಲ್ಲಿ 2 ಎಂಎಲ್‌ಸಿ ಹಾಗೂ ಸ್ಥಳೀಯ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಚಲುವರಾಯಸ್ವಾಮಿ, ಈ ಬಾರಿ ಮಂಡ್ಯದಲ್ಲಿ ಕಾಂಗ್ರೆಸ್ 6 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಇವರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯಿಂದ ಸಿದ್ದರಾಮಯ್ಯ ಸಂಪುಟಕ್ಕೆ ಮೊದಲ ಆದ್ಯತೆ ಚಲುವರಾಯಸ್ವಾಮಿ ಆಗಿದ್ದಾರೆ.


ಚಲುವರಾಯಸ್ವಾಮಿ


ರಮೇಶ್‌ಬಾಬು


ಪಿ.ಎಂ.ನರೇಂದ್ರಸ್ವಾಮಿ


ದಿನೇಶ್ ಗೂಳಿಗೌಡ


ಮಧು ಜಿ.ಮಾದೇಗೌಡ

ರಮೇಶ್‌ಬಾಬು ಬಂಡಿಸಿದ್ದೇಗೌಡ: ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಿಂದ 2008 ಹಾಗೂ 2013ರಲ್ಲಿ ಸತತ 2 ಬಾರಿ ಜೆಡಿಎಸ್‌ನಿಂದ ಶಾಸಕರಾಗಿದ್ದ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, 2017ರಲ್ಲಿ ಚಲುವರಾಯಸ್ವಾಮಿ ಜೊತೆಗೂಡಿ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿ, ಜೆಡಿಎಸ್‌ನಿಂದ ಅಮಾನತುಗೊಂಡು 2018ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋಲನುಭವಿಸಿದ್ದರು. ಈ ಚುನಾವಣೆಯಲ್ಲಿ ಶ್ರೀರಂಗಪಟ್ಟಣದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪ್ರಚಂಡ ಜಯಭೇರಿ ಬಾರಿಸಿದ್ದಾರೆ.

ಕೌಟುಂಬಿಕ ರಾಜಕೀಯ ಹಿನ್ನೆಲೆ ಹೊಂದಿರುವ ಬಂಡಿಸಿದ್ದೇಗೌಡ, 3ನೇ ಬಾರಿ ಶಾಸಕರಾಗಿರುವುದರಿಂದ ಮಂತ್ರಿ ಸ್ಥಾನಕ್ಕೆ ಅವರೂ ಕೂಡ ಆಕಾಂಕ್ಷಿಯಾಗಿದ್ದಾರೆ. ಆದರೆ ಚಲುವರಾಯಸ್ವಾಮಿಗೆ ಮೊದಲ ಆದ್ಯತೆ ಎಂದಾಗ ರಮೇಶ್‌ಬಾಬು ಬಂಡಿಸಿದ್ದೇಗೌಡ ಹಿಂದೆ ಸರಿಯುವ ಸಾಧ್ಯತೆ ಇದೆ.

ಪಿ.ಎಂ.ನರೇಂದ್ರಸ್ವಾಮಿ: ನರೇಂದ್ರಸ್ವಾಮಿ ಮಳವಳ್ಳಿ ಮೀಸಲು ಕ್ಷೇತ್ರದಿಂದ 3 ಬಾರಿ ಶಾಸಕರಾಗಿದ್ದಾರೆ. 2008ರಲ್ಲಿ ಪಕ್ಷೇತರರಾಗಿ, 2013 ಹಾಗೂ 2023ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿರುವ ಇವರು, 2008ರಲ್ಲಿ ಬಿ.ಎಸ್.ಯಡಿಯೂರಪ್ಪ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಕಾರ್ಯ ನಿರ್ವಹಿಸಿದ ಅನುಭವ ಇವರಿಗಿದೆ. ದಲಿತ ಕೋಟಾದಿಂದ ಸಚಿವ ಸ್ಥಾನದ ಆಕಾಂಕ್ಷಿಯಾಗಿರುವ ಇವರು, ಸಂಪುಟ ಸೇರಲು ಭಾರೀ ಪೈಪೋಟಿ ನಡೆಸುತ್ತಿದ್ದಾರೆ. ಆದರೆ ದಲಿತ ಕೋಟಾದಿಂದ ರಾಜ್ಯದಲ್ಲಿ ಹೆಚ್.ಸಿ.ಮಹದೇವಪ್ಪ, ಡಾ.ಜಿ. ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಪ್ರಿಯಾಂಕ್ ಖರ್ಗೆ, ಆರ್.ಬಿ.ತಿಮ್ಮಾಪುರ ಹೀಗೆ ಬಹಳಷ್ಟು ಜನ ಸಂಪುಟ ಸೇರಲು ಮುಂದಾಗಿರುವುದರಿಂದ ನರೇಂದ್ರಸ್ವಾಮಿಗೆ ಅವಕಾಶ ಸಿಗುತ್ತಾ ಎಂಬ ಕುತೂಹಲ ಮೂಡಿದೆ.

ದಿನೇಶ್ ಗೂಳಿಗೌಡ: ಸ್ಥಳೀಯ ಸಂಸ್ಥೆ ಮೂಲಕ ಮಂಡ್ಯ ಜಿಲ್ಲೆಯಿಂದ ವಿಧಾನಪರಿಷತ್ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆಯಾಗಿರುವ ದಿನೇಶ್ ಗೂಳಿಗೌಡ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತ. ಇವರು ಸಹ ಈ ಬಾರಿಯ ನೂತನ ಸರ್ಕಾರದಲ್ಲಿ ಸಂಪುಟ ಸೇರಲು ಆಕಾಂಕ್ಷಿತರಾಗಿದ್ದಾರೆ. ಕೆಪಿಸಿಸಿ ಮಾಧ್ಯಮ ವಿಭಾಗದಲ್ಲಿ ದಶಕಗಳ ಕಾಲ ಕಾರ್ಯ ನಿರ್ವಹಿಸಿರುವ ಇವರು, ಕಳೆದ ವರ್ಷ ನಡೆದ ಎಂಎಲ್‌ಸಿ ಚುನಾವಣೆಯಲ್ಲಿ ಜಯ ಸಾಧಿಸಿದ್ದಾರೆ. ರಾಹುಲ್ ಗಾಂಧಿ ನಡೆಸಿದ ಬಹು ನಿರೀಕ್ಷಿತ ಭಾರತ್ ಜೋಡೋ ಯಾತ್ರೆಯಲ್ಲಿ ಕರ್ನಾಟಕ ಹಾಗೂ ತೆಲಂಗಾಣ ರಾಜ್ಯಗಳ ಉಸ್ತುವಾರಿ ವಹಿಸಿಕೊಂಡು ಯಶಸ್ವಿಯಾಗಿ ನಡೆಸಿದ ಕೀರ್ತಿ ದಿನೇಶ್‌ಗಿದ್ದು, ಕೆಪಿಸಿಸಿ ಮಾಧ್ಯಮ ಸಂವಹನದಲ್ಲಿ ಸಕ್ರಿಯವಾಗಿರುವ ಇವರು ಸಹ ಸಚಿವ ಸ್ಥಾನಕ್ಕೆ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ.

ಮಧು ಜಿ.ಮಾದೇಗೌಡ: ಕಳೆದ ವರ್ಷ ನಡೆದ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಹುದೊಡ್ಡ ಗೆಲುವು ದಾಖಲಿಸಿದ ಮಧು ಮಾದೇಗೌಡ, ಮಂಡ್ಯ ಜಿಲ್ಲೆಯ ಹಿರಿಯ ಮುತ್ಸದ್ದಿ, ಮಾಜಿ ಸಂಸದ ಜಿ.ಮಾದೇಗೌಡ ಪುತ್ರ. ಈ ಹಿಂದೆ 2008ರಲ್ಲಿ ಬಿಜೆಪಿಯಿಂದಲೂ ವಿಧಾನಪರಿಷತ್ ಸದಸ್ಯರಾಗಿದ್ದ ಮಧು, ಎರಡು ಬಾರಿ ಮೇಲ್ಮನೆ ಸದಸ್ಯರಾಗಿದ್ದು, ಅವರು ಸಹ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

ಒಟ್ಟಾರೆ ಚಲುವರಾಯಸ್ವಾಮಿ, ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ ಹಾಗೂ ಮಧು ಜಿ.ಮಾದೇಗೌಡ ಪೈಕಿ ಚಲುವರಾಯಸ್ವಾಮಿಗೆ ಹೆಚ್ಚಿನ ಅವಕಾಶವಿದ್ದು, ಇವರನ್ನು ಹೊರತುಪಡಿಸಿದರೆ, ಮತ್ತೊರ್ವ ಶಾಸಕ ಅಥವಾ ದಲಿತ ಕೋಟಾದಿಂದ ನರೇಂದ್ರಸ್ವಾಮಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ಹೆದ್ದಾರಿಯಲ್ಲಿ ಕಾರು ಪಲ್ಟಿ: ಪ್ರಯಾಣಿಕರು ಪಾರು

ಮಂಡ್ಯ, ಮೇ 18– ತಾಲೂಕಿನ ಹೊಸ ಬೂದನೂರು ಗ್ರಾಮದ ಬಳಿಯ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಕಾರು ಪಲ್ಟಿಯಾಗಿ ಪ್ರಯಾಣಿಕರು ಆಶ್ಚರ್ಯಕರ ರೀತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಗುರುವಾರ ಬೆಳಗ್ಗೆ ಅವಘಡ ಸಂಭವಿಸಿದ್ದು, ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದ ಫಾರ್ಚೂನರ್ ಕಾರು ಚಾಲಕನ ನಿಯಂತ್ರಣ ತಪ್ಪಿ, ಹೈವೇಯಿಂದ ಉಜ್ಜಿಕೊಂಡು ಹೋಗಿ ಫೆನ್ಸಿಂಗ್ ಭೇದಿಸಿ ಪಲ್ಟಿ ಹೊಡೆದು ಸರ್ವಿಸ್ ರಸ್ತೆಗೆ ಬಿದ್ದಿದೆ. ಅಪಘಾತದಲ್ಲಿ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರ್‌ನಲ್ಲಿದ್ದ ಬೆಂಗಳೂರು ಮೂಲದ ನಾಲ್ವರು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ವೇಳೆ ಗ್ರಾಮಸ್ಥರು ಬಸ್ಸಿಗಾಗಿ ಕಾಯುತ್ತಾ ನಿಂತಿದ್ದರೆ ಸಾವು ನೋವುಗಳು ಸಂಭವಿಸುತ್ತಿತ್ತು ಎನ್ನಲಾಗಿದೆ. ಈ ಸಂದರ್ಭ ಗ್ರಾಮಸ್ಥರು ರಸ್ತೆ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಇದನ್ನು ಸರಿಪಡಿಸಬೇಕೆಂದು ಹಲವು ಬಾರಿ ಮನವಿ ಮಾಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ

ಕಳುವಾಗಿದ್ದ 130 ಮೊಬೈಲ್‌ಗಳು ವಾರಸುದಾರರ ಸುಪರ್ದಿಗೆ

ಮಂಡ್ಯ ಮೇ 18– ಜಿಲ್ಲಾ ಪೊಲೀಸ್ ಇಲಾಖೆಯಿಂದ ಸೆಂಟ್ರಲ್ ಎಕ್ಯುಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ ತಂತ್ರಾಂಶದ ಸಹಾಯದಿಂದ ಕಳೆದ ಒಂದು ತಿಂಗಳಲ್ಲಿ ಕಳ್ಳತನ/ಕಾಣೆಯಾಗಿದ್ದ 23 ಲಕ್ಷ ರೂ. ಬೆಲೆ ಬಾಳುವ ವಿವಿಧ ಕಂಪನಿಯ 130 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡು ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ವಾರಸುದಾರರಿಗೆ ಒಪ್ಪಿಸಲಾಯಿತು.



ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಸಾರ್ವಜನಿಕರು ಕಳೆದುಕೊಂಡಿದ್ದ ವಿವಿಧ ಕಂಪನಿಯ ಮೊಬೈಲ್ ಫೋನ್‌ಗಳನ್ನು ದೂರುದಾರರಿಗೆ ಹಿಂದಿರುಗಿಸಲಾಗಿದೆ. ಸಾರ್ವಜನಿಕರು ತಮ್ಮ ಮೊಬೈಲ್ ಫೋನ್ ಕಳೆದು ಹೋದಲ್ಲಿ ಸಿಇಎನ್ ಪೋರ್ಟಲ್ ಅನ್ನು ಬಳಸಿಕೊಂಡು, ನಿಮ್ಮ ಮೊಬೈಲ್‌ನ ಐಎಂಇಐ ನಂಬರ್ ತೆಗೆದುಕೊಂಡು ಸಮೀಪದ ಪೊಲೀಸ್ ಠಾಣೆಗೆ ದೂರು ನೀಡಿ, ದೂರಿನ ಪ್ರತಿ ಪಡೆದು www.ceir.gov.in ನಲ್ಲಿ ಲಾಗಿನ್ ಆಗಿ ದೂರನ್ನು ದಾಖಲಿಸಿ ಎಂದರು.

ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನ/ ಕಾಣೆಯಾಗಿದ್ದ ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡುವ ಸಂಬಂಧವಾಗಿ ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕ ಸಿ.ಇ.ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ಸಿಇಎನ್ ಅಪರಾಧ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕ ಎನ್.ಜಯಕುಮಾರ್ ನೇತೃತ್ವದಲ್ಲಿ ಎಸ್‌ಐ ರಾಘವೇಂದ್ರ ಎಂ.ಕಠಾರಿ, ರಸೂಲಸಾಬ ಎಂ.ಗೌಂಡಿ ಹಾಗೂ ಸಿಬ್ಬಂದಿಗಳಾದ ಎ.ಎಂ. ರಾಜೇಅರಸ್, ಎಸ್.ಗಿರೀಶ್, ಹೆಚ್.ಆರ್. ಸುಮನ್ ಒಳಗೊಂಡಂತೆ ಅಧಿಕಾರಿಗಳ ತಂಡ ರಚಿಸಲಾಗಿತ್ತು. ಈ ಪೋರ್ಟಲ್ ಸಹಾಯದಿಂದ ಮೊಬೈಲ್‌ಗಳನ್ನು ಮರಳಿ ವಶಕ್ಕೆ ಪಡೆಯಲು ಯಶಸ್ವಿಯಾಗಿದ್ದಾರೆ ಎಂದರು.

ಈ ಮೊಬೈಲ್‌ಗಳು ಕರ್ನಾಟಕ ಮಾತ್ರವಲ್ಲದೇ ಹೊರ ರಾಜ್ಯಗಳು, ಮಂಡ್ಯದ ಹಲವು ಮೊಬೈಲ್ ಅಂಗಡಿ ಹಾಗೂ ಇತರೆಡೆ ಪತ್ತೆಯಾಗಿದೆ. ಮೊಬೈಲ್ ಕದ್ದವರು ಶೇ.90ರಷ್ಟು ಮಾರಾಟ ಮಾಡುವ ಸಾಧ್ಯತೆ ಇರುವುದರಿಂದ ಮೊಬೈಲ್ ಅನ್ನು ವಾಪಸ್ ಪಡೆದ ವ್ಯಕ್ತಿಗಳ ವಿರುದ್ಧ ನಾವು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಒಂದೇ ಮೊಬೈಲ್ ಅಂಗಡಿಗಳಲ್ಲಿ ಕನಿಷ್ಠ 3 ಮೊಬೈಲ್‌ಗಳು ಪತ್ತೆಯಾದರೆ ಅಥವಾ ಗ್ರಾಹಕರು ಖರೀದಿಸಿದ ಮೊಬೈಲ್‌ಗಳು ಒಂದೇ ಅಂಗಡಿಯಿಂದ ಹೆಚ್ಚು ಮಾರಾಟವಾಗಿದ್ದರೆ, ಆ ಮೂಲಕ ಕದ್ದು ಮೊಬೈಲ್ ಮಾರಿರುವವರ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದರು.

ಕೆ.ಆರ್.ಪೇಟೆ: ದೇವೇಗೌಡರ ಹುಟ್ಟುಹಬ್ಬ ಆಚರಣೆ

ಕೆ.ಆರ್.ಪೇಟೆ, ಮೇ 18– ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ 91ನೇ ಹುಟ್ಟುಹಬ್ಬವನ್ನು ಶಾಸಕ ಹೆಚ್.ಟಿ.ಮಂಜು ನೇತೃತ್ವದಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹೊರ–ಒಳ ರೋಗಿಗಳಿಗೆ ಹಣ್ಣು ಹಂಪಲು, ಪೌರಕಾರ್ಮಿಕರಿಗೆ ಬಟ್ಟೆ ಹಾಗೂ ತೆಂಗಿನ ಸಸಿಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಈ ವೇಳೆ ಮಾತನಾಡಿದ ಶಾಸಕ ಹೆಚ್.ಟಿ. ಮಂಜು, ಮಾಜಿ ಪ್ರಧಾನಿ ದೇವೇಗೌಡರ ಸೇವೆ ರಾಷ್ಟ್ರ, ರಾಜ್ಯಕ್ಕೆ ಅಗತ್ಯವಿರುವುದರಿಂದ ದೇವರು ಅವರಿಗೆ ಆಯಸ್ಸು, ಆರೋಗ್ಯ ಕರುಣಿಸಲಿ ಎಂದು ಪ್ರಾರ್ಥಿಸಿದರು. ದೇವೇಗೌಡರು ರೈತರು, ಮಹಿಳೆಯರ ಮೇಲೆ ಅಪಾರ ಕಾಳಜಿ ಹೊಂದಿದ್ದಾರೆ. ಅವರು ಪ್ರಧಾನಿಯಾಗಿದ್ದ ವೇಳೆ ದೆಹಲಿಯಲ್ಲಿ ಮೆಟ್ರೋ ಯೋಜನೆ ಜಾರಿಗೊಳಿಸಿದರು. ತಾಲೂಕಿಗೆ ಹೇಮಾವತಿ ಯೋಜನೆ ಜಾರಿಗೊಳಿಸುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಿದ್ದಾರೆ. 90ರ ಇಳಿ ವಯಸ್ಸಿನಲ್ಲಿಯೂ ಯುವಕರು ನಾಚುವಂತೆ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ರೈತರ ಪರ ಹೋರಾಟ ಮಾಡುವುದನ್ನು ನಾವು ನೋಡಿದ್ದೇವೆ. ಹೀಗಾಗಿ ದೇವೇಗೌಡರ ರಾಜಕೀಯ ಚಿಂತನೆ, ರೈತರು, ದೀನ ದಲಿತರು, ಬಡವರ ಪರ ಕಾಳಜಿ ಎಲ್ಲಾ ರಾಜಕಾರಣಿಗಳಲ್ಲಿ ಇದ್ದರೆ ಉತ್ತಮ ಸಮಾಜ ನಿರ್ಮಾಣ ಮಾಡಬಹುದಾಗಿದೆ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಮನ್‌ಮುಲ್ ನಿರ್ದೇಶಕ ಡಾಲು ರವಿ, ತಾಲೂಕು ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್, ಜಿಪಂ ಮಾಜಿ ಉಪಾಧ್ಯಕ್ಷೆ ಗಾಯಿತ್ರಿ, ಮುಖಂಡರಾದ ಬಿ.ವಿ.ನಾಗೇಶ್, ಬಸವಲಿಂಗಪ್ಪ, ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಶಿವಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ. ಮಧುಸೂದನ್ ಸೇರಿದಂತೆ ಇತರರಿದ್ದರು.

ಮೂರನೇ ಪುಟದಿಂದ

ಚಂದ್ರು ಭೀಕರ ಹತ್ಯೆ

ಮಂದಿ, ಮಾರಕಾಸ್ತ್ರಗಳಿಂದ ಚಂದ್ರುವಿನ ತಲೆ, ಹೊಟ್ಟೆಗೆ ಹಲವು ಬಾರಿ ಕೊಚ್ಚಿದ್ದಾರೆ. ಹಠಾತ್ ದಾಳಿಯಿಂದ ನೆಲಕ್ಕೆ ಕುಸಿದುಬಿದ್ದು, ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಅವರನ್ನು ಸಂಬಂಧಿಕರು ತಕ್ಷಣ ಖಾಸಗಿ ಆಸ್ಪತ್ರೆಗೆ ಕರೆದೊಯ್ದರಾದರೂ ದಾರಿ ಮಧ್ಯೆಯೇ ಸಾವನ್ನಪ್ಪಿದ್ದಾರೆ. ವಾಹನ ದಟ್ಟಣೆ ಇರುವ, ಸದಾ ಕಿಕ್ಕಿರಿದ ಜನರಿಂದ ಕೂಡಿದ ರಸ್ತೆಯಲ್ಲಿ ಹಾಡುಹಗಲೇ ನಡೆದ ಬರ್ಬರ ಹತ್ಯೆಯಿಂದ ಒಂಟಿಕೊಪ್ಪಲಿನಲ್ಲಿ ಭಯಭೀತ ವಾತಾವರಣ ನಿರ್ಮಾಣವಾಗಿದೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ದೌಡಾಯಿಸಿದ ವಿವಿ ಪುರಂ ಠಾಣೆ ಪೊಲೀಸರು ಆ ಭಾಗದ ರಸ್ತೆ ಸಂಚಾರವನ್ನು ನಿರ್ಬಂಧಿಸಿ, ಜನರನ್ನು ನಿಯಂತ್ರಿಸಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಎಸಿಪಿ ಅಶ್ವತ್‌ನಾರಾಯಣ್ ಸೇರಿದಂತೆ ವಿವಿಧ ಠಾಣೆಗಳ ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸಿದರಲ್ಲದೆ ಪ್ರತ್ಯಕ್ಷದರ್ಶಿಗಳು ಹಾಗೂ ಕುಟುಂಬದವರಿಂದ ಮಾಹಿತಿ ಪಡೆದುಕೊಂಡರು. ಜೊತೆಗೆ ಘಟನೆ ನಡೆದ ಸ್ಥಳದಿಂದ ಅನತಿ ದೂರದ ಅಂಗಡಿಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮರಾಗಳ ಫುಟೇಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಚಂದ್ರುವಿನ ಕುಟುಂಬದವರು, ಸಂಬಂಧಿಕರ ರೋಧನೆ ಮುಗಿಲು ಮುಟ್ಟಿತ್ತು. ಕೆಲಹೊತ್ತಿನಲ್ಲೇ ವಿಷಯ ಹರಡಿ ಒಂಟಿಕೊಪ್ಪಲು ಹಾಗೂ ಸುತ್ತಮುತ್ತಲ ಬಡಾವಣೆಗಳ ನೂರಾರು ಮಂದಿ ಜಮಾಯಿಸಿದ್ದರು. ಚಂದ್ರುವಿನ ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶವಾಗಾರದಲ್ಲಿಡಲಾಗಿದ್ದು, ವೈದ್ಯಕೀಯ ಪರೀಕ್ಷೆ ಬಳಿಕ ಶುಕ್ರವಾರ ಬೆಳಗ್ಗೆ ದೇಹವನ್ನು ವಾರಸುದಾರರಿ ಗೊಪ್ಪಿಸಲಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ನಗರ ಸಶಸ್ತ್ರ ಪಡೆಯ ಕಮಾಂಡೋ ಪಡೆಯನ್ನು ನಿಯೋಜಿಸಲಾಗಿದೆ.

ಮನೆ ಬಳಿಯೇ ಹತ್ಯೆ: ಮನೆ ಬಳಿಯೇ ಚಂದ್ರುವನ್ನು ಹತ್ಯೆ ಮಾಡಲಾಗಿದೆ. ಚಂದ್ರು ಪತ್ನಿ ಶಿಲ್ಪಾ ಅವರು ಒಂಟಿಕೊಪ್ಪಲು ಟೆಂಪಲ್ ರಸ್ತೆಯಲ್ಲಿ ಫಾಸ್ಟ್‌ಫುಡ್ ನಡೆಸುತ್ತಾರೆ. ಇಂದು ಸಂಜೆ ಸುಮಾರು 4.30ರ ವೇಳೆಯಲ್ಲಿ ಫಾಸ್ಟ್‌ಫುಡ್‌ಗೆ ಸಿದ್ಧತೆ ಮಾಡಿ ಪತ್ನಿಯನ್ನು ಕಳುಹಿಸಿಕೊಟ್ಟ ಚಂದ್ರು, ಮನೆ ಸಮೀಪದಲ್ಲೇ ಇರುವ ಟೈಲರ್ ಅಂಗಡಿ ಬಳಿ ಕುಳಿತು ಮಾತನಾಡುತ್ತಿದ್ದರೆ. ಅಂಗಡಿ ಎದುರಿನ ರಸ್ತೆಯಲ್ಲಿ ಇವರ ಮನೆ ಹಾಗೂ ಅಂಗಡಿ ಹಿಂಭಾಗದಲ್ಲೇ ಸಂಬಂಧಿಕರ ಮನೆ ಇದೆ. ಈ ವೇಳೆ ಚಂದ್ರು ಅವರ ಚಿಕ್ಕಮ್ಮ ಊಟಕ್ಕೆ ಕರೆದಿದ್ದಾರೆ. ನಾನು ಆಮೇಲೆ ಊಟ ಮಾಡುವುದಾಗಿ ಹೇಳಿ ಚಂದ್ರು ಅಲ್ಲೇ ಕುಳಿತಿದ್ದಾರೆ. ಸಂಜೆ ಸುಮಾರು 5 ಗಂಟೆ ವೇಳೆಗೆ ದ್ವಿಚಕ್ರ ವಾಹನಗಳಲ್ಲಿ ಬಂದ ನಾಲ್ಕೈದು ಮಂದಿ ಏಕಾಏಕಿ ಮಾರಕಾಸ್ತ್ರಗಳಿಂದ ದಾಳಿ ನಡೆಸಿ, ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಕೇಕೆ ಹಾಕಿಕೊಂಡು ಓಡಿದರು: ಚಂದ್ರು ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದಾಗ ದಾಳಿ ನಡೆಸಿದವರು ಕೇಕೆ ಹಾಕಿಕೊಂಡು ಪರಾರಿಯಾದರು ಎಂದು ಅಲ್ಲಿನ ಜನ ಹೇಳುತ್ತಿದ್ದರು. ಮುಖ್ಯಮಂತ್ರಿ ಆಯ್ಕೆ ವಿಚಾರವಾಗಿ ರಾಜಕೀಯ ಪಕ್ಷದ ಕಾರ್ಯಕರ್ತರು ಜೈಕಾರ ಕೂಗುತ್ತಿರಬಹುದೆಂದುಕೊಂಡಿದ್ದೆವು. ಚಂದ್ರುವಿನ ಚಿಕ್ಕಮ್ಮ ಗೋಳಾಡಿದಾಗಲೇ ನಿಜ ಗೊತ್ತಾಗಿದ್ದು ಎಂದು ಕೆಲ ಮಹಿಳೆಯರು ಮಾತನಾಡಿಕೊಳ್ಳುತ್ತಿದ್ದರು. ಐದಾರು ಮಂದಿ ಹಲ್ಲೆ ನಡೆಸಿದರು ಎಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಇಬ್ಬರು ಮಾತ್ರ ಚಂದ್ರುವಿನ ಮೇಲೆ ದಾಳಿ ನಡೆಸಿದರು ಇನ್ನಿಬ್ಬರು ಜೊತೆಯಲ್ಲಿದ್ದರು ಎನ್ನುತ್ತಾರೆ. ಸಿಸಿ ಕ್ಯಾಮರಾ ದೃಶ್ಯಾವಳಿ ಹಾಗೂ ಪೊಲೀಸರ ತನಿಖೆಯಿಂದ ಸ್ಪಷ್ಟವಾಗಿ ತಿಳಿಯಬೇಕಿದೆ.

ಎರಡು ಪ್ರಕರಣಗಳಲ್ಲಿ ನಿರ್ದೋಷಿ: ಹುಣಸೂರು ಎಪಿಎಂಸಿ ಬಳಿಯ ತೋಟದ ಮನೆಯಲ್ಲಿ 2008ರ ಮೇ 15ರಂದು ಇಬ್ಬರ ಹತ್ಯೆಯಾಗಿತ್ತು. ಹಾಗೆಯೇ 2016ರ ಮೇ 5ರಂದು ಪಡುವಾರಹಳ್ಳಿ ಜೋಡಿ ಮಾರಮ್ಮ ದೇವಾಲಯದ ಬಳಿ ದೇವೇಂದ್ರ ಅಲಿಯಾಸ್ ದೇವು ಹತ್ಯೆಯಾಗಿತ್ತು. ಈ ಎರಡೂ ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಚಂದ್ರು, ದೋಷಮುಕ್ತನಾಗಿ ಕೆಲ ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆಯಾಗಿದ್ದರು. ನಂತರ ಫಾಸ್ಟ್‌ಫುಡ್ ನಡೆಸುತ್ತಿದ್ದ ಪತ್ನಿಗೆ ಸಹಾಯ ಮಾಡಿಕೊಂಡಿದ್ದರು.

ಮನೆಯವರ ಆಕ್ರಂದನ: ಚಂದ್ರು ಅವರ ಪತ್ನಿ ಫಾಸ್ಟ್‌ಫುಡ್ ವ್ಯಾಪಾರ ಆರಂಭಿಸುವಷ್ಟರಲ್ಲೇ ಇತ್ತ ಚಂದ್ರುವಿನ ಹತ್ಯೆ ನಡೆದಿತ್ತು. ಮನೆ ಬಳಿಯೇ ಬರ್ಬರವಾಗಿ ಹತ್ಯೆಗೀಡಾದ ಚಂದ್ರುವಿನ ಕುಟುಂಬದವರು ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಅದರಲ್ಲೂ ಚಂದ್ರುವಿನ ಆರೇಳು ವರ್ಷದ ಪುಟ್ಟ ಮಗುವಿನ ರೋಧನೆ ಕರುಳ ಕಿವುಚುವಂತಿತ್ತು. ಬರ್ಬರ ಹತ್ಯೆಯನ್ನು ಕಣ್ಣಾರೆ ಕಂಡ ಟೈಲರ್ ಆಘಾತಕ್ಕೊಳಗಾಗಿದ್ದರು. ಸುತ್ತಮುತ್ತಲಿನ ಜನ ಭಯಭೀತರಾಗಿದ್ದರು.

ಮೇ ತಿಂಗಳ ಸಾಮ್ಯತೆ: ಹುಣಸೂರು ಜೋಡಿಕೊಲೆ, ಪಡುವಾರಹಳ್ಳಿ ದೇವು ಹತ್ಯೆ ಹಾಗೂ ಒಂಟಿಕೊಪ್ಪಲು ಚಂದ್ರು ಹತ್ಯೆ ನಡೆದಿರುವುದು ಮೇ ತಿಂಗಳಲ್ಲೇ. ಈ ಮೂರು ಪ್ರಕರಣಗಳಲ್ಲಿ ಮೇ ತಿಂಗಳ ಸಾಮ್ಯತೆ ಇದೆ. ಹಾಗಾಗಿ ಹಳೇ ವೈಷಮ್ಯದಿಂದಲೇ ಚಂದ್ರುವಿನ ಹತ್ಯೆ ನಡೆದಿರಬಹುದು ಎಂದು ಶಂಕಿಸಲಾಗಿದೆ. ಆದರೆ ಪೊಲೀಸರ ತನಿಖೆಯಿಂದಲೇ ಸತ್ಯ ತಿಳಿಯಬೇಕಿದೆ.

ಮತ್ತೊಮ್ಮೆ ಸಿದ್ದರಾಮಯ್ಯ ಸಿಎಂ; ಹಿತೈಷಿಗಳು, ಬೆಂಬಲಿಗರಲ್ಲಿ ಸಂತಸ

ಮೈಸೂರು, ಮೇ 18(ಎಂಕೆ)– ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಮತ್ತೊಮ್ಮೆ ಸಿದ್ದರಾಮಯ್ಯ ಅವರು ಆಯ್ಕೆಯಾಗಿರುವ ಹಿನ್ನೆಲೆ ಅವರ ಕೆಲ ಹಿತೈಷಿಗಳು, ಬೆಂಬಲಿಗರು ಹಾಗೂ ಕಾಂಗ್ರೆಸ್ ಮುಖಂಡರು ಅತೀವ ಸಂತಸ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ನ್ಯಾಯದ ಉಳಿವು ಹಾಗೂ ಅಹಿಂದ ಸಮುದಾಯಗಳ ಶ್ರೇಯೋಭಿ ವೃದ್ಧಿಯಾಗಬೇಕಾದರೆ ಸಿದ್ದರಾಮಯ್ಯ ಅವರ ಆಡಳಿತ ಅತ್ಯಂತ ಅವಶ್ಯಕ ಮತ್ತು ಪ್ರಸ್ತುತವೂ ಆಗಿದೆ. ನಾಡಿನ ಹಿತದೃಷ್ಟಿಯಿಂದ ಹಾಗೂ ಪ್ರಜಾಪ್ರಭುತ್ವಕ್ಕೆ ನೈತಿಕ ಬಲ ತುಂಬಲು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಯಾಗುತ್ತಿರುವುದು ಸರಿಯಾಗಿದೆ ಎಂದು 'ಮೈಸೂರು ಮಿತ್ರ'ನೊಂದಿಗೆ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.






■ ಬಿಜೆಪಿ ರಾಜ್ಯದಲ್ಲಿ ಭ್ರಮೆ ಮತ್ತು ದ್ವೇಷದ ಆಡಳಿತ ನಡೆಸಿದೆ. ಕಾನೂನು ಮತ್ತು ಸುವ್ಯವಸ್ಥೆಯೇ ಇಲ್ಲದಂತಾಗಿದೆ. ಕೊಲೆ, ಹಿಂಸೆ, ಕಮಿಷನ್, ಭ್ರಷ್ಟಾಚಾರ ಸೇರಿದಂತೆ ಎಷ್ಟೊಂದು ಅವಾಂತರಗಳು ನಡೆದವು. ಇದೆಲ್ಲವನ್ನೂ ನೋಡಿದ್ದ ರಾಜ್ಯದ ಜನತೆ ಬಿಜೆಪಿ ಸರ್ಕಾರವನ್ನು ತೆಗೆಯಲೇ ಬೇಕು ಎಂದು ನಿರ್ಧರಿಸಿ ಕಾಂಗ್ರೆಸ್‌ಗೆ ಪೂರ್ಣ ಬೆಂಬಲ ನೀಡಿದ್ದಾರೆ. ಬಿಜೆಪಿ, ಜೆಡಿಎಸ್ ಮತ್ತು ಬಿಎಸ್‌ಪಿ ಸೇರಿ ಸಿದ್ದರಾಮಯ್ಯ ಅವರನ್ನು ಸೋಲಿಸುವ ಪ್ರಯತ್ನ ನಡೆದಿತ್ತು. ಅಮಿತ್ ಷಾ ಅವರ 200 ಜನ ಟೆಂಟ್ ಹಾಕಿಕೊಂಡಿದ್ದರು. ದುಡ್ಡಿನ ಹೊಳೆಯನ್ನೇ ಹರಿಸುತ್ತಿದ್ದರು. ಆ ಕಾರಣಕ್ಕಾಗಿ ನಾನು, ನನ್ನ ಮಿತ್ರರು ಸೇರಿ ಬಿಜೆಪಿ ವಿರುದ್ಧ ಹಾಗೂ ಸಿದ್ದರಾಮಯ್ಯ ಪರ ವರುಣದಲ್ಲಿ ಹೆಚ್ಚಿನ ಪ್ರಚಾರ ಮಾಡಿದೆವು. ಕಡೆಗೂ ಸಿದ್ದರಾಮಯ್ಯ ಅವರು ವರುಣದಲ್ಲಿ ಗೆದ್ದು, ಮುಖ್ಯಮಂತ್ರಿಯಾಗುತ್ತಿರುವುದು ಈ ಸಂದರ್ಭಕ್ಕೆ ಅತ್ಯಂತ ಅವಶ್ಯವಾಗಿದೆ. ಬಿಜೆಪಿ ಮಾಡಿರುವ ಅನಾಹುತಗಳನ್ನು ಸರಿಪಡಿಸಬೇಕು. ಮತದಾರರಿಗೆ ಕೊಟ್ಟಿರುವ ಗ್ಯಾರಂಟಿ ಮಾತುಗಳನ್ನು ಉಳಿಸಿಕೊಳ್ಳಬೇಕು. ಮುಂದಿನ ಲೋಕಸಭಾ ಚುನಾವಣೆಗೆ ತಯಾರಾಗಬೇಕೆಂಬುದು ಸೇರಿದಂತೆ ಎದುರಿರುವ ಅಸಾಧಾರಣ ಸವಾಲುಗಳನ್ನು ಸ್ವೀಕರಿಸುವ ಸತ್ವ ಇರುವುದು ಸಿದ್ದರಾಮಯ್ಯ ಅವರಿಗೆ ಮಾತ್ರ. ನಾಡಿನ ಹಿತದೃಷ್ಟಿಯಿಂದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗುವುದು ತುಂಬಾ ಅಗತ್ಯವಾಗಿದೆ.

–ದೇವನೂರು ಮಹದೇವ, ಹಿರಿಯ ಸಾಹಿತಿ



■ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗುತ್ತಿರುವುದು ಅತ್ಯಂತ ಸಂತೋಷದ ವಿಚಾರವಾಗಿದೆ. ಸಮರ್ಥ ನಾಯಕತ್ವದ ಮುಖ್ಯಮಂತ್ರಿ ರಾಜ್ಯಕ್ಕೆ ಬೇಕಾಗಿತ್ತು. ಅದರಂತೆ ಎಲ್ಲಾ ವರ್ಗಗಳ ಹಿತ ಕಾಯುವ ಏಕೈಕ ನಾಯಕ ಸಿದ್ದರಾಮಯ್ಯ ಅವರಾಗಿದ್ದಾರೆ. ಹಾಗೆಯೇ ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಆರ್ಥಿಕ ತಜ್ಞರೂ ಆಗಿರುವ ಅವರು, ಸಿಎಂ ಆಗುವುದು ಅವಶ್ಯಕವಾಗಿತ್ತು.

–ಕೆ.ಮರೀಗೌಡ, ಕಾಂಗ್ರೆಸ್ ಮುಖಂಡ



■ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗುತ್ತಿರುವುದು ಅತೀವ ಸಂತೋಷ ತಂದಿದೆ. ಶೋಷಿತ ಸಮುದಾಯಗಳಿಗೆ ದೊರೆತಂತಹ ಭರವಸೆಯಾಗಿದೆ. ಈ ಬಾರಿಯ ಚುನಾವಣೆಯಲ್ಲಿ ಅಹಿಂದ ವರ್ಗಗಳು ಕಾಂಗ್ರೆಸ್ ಬೆಂಬಲಿಸಿವೆ. ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿಯಾಗುತ್ತಿರುವುದು ನಮ್ಮೆಲ್ಲರ ಶ್ರಮ, ಒಗ್ಗಟ್ಟು ಹಾಗೂ ಪ್ರಜಾಪ್ರಭುತ್ವಕ್ಕೆ ದೊರೆತ ನೈತಿಕ ಬಲವಾಗಿದೆ. ಸಂವಿಧಾನ ಬದಲು ಮಾಡುತ್ತೇವೆ, ಕಿತ್ತುಹಾಕುತ್ತೇವೆ ಎಂದು ಹೇಳುತ್ತಿದ್ದ ಬಿಜೆಪಿಗೆ ತಕ್ಕ ಪಾಠ ಕಲಿಸಲಾಗಿದೆ.

– ಕೆ.ಎಸ್.ಶಿವರಾಂ, ರಾಜ್ಯಾಧ್ಯಕ್ಷ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ



■ ನಿಜಕ್ಕೂ ರಾಜ್ಯದ ಜನತೆಗೆ ಶುಭ ಸುದ್ದಿ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಹಾಗೂ ಉಪ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಒಳ್ಳೆಯ ಕೆಲಸಗಳನ್ನು ಮಾಡಲಿದ್ದಾರೆ. ಅವರಿಬ್ಬರಿಗೂ ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ. ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ಒಳ್ಳೆಯದಾಗಲಿದೆ. ಅಭಿವೃದ್ಧಿ ದಿಕ್ಕಿನಲ್ಲಿ ಕೆಲಸ ಮಾಡಲಿದ್ದಾರೆ ಎಂಬ ನಂಬಿಕೆ ಇದೆ.

– ಎಸ್.ಸಿದ್ದೇಗೌಡ, ಕಾಂಗ್ರೆಸ್ ಮುಖಂಡ



■ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಸಮಾಜವಾದಿಗಳಾದ ರಾಮ್ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್, ರೈತ ನಾಯಕ ಪ್ರೊ.ನಂಜುಂಡಸ್ವಾಮಿ ಅವರ ತತ್ವ ಸಿದ್ಧಾಂತಗಳನ್ನು ಸುಮಾರು 45 ವರ್ಷಗಳಿಂದ ಗಟ್ಟಿಯಾಗಿ ನಂಬಿರುವ ಹಾಗೂ ನೈತಿಕ ರಾಜಕಾರಣಕ್ಕೆ ಉದಾಹರಣೆಯಾಗಿರುವ ಸಿದ್ದರಾಮಯ್ಯ ಅವರು, ಮತ್ತೆ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಿರುವುದು ಸಂತಸದ ಜೊತೆಗೆ ಸಮಾಜಕ್ಕೆ ಅನಿವಾರ್ಯವೂ ಆಗಿದೆ.

–ಡಾ.ಬಿ.ಜೆ.ವಿಜಯ್‌ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ

■ ನೊಂದ ಕಾಯಕ ಸಮಾಜಗಳು, ಶೋಷಿತ ಸಮುದಾಯಗಳ ಪರವಾಗಿ ಕೆಲಸ ಮಾಡುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗುತ್ತಿದ್ದು, ಅವರಿಗೆ ಹಾಗೂ ಸಂಘಟನಾ ಚತುರ ಎಂದು ಖ್ಯಾತಿ ಪಡೆದ ಉಪ ಮುಖ್ಯಮಂತ್ರಿಯಾಗುತ್ತಿರುವ ಡಿ.ಕೆ.ಶಿವಕುಮಾರ್ ಅವರಿಗೆ ಹಿಂದುಳಿದ ವರ್ಗಗಳ ಕಡೆಯಿಂದ ತುಂಬು ಹೃದಯ ಶುಭಾಶಯಗಳನ್ನು ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ರಾಜ್ಯದ ಜನರಿಗೆ ನೆಮ್ಮದಿ ಜೀವನ ತರಲಿದ್ದಾರೆ ಎಂಬ ಪೂರ್ಣ ಭರವಸೆ ಇದೆ.

– ಎನ್.ಆರ್.ನಾಗೇಶ್, ನಗರಾಧ್ಯಕ್ಷ, ಕೆಪಿಸಿಸಿ ಹಿಂದುಳಿದ ವರ್ಗಗಳ ಮೈಸೂರು ನಗರ ವಿಭಾಗ



■ ಸಿದ್ದರಾಮಯ್ಯ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗುತ್ತಿರುವುದು ತುಂಬಾ ಖುಷಿ ತಂದಿದೆ. ಹಿಂದುಳಿದ ವರ್ಗಗಳ ನಾಯಕರಾದ ಅವರ ಶ್ರಮದಿಂದಾಗಿ ನಾಯಕ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಸಾಧ್ಯವಾಯಿತು. ನಾಯಕ ಸಮುದಾಯದ ಕೈ ಹಿಡಿದಿದ್ದೇ ಸಿದ್ದರಾಮಯ್ಯ. ಬಡವನಾಗಿದ್ದ ನಾನು ಸಿದ್ದರಾಮಯ್ಯ ಅವರ ಹೆಸರು ಮತ್ತು ಫೋಟೋ ಇಟ್ಟುಕೊಂಡು ನಗರ ಪಾಲಿಕೆ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ.

– ಲೋಕೇಶ್ ಪಿಯಾ, ನಗರಪಾಲಿಕೆ ಸದಸ್ಯ



■ ಭಾರತದ ಬಹು ಸಂಸ್ಕೃತಿಯ ಭಾವನೆಗಳಿಗೆ ಗೌರವ ಕೊಟ್ಟಂತಹ ಸಿದ್ದರಾಮಯ್ಯ ಅವರು ಮತ್ತೆ ರಾಜ್ಯದ ಮುಖ್ಯಮಂತ್ರಿಯಾಗುತ್ತಿರುವುದನ್ನು ಸಾಂಸ್ಕೃತಿಕ ಲೋಕದ ನಾವುಗಳು ಅತ್ಯಂತ ಹೃದಯ ಪೂರ್ವಕವಾಗಿ ಸ್ವಾಗತಿಸುತ್ತೇವೆ. ಸಂವಿಧಾನ ಬದ್ಧವಾಗಿ, ಪ್ರಜಾಪ್ರಭುತ್ವದ ನೀತಿ–ನಿಯಮಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಅನುಸರಣೆ ಮಾಡುವ ಸಿದ್ದರಾಮಯ್ಯ ಅವರ ಆಯ್ಕೆ ಸಮರ್ಥವಾಗಿದೆ.

– ಜನ್ನಾರ್ಧನ್(ಜನ್ನಿ), ಹಿರಿಯ ರಂಗಕರ್ಮಿ

ಬಾಡಿಗೆಗೆ ಕರೆದೊಯ್ದು ಚಾಕು ತೋರಿಸಿ ಚಾಲಕನ ಸುಲಿಗೆ: ಪರಾರಿಯಾದ ಖದೀಮರು

ಮೈಸೂರು, ಮೇ 18(ಎಂಕೆ)– ಬಾಡಿಗೆಗೆ ಆಟೋ ಕರೆದೊಯ್ದು ಚಾಲಕನಿಗೆ ಚಾಕು ತೋರಿಸಿ ಜೀವ ಬೆದರಿಕೆ ಹಾಕಿ, ಮೊಬೈಲ್ ಹಾಗೂ 2 ಸಾವಿರ ರೂ. ದೋಚಿ, ಆಟೋದೊಂದಿಗೆ ಪರಾರಿಯಾದ ಘಟನೆ ಗುರುವಾರ ರಾತ್ರಿ ಮೈಸೂರು ತಾಲೂಕಿನ ದೇವಲಾಪುರ ಬಳಿ ನಡೆದಿದೆ.

ಶ್ರೀರಂಗಪಟ್ಟಣ ತಾಲೂಕಿನ ಆನಂದೂರು (ಪಂಪ್‌ಹೌಸ್ ಸಮೀಪ) ಗ್ರಾಮದ ನಿವಾಸಿ ರವಿ, ಎಂದಿನಂತೆ ಅರಮನೆ ಎದುರು ಬಾಡಿಗೆಗೆ ಕಾದಿದ್ದಾಗ ರಾತ್ರಿ 9 ಗಂಟೆಗೆ ಮೈಸೂರು ಅರಮನೆ ದಕ್ಷಿಣ ದ್ವಾರ(ಗನ್‌ಹೌಸ್ ಬಳಿ ಕಾಡಾ ಕಚೇರಿ ಎದುರು)ದಿಂದ ಹೊರಬಂದ ಇಬ್ಬರು ಕಡಕೊಳ ಗ್ರಾಮಕ್ಕೆ ಬಾಡಿಗೆ ಬರುವಂತೆ ಕರೆದಿದ್ದಾರೆ. ಅದರಂತೆ ಇಬ್ಬರನ್ನು ತಮ್ಮ ಆಟೋ(ಕೆಎ.09.ಸಿ.5424)ದಲ್ಲಿ ಕೂರಿಸಿಕೊಂಡು ಕಡಕೊಳ ಕಡೆಗೆ ಹೋಗುವಾಗ ಗುಂಡೂರಾವ್‌ನಗರ ಬಳಿ ಮದ್ಯ ಖರೀದಿಸಿದ ಅವರು, ಬಂಡಿಪಾಳ್ಯ ಆರ್‌ಎಂಸಿ ಮಾರುಕಟ್ಟೆ ಬಳಿ ರಾತ್ರಿ ವೇಳೆ ಕಡಕೊಳದಿಂದ ನಮ್ಮೂರಿಗೆ ಹೋಗಲು ಯಾವ ಬಸ್‌ಗಳು ಸಿಗುವುದಿಲ್ಲ. ಹಾಗಾಗಿ ದೇವಲಾಪುರಕ್ಕೆ ಬಿಡುವಂತೆ ವರಸೆ ಬದಲಿಸಿದ್ದಾರೆ.

ರಾತ್ರಿ ವೇಳೆ ಬಸ್ ಸಿಗುವುದು ಕಡಿಮೆ ಎಂಬುದನ್ನರಿತ ರವಿ, ದೇವಲಾಪುರಕ್ಕೆ ಕರೆದುಕೊಂಡು ಹೋಗಲು ಒಪ್ಪಿದ್ದಾರೆ. ಅದರಂತೆ ದೇವಲಾಪುರ ತಲುಪಿದ ಬಳಿಕ ಅವರು, ನಮ್ ಹುಡುಗನಿಗೆ ಎಣ್ಣೆ(ಮದ್ಯ) ಕೊಡಬೇಕು ಸ್ವಲ್ಪ ಮುಂದಕ್ಕೆ ಕರೆದುಕೊಂಡು ಹೋಗಿ ಎಂದು ಪುಸಲಾಯಿಸಿದ್ದಾರೆ. ದೇವಲಾಪುರ ಬಳಿ ಗೇಟ್‌ವೊಂದರ ಹತ್ತಿರ ಆಟೋ ನಿಲ್ಲಿಸಿದ ರವಿ, ಆಟೋವನ್ನು ಸ್ಟಾರ್ಟ್‌ನಲ್ಲಿಯೇ ನಿಲ್ಲಿಸಿ ಮೂತ್ರ ವಿಸರ್ಜನೆ ಮಾಡಲು ರಸ್ತೆ ಬದಿಗೆ ತೆರಳಿದ್ದಾರೆ. ಈ ವೇಳೆ ಮೂತ್ರ ವಿಸರ್ಜನೆ ಮಾಡುತ್ತಿದ್ದ ರವಿ ಕತ್ತನ್ನು ಒಬ್ಬ ಹಿಡಿದರೆ, ಮತ್ತೊರ್ವ ಚಾಕು ತೋರಿಸಿ ಕೂಗಬೇಡ ಎಂದು ಬೆದರಿಸಿದ್ದಾನೆ. ಅಲ್ಲದೆ ರವಿ ಪ್ಯಾಂಟ್ ಜೇಬಿನಲ್ಲಿದ್ದ ಮೊಬೈಲ್, 2 ಸಾವಿರ ರೂ. ಕಿತ್ತುಕೊಂಡು ಹಳ್ಳಕ್ಕೆ ತಳ್ಳಿ ಆಟೋ ಸಮೇತ ಪರಾರಿಯಾಗಿದ್ದಾರೆ.

ಸ್ಥಳಕ್ಕೆ ಪೊಲೀಸರ ಭೇಟಿ: ಬಳಿಕ ಅಲ್ಲಿಂದ ಮೈಸೂರು ಗ್ರಾಮಾಂತರ ಠಾಣೆಗೆ ವಿಷಯ ತಿಳಿಸಿದ ರವಿ, ಜೊತೆಗೆ ರಾತ್ರಿ 12 ಗಂಟೆಗೆ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ಮೈಸೂರು ಗ್ರಾಮಾಂತರ ಹಾಗೂ ವರುಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಆರೋಪಿಗಳಿಗೆ ಬಲೆ ಬೀಸಿದ್ದಾರೆ. ಈ ಸಂಬಂಧ ಇನ್ನು ಪ್ರಕರಣ ದಾಖಲಾಗಿಲ್ಲ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 18– ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣರ ಸಂಘದ ವತಿಯಿಂದ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 85 ಕ್ಕಿಂತ ಹೆಚ್ಚು ಅಂಕ ಪಡೆದಿರುವ ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮೇ 30 ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಮೊ. 9845717501, 9141637888 ಸಂಪರ್ಕಿಸಬಹುದು.

ಮತ್ತೊಮ್ಮೆ ಸಿಎಂ ಗಾದಿ ದಕ್ಕಿಸಿಕೊಂಡ ಛಲದಂಕ ಮಲ್ಲ ಸಿದ್ದರಾಮಯ್ಯ

ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುತ್ತಿದ್ದಾರೆ. ಮೈಸೂರು ಜಿಲ್ಲೆಯಿಂದ ಮುಖ್ಯಮಂತ್ರಿಯಾಗಿರುವ ಎರಡನೆಯವರು ಇವರು. ದಿವಂಗತ ಡಿ.ದೇವರಾಜ ಅರಸು ಮೈಸೂರು ಜಿಲ್ಲೆಯ ಹುಣಸೂರು ಕ್ಷೇತ್ರದಿಂದ ಆಯ್ಕೆಯಾಗಿ ಮೊದಲಿಗೆ ಮುಖ್ಯಮಂತ್ರಿಯಾಗಿದ್ದರು. 5 ವರ್ಷ ಅಧಿಕಾರ ಪೂರೈಸಿದ ಹಿರಿಮೆ ಅರಸು ಅವರಿಗೆ ಮಾತ್ರವಲ್ಲ, ಸಿದ್ದರಾಮಯ್ಯನವರೂ ಕೂಡ ದಕ್ಕಿಸಿಕೊಂಡಿದ್ದಾರೆ.


ಸಿದ್ದರಾಮಯ್ಯ

ಮೈಸೂರು ತಾಲೂಕಿನ ಸಿದ್ದರಾಮನಹುಂಡಿ ಗ್ರಾಮದ ಸಿದ್ದರಾಮೇಗೌಡ ಮತ್ತು ಬೋರಮ್ಮ ದಂಪತಿಯ ಪುತ್ರನಾಗಿ 1948ರ ಆಗಸ್ಟ್ 12ರಂದು ಜನಿಸಿದ ಸಿದ್ದರಾಮಯ್ಯ ಅವರದು ತುಂಬು ಕುಟುಂಬ. ಬಾಲ್ಯದಲ್ಲಿ ಶಾಲೆಗೆ ಹೋಗದೆ ಕುರಿ ಮೇಯಿಸುತ್ತಾ, ಜಾನಪದ ನೃತ್ಯಗಳಾದ ವೀರಗಾಸೆ, ಡೊಳ್ಳು ಕುಣಿತ, ಕಂಸಾಳೆ ನೃತ್ಯ ಮುಂತಾದವುಗಳನ್ನು ಮೈಗೂಡಿಸಿಕೊಂಡು ಅಡ್ಡಾಡುತ್ತಿದ್ದ ಬಾಲಕ ಸಿದ್ದರಾಮಯ್ಯ ಅವರಿಗೆ ಶಿಕ್ಷಕರೊಬ್ಬರು ಮರಳಿನಲ್ಲಿ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಬಾಲಕನ ಚುರುಕುತನವನ್ನು ಗಮನಿಸಿದ ಶಿಕ್ಷಕ ರಾಜಪ್ಪ ಎಂಬುವರು ಸಿದ್ದರಾಮಯ್ಯ ಅವರ ತಂದೆಯವರನ್ನು ಸಂಪರ್ಕಿಸಿ ಬಾಲಕನನ್ನು ಶಾಲೆಗೆ ಸೇರಿಸಲು ಮನವೊಲಿಸುವಲ್ಲಿ ಯಶಸ್ವಿಯಾದರು. ಸಿದ್ದರಾಮಯ್ಯ ಆಗ ನೇರವಾಗಿ ಐದನೇ ತರಗತಿಗೆ ಪ್ರವೇಶ ಪಡೆದಿದ್ದರು.

ವಿದ್ಯಾಭ್ಯಾಸದಲ್ಲಿ ಮುಂದಿದ್ದ ಸಿದ್ದರಾಮಯ್ಯ, ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲೇ ಪೂರೈಸಿ, ಪಿಯುಸಿ ಮತ್ತು ಬಿಎಸ್ಸಿ ಪದವಿಯನ್ನು ಮೈಸೂರಿನಲ್ಲಿ ಮುಗಿಸಿದರು.

ನಂತರ ಕಾನೂನು ಪದವಿ ಪಡೆದು ಹಿರಿಯ ವಕೀಲ ಚಿಕ್ಕಬೋರಯ್ಯ ಅವರ ಬಳಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮೈಸೂರಿನ ಸರಸ್ವತಿಪುರಂನಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಪಡೆದು ಸ್ನೇಹಿತರೊಂದಿಗಿದ್ದು, ವಕೀಲಿ ವೃತ್ತಿ ಮಾಡುತ್ತಿದ್ದ ಸಿದ್ದರಾಮಯ್ಯ, ಅಂದಿನ ರೈತ ನಾಯಕ ಎಂ.ಡಿ.ನಂಜುಂಡಸ್ವಾಮಿ, ಸಾಹಿತಿ ದೇವನೂರ ಮಹದೇವ ಇತರರೊಂದಿಗೆ ಸೇರಿ ಜಯಪ್ರಕಾಶ್ ನಾರಾಯಣ್, ರಾಮಸ್ವಾಮಿ ಪೆರಿಯಾರ್, ಲೋಹಿಯಾ ಮುಂತಾದವರ ತತ್ವಗಳ ಆಧರಿಸಿ ನಡೆಯುತ್ತಿದ್ದ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದರು.

ರಾಜಕಾರಣದಲ್ಲಿ ಆಸಕ್ತಿ ಹೊಂದಿದ್ದ ಸಿದ್ದರಾಮಯ್ಯ ಒಮ್ಮೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ನಂತರ ಸ್ವಗ್ರಾಮದವರ ಒತ್ತಾಯದ ಮೇರೆಗೆ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ಅವರು 1983ರಲ್ಲಿ ಭಾರತೀಯ ಲೋಕದಳದ ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸುವ ಮೂಲಕ ವಿಧಾನಸಭೆ ಪ್ರವೇಶಿಸಿದರು. ನಂತರ ಇವರು ಜನತಾ ಪಕ್ಷಕ್ಕೆ ಸೇರ್ಪಡೆಗೊಂಡಾಗ ಆಗ ರಾಜ್ಯ ಸರ್ಕಾರದಿಂದ ರಚಿಸಲ್ಪಟ್ಟ ಕನ್ನಡ ಕಾವಲು ಸಮಿತಿಯ ಪ್ರಥಮ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. 1985ರಲ್ಲಿ ಮತ್ತೆ ಜನತಾ ಪಕ್ಷದಿಂದ ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಸ್ಪರ್ಧಿಸಿ ಗೆಲುವು ಸಾಧಿಸಿದ ಅವರು, ಪಶು ಸಂಗೋಪನಾ ಸಚಿವರಾಗಿ ನಂತರ ರೇಷ್ಮೆ ಮತ್ತು ಸಾರಿಗೆ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು.

1989ರ ಚುನಾವಣೆಯಲ್ಲಿ ಪರಾಭವಗೊಂಡ ಸಿದ್ದರಾಮಯ್ಯ, 1992ರಲ್ಲಿ ಜನತಾ ಪಕ್ಷ ಇಬ್ಭಾಗವಾದಾಗ ಇವರು ದೇವೇಗೌಡರ ಸಮಾಜವಾದಿ ಜನತಾ ಪಕ್ಷದಲ್ಲಿ ಸೇರ್ಪಡೆಗೊಂಡರು. ನಂತರ ಜನತಾ ದಳಕ್ಕೆ ದೇವೇಗೌಡರು ಸೇರಿದಾಗ ಅವರೊಂದಿಗೆ ತಾವೂ ಆ ಪಕ್ಷಕ್ಕೆ ಸೇರಿ ರಾಜ್ಯ ಕಾರ್ಯದರ್ಶಿಯಾದರು. 1994ರ ಚುನಾವಣೆಯಲ್ಲಿ ಗೆಲುವು ಸಾಧಿಸಿ ದೇವೇಗೌಡರ ಸಂಪುಟದಲ್ಲಿ ಹಣಕಾಸು ಸಚಿವರಾದರು. ಅಲ್ಲದೇ ಜೆ.ಹೆಚ್.ಪಟೇಲ್ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. 1999ರ ಚುನಾವಣೆ ವೇಳೆಗೆ ಜನತಾದಳ ಇಬ್ಭಾಗವಾದಾಗ ದೇವೇಗೌಡರ ಜೆಡಿಎಸ್‌ನಲ್ಲಿ ಗುರುತಿಸಿಕೊಂಡ ಸಿದ್ದರಾಮಯ್ಯ, 1999ರ ವಿಧಾನಸಭಾ ಚುನಾವಣೆಯಲ್ಲಿ ಸೋಲನನುಭವಿಸಿದರು.


2004ರಲ್ಲಿ ಗೆಲುವು ಸಾಧಿಸಿ, ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಾಗ, ಧರಂ ಸಿಂಗ್ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು, ಅಬಕಾರಿ ಸಚಿವರಾಗಿದ್ದ ಸಿದ್ದರಾಮಯ್ಯ, ಹೆಚ್.ಡಿ.ದೇವೇಗೌಡರೊಂದಿಗಿನ ಮನಸ್ತಾಪದಿಂದಾಗಿ ಜೆಡಿಎಸ್‌ನಿಂದ ಉಚ್ಚಾಟಿಸಲ್ಪಟ್ಟರು. ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ 2006ರಲ್ಲಿ ಡಿಸೆಂಬರ್‌ನಲ್ಲಿ ಉಪ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆಲುವು ಸಾಧಿಸಿದ್ದರು.

2008ರ ಚುನಾವಣೆ ವೇಳೆಗೆ ಕ್ಷೇತ್ರ ಪುನರ್ ವಿಂಗಡಣೆಯಾಗಿ ವರುಣ ಕ್ಷೇತ್ರ ಉದಯವಾದಾಗ ಸಿದ್ದರಾಮಯ್ಯ ತಮ್ಮ ಸ್ವಗ್ರಾಮವನ್ನು ಒಳಗೊಂಡಿರುವ ವರುಣದಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿ ವಿಪಕ್ಷ ನಾಯಕರಾದರು. 2013ರ ಚುನಾವಣೆಯಲ್ಲಿ ಅದೇ ಕ್ಷೇತ್ರದಿಂದ ಆಯ್ಕೆಯಾಗಿ ಮುಖ್ಯಮಂತ್ರಿಯಾದರು. 2018ರಲ್ಲಿ ವರುಣ ಕ್ಷೇತ್ರವನ್ನು ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಬಿಟ್ಟುಕೊಟ್ಟು, ಚಾಮುಂಡೇಶ್ವರಿ ಮತ್ತು ಬಾದಾಮಿ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಅವರು, ಚಾಮುಂಡೇಶ್ವರಿಯಲ್ಲಿ ಪರಾಭವಗೊಂಡರೆ, ಬಾದಾಮಿಯಲ್ಲಿ ಗೆಲ್ಲುವ ಮೂಲಕ ಮತ್ತೊಮ್ಮೆ ವಿಪಕ್ಷ ನಾಯಕನ ಪಟ್ಟ ಅಲಂಕರಿಸಿದರು.

ರಾಜಕೀಯ ಹೋರಾಟಗಾರರಾದ ಸಿದ್ದರಾಮಯ್ಯ, ವಿಧಾನಸಭೆಯಲ್ಲಿ ಆಡಳಿತಾರೂಢ ಬಿಜೆಪಿಯ ಭ್ರಷ್ಟಾಚಾರದ ಬಗ್ಗೆ ಅಬ್ಬರಿಸುತ್ತಿದ್ದರು. ಈ ಚುನಾವಣೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿದ ಅವರು ಆಡಳಿತಾರೂಢ ಪಕ್ಷದ ಭ್ರಷ್ಟಾಚಾರದ ಬಗ್ಗೆ ಎಳೆ-ಎಳೆಯಾಗಿ ಬಿಡಿಸಿಟ್ಟರು. ಅದೇ ವೇಳೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಐದು ಗ್ಯಾರಂಟಿಗಳನ್ನು ನೀಡಿದ್ದು, ಸಮರ್ಥ ಹಣಕಾಸು ಸಚಿವರಾಗಿದ್ದ ಸಿದ್ದರಾಮಯ್ಯ, ಈ ಯೋಜನೆಗಳಿಗೆ ಹಣಕಾಸನ್ನು ಒದಗಿಸುತ್ತಾರೆ ಎಂಬ ವಿಶ್ವಾಸವನ್ನೂ ಕೂಡ ಜನರಲ್ಲಿ ಮೂಡಿಸಲಾಯಿತು. ಈ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ತಮ್ಮ ಹುಟ್ಟೂರು ಒಳಗೊಂಡಿರುವ ಅದೃಷ್ಟದ ಕ್ಷೇತ್ರವಾದ ವರುಣದಿಂದಲೇ ಆಯ್ಕೆಯಾಗಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುತ್ತಿದ್ದಾರೆ.

ಟ್ರಬಲ್ ಶೂಟರ್ ಡಿಕೆಶಿ ರಾಜಕೀಯ ವಿರೋಧಿಗಳಿಗೆ 'ಕನಕಪುರ ಬಂಡೆ'

ಕರ್ನಾಟಕದ 9ನೇ ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷದ ಟ್ರಬಲ್ ಶೂಟರ್ ಎಂದೇ ಕರೆಯಲ್ಪಡುವವರು. ಎಂತಹುದೇ ಪರಿಸ್ಥಿತಿಯನ್ನು ಎದೆಗುಂದದೆ ಎದುರಿಸುವ ಅವರು 'ಕನಕಪುರ ಬಂಡೆ' ಎಂದೂ ಬಿಂಬಿತರಾಗಿದ್ದಾರೆ.


ಡಿ.ಕೆ. ಶಿವಕುಮಾರ್

ಕನಕಪುರ ಸಮೀಪದ ದೊಡ್ಡಲಹಳ್ಳಿ ಗ್ರಾಮದ ಕೆಂಪೇಗೌಡ ಮತ್ತು ಗೌರಮ್ಮ ದಂಪತಿಯ ಹಿರಿಯ ಪುತ್ರನಾಗಿ 1962ರ ಮೇ 15ರಂದು ಜನಿಸಿದ ಡಿ.ಕೆ.ಶಿವಕುಮಾರ್, ವಿದ್ಯಾರ್ಥಿ ದೆಸೆಯಲ್ಲೇ ರಾಜಕಾರಣವನ್ನು ಮೈಗೂಡಿಸಿಕೊಂಡವರು. ಬೆಂಗಳೂರಿನ ಕಾಲೇಜುಗಳಲ್ಲಿ ಚುನಾವಣೆಗಳ ಮೂಲಕ ವಿದ್ಯಾರ್ಥಿ ನಾಯಕನ ಆಯ್ಕೆಯಾಗುತ್ತಿದ್ದ ಕಾಲದಲ್ಲಿ ಆರ್.ವಿ. ಕಾಲೇಜಿನ ವಿದ್ಯಾರ್ಥಿ ನಾಯಕನಾದ ಡಿಕೆಶಿ, ಕಾಂಗ್ರೆಸ್ ಪಕ್ಷಕ್ಕೆ ಸೇರಿ ವಿದ್ಯಾರ್ಥಿ ಕಾಂಗ್ರೆಸ್ (ಎನ್‌ಎಸ್‌ಯುಐ) ಅಧ್ಯಕ್ಷರಾಗಿದ್ದರು. ನಂತರ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಯುವಕರನ್ನು ಸಮರ್ಥವಾಗಿ ಸಂಘಟಿಸುವಲ್ಲಿ ಯಶಸ್ವಿಯಾಗಿದ್ದರು.

1985ರ ವಿಧಾನಸಭಾ ಚುನಾವಣೆಯಲ್ಲಿ ಜನತಾ ಪಕ್ಷದ ಭದ್ರಕೋಟೆಯಾಗಿದ್ದ ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿ ಹೆಚ್.ಡಿ.ದೇವೇಗೌಡರ ವಿರುದ್ಧ ಕೇವಲ 22 ವರ್ಷದ ಯುವಕನಾಗಿದ್ದ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತ್ತು. ರಾಜಕೀಯ ಮುತ್ಸದ್ಧಿ ವಿರುದ್ಧ ಪ್ರಥಮ ಚುನಾವಣೆಯಲ್ಲಿ ಸೋಲುಂಡ ಡಿಕೆಶಿ, 1989ರಲ್ಲಿ ಅದೇ ಸಾತನೂರು ಕ್ಷೇತ್ರದಿಂದ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದರು. ಆನಂತರ ಅವರು 4 ಬಾರಿ ಸಾತನೂರು ಕ್ಷೇತ್ರ, ಕ್ಷೇತ್ರ ಪುನರ್ ವಿಂಗಡಣೆ ವೇಳೆ ಅದು ಹರಿದು ಹಂಚಿ ಹೋದ ನಂತರ 4 ಬಾರಿ ಕನಕಪುರ ಕ್ಷೇತ್ರದಿಂದ ಶಾಸಕರಾಗಿ ಸತತವಾಗಿ ಆಯ್ಕೆಯಾಗುತ್ತಾ ಬಂದು ಸೋಲಿಲ್ಲದ ಸರದಾರರಾಗಿದ್ದಾರೆ.

ಯುವಕನಾಗಿದ್ದಾಗಲೇ ರಾಜಕಾರಣದಲ್ಲಿ ಯಾವುದೇ ಸಾಹಸಕ್ಕೂ ಹಿಂಜರಿಯದೇ ಕೈಹಾಕುತ್ತಿದ್ದ ಡಿ.ಕೆ.ಶಿವಕುಮಾರ್, 1989ರಲ್ಲಿ ಪ್ರಥಮ ಬಾರಿಗೆ ಚಿಕ್ಕ ವಯಸ್ಸಿನಲ್ಲಿ ಶಾಸಕರಾಗಿದ್ದರೂ ಅನುಭವಿ ರಾಜಕಾರಣಿಯಂತೆ ರಾಜಕೀಯ ತಂತ್ರಗಾರಿಕೆಯಲ್ಲಿ ಮುಂದಿದ್ದರು. ಆಗ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲ್ ಅವರನ್ನು ಅನಾರೋಗ್ಯದ ಕಾರಣದಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅಧಿಕಾರದಿಂದ ಕೆಳಗಿಳಿಸಿದಾಗ ಎಸ್.ಬಂಗಾರಪ್ಪ ಮುಖ್ಯಮಂತ್ರಿಯಾಗಲು ಡಿಕೆಶಿ ಕೊಡುಗೆ ನೀಡಿದ್ದರು. ಈ ಕಾರಣದಿಂದಲೇ ಮೊದಲ ಬಾರಿಗೆ ಶಾಸಕರಾಗಿದ್ದ ಡಿಕೆಶಿಗೆ ಬಂಗಾರಪ್ಪ ಅವರು ತಮ್ಮ ಸಂಪುಟದಲ್ಲಿ ರಾಜ್ಯ ಸಚಿವ ಸ್ಥಾನ ನೀಡಿ, ಕಾರಾಗೃಹಗಳು ಮತ್ತು ಗೃಹ ರಕ್ಷಕ ದಳ ಖಾತೆ ನೀಡಿದ್ದರು.

ನಂತರದ ದಿನಗಳಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಮತ್ತೋರ್ವ ರಾಜಕೀಯ ಮುತ್ಸದ್ಧಿ ಎಸ್.ಎಂ.ಕೃಷ್ಣ ಅವರ ನೀಲಿಗಣ್ಣಿನ ಹುಡುಗನಾಗಿದ್ದ ಡಿ.ಕೆ.ಶಿವಕುಮಾರ್ ಅವರಿಗೆ ಎಸ್.ಎಂ.ಕೃಷ್ಣ ಅವರು ತಮ್ಮ ಸಂಪುಟದಲ್ಲಿ ಮಹತ್ವದ ನಗರಾಭಿವೃದ್ಧಿ ಖಾತೆಯನ್ನು ನೀಡಿದ್ದರು.

2002ರಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್ ರಾವ್ ದೇಶ್‌ಮುಖ್ ಸರ್ಕಾರ ಇಕ್ಕಟ್ಟಿಗೆ ಸಿಲುಕಿ ಅವರು ವಿಧಾನಸಭೆಯಲ್ಲಿ ವಿಶ್ವಾಸ ಮತ ಸಾಬೀತುಪಡಿಸುವಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿಗೆ ಕರೆತಂದು ಒಂದು ವಾರ ಕಾಲ ಅವರಿಗೆ ರಕ್ಷಣೆ ಒದಗಿಸಿ, ವಿಶ್ವಾಸ ಮತದ ದಿನದಂದು ಮಹಾರಾಷ್ಟ್ರಗೆ ಕರೆದೊಯ್ದು, ವಿಲಾಸ್ ರಾವ್ ದೇಶ್‌ಮುಖ್ ಸರ್ಕಾರವನ್ನು ಉಳಿಸುವ ಮೂಲಕ ರಾಷ್ಟ್ರದ ಗಮನ ಸೆಳೆದಿದ್ದ ಡಿ.ಕೆ.ಶಿವಕುಮಾರ್, 2017ರಲ್ಲಿ ಬಿಜೆಪಿ ಚಾಣಕ್ಯ ಅಮಿತ್ ಷಾ ಅವರ ವ್ಯೂಹವನ್ನು ಭೇದಿಸಿ, ಅಹಮದ್ ಪಟೇಲ್ ಅವರು ಗುಜರಾತ್‌ನಿಂದ ರಾಜ್ಯಸಭೆಗೆ ಆಯ್ಕೆಯಾಗಬೇಕಾದಂತಹ ಸಂದರ್ಭದಲ್ಲಿ ಅಲ್ಲಿನ 42 ಶಾಸಕರನ್ನು ಬೆಂಗಳೂರಿಗೆ ಕರೆತಂದು ತಮ್ಮ ರಕ್ಷಣೆಯಲ್ಲಿಟ್ಟುಕೊಳ್ಳುವ ಮೂಲಕ ಅಹಮದ್ ಪಟೇಲ್ ರಾಜ್ಯಸಭಾ ಸದಸ್ಯರಾಗಲು ಸಹಕರಿಸಿದ ಡಿ.ಕೆ.ಶಿವಕುಮಾರ್, ಮತ್ತೊಮ್ಮೆ ರಾಷ್ಟ್ರದ ಗಮನ ಸೆಳೆದಿದ್ದರು.

2008ರಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್, ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ನಂತರ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಸಂಪುಟದಲ್ಲಿ ಇಂಧನ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಡಿ.ಕೆ.ಶಿವಕುಮಾರ್, 2018ರ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಸಂಪುಟದಲ್ಲಿ ನೀರಾವರಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್‌ನ 17 ಶಾಸಕರು ಆಪರೇಷನ್ ಕಮಲಾಗೆ ಒಳಗಾಗಿ ಮುಂಬೈಗೆ ತೆರಳಿದ್ದಾಗ ಅವರನ್ನು ವಾಪಸ್ ಕರೆತಂದು ಸಮ್ಮಿಶ್ರ ಸರ್ಕಾರ ಉಳಿಸಲು ಪ್ರಯತ್ನಿಸಿದರಾದರೂ, ಅವರ ಪ್ರಯತ್ನ ವಿಫಲವಾಯಿತು.

2017ರ ಆಗಸ್ಟ್ 2ರಂದು ಇವರ ಬೆಂಗಳೂರಿನ ನಿವಾಸ, ಕಚೇರಿ ಹಾಗೂ ಸಂಬಂಧಿಕರ ಮನೆಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿತ್ತು. ಆನಂತರ 2019ರ ಸೆಪ್ಟೆಂಬರ್ 3ರಂದು ಅಕ್ರಮ ಹಣ ವರ್ಗಾವಣೆ ಹಾಗೂ ಆದಾಯ ತೆರಿಗೆ ವಂಚನೆ ಆರೋಪದಡಿ ಬಂಧಿಸಲ್ಪಟ್ಟು ಕೆಲ ದಿನಗಳ ಕಾಲ ಡಿಕೆಶಿ ತಿಹಾರ್ ಜೈಲಿನಲ್ಲಿದ್ದರು. ಆದರೆ ಅಹಮದ್ ಪಟೇಲ್‌ಗೆ ರಾಜ್ಯಸಭಾ ಚುನಾವಣೆಯಲ್ಲಿ ನೆರವಾಗಲು ತಾವು ಗುಜರಾತ್ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿಗೆ ಕರೆತಂದು ರಕ್ಷಿಸಿದ ಕಾರಣದಿಂದ ಬಿಜೆಪಿ ಸರ್ಕಾರ ಆದಾಯ ತೆರಿಗೆ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡು ತಮ್ಮ ಮೇಲೆ ಸುಳ್ಳು ಪ್ರಕರಣ ದಾಖಲಿಸಿದೆ ಎಂಬುದು ಡಿ.ಕೆ.ಶಿವಕುಮಾರ್ ಅವರ ವಾದ.

ಅಂದಿನ ಎಐಸಿಸಿಯ ಅಧ್ಯಕ್ಷೆ ಸೋನಿಯಾ ಗಾಂಧಿಯವರು ತಿಹಾರ್ ಜೈಲಿಗೇ ಹೋಗಿ ಡಿಕೆಶಿ ಅವರಿಗೆ ಸಾಂತ್ವನ ಹೇಳಿ, ಅಭಯ ನೀಡಿದ್ದರು. ನಂತರ ಜೈಲಿನಿಂದ ಅವರು ಬಿಡುಗಡೆಯಾಗುತ್ತಿದ್ದಂತೆಯೇ 2020ರ ಜುಲೈ 2ರಂದು ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ನೀಡಲಾಯಿತು. ಸಂಘಟನಾ ಚತುರರು ಹಾಗೂ ದಿಟ್ಟ ಹೋರಾಟಗಾರರಾದ ಡಿ.ಕೆ.ಶಿವಕುಮಾರ್, ಪಕ್ಷದ ರಾಜ್ಯಾಧ್ಯಕ್ಷರಾದ ನಂತರ ಪಕ್ಷಕ್ಕೆ ಬಲ ತಂದರು. ಮೇಕೆದಾಟು ಪಾದಯಾತ್ರೆ, ರಾಜ್ಯ ಸರ್ಕಾರಕ್ಕೆ ತೀವ್ರ ತಲೆನೋವಾಗಿ ಪರಿಣಮಿಸಿತ್ತು. ನಂತರ ಆಡಳಿತಾರೂಢ ಸರ್ಕಾರದ ಭ್ರಷ್ಟಾಚಾರ ವಿಚಾರವನ್ನು ಕೈಗೆತ್ತಿಕೊಂಡು ರಾಜ್ಯಾದ್ಯಂತ ಸಂಚರಿಸಿ, ಇತರ ಪಕ್ಷಗಳ ಹಲವಾರು ಮುಖಂಡರನ್ನು ಹಾಗೂ ಕಾರ್ಯಕರ್ತರನ್ನು ತಮ್ಮತ್ತ ಸೆಳೆದು ಕಾಂಗ್ರೆಸ್ ಅನ್ನು ಸಮರ್ಥವಾಗಿ ಸಂಘಟಿಸುವ ಮೂಲಕ ತಮ್ಮ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಲು ಕಾರಣರಾದರು. ಮುಖ್ಯಮಂತ್ರಿ ಸ್ಥಾನ ತಮಗೇ ಬೇಕು ಎಂದು ಐದು ದಿನಗಳ ಕಾಲ ಪಟ್ಟು ಹಿಡಿದು ಕುಳಿತಿದ್ದ ಡಿ.ಕೆ.ಶಿವಕುಮಾರ್, ಕೊನೆಗೆ ಪಕ್ಷದ ವರಿಷ್ಠರ ತೀರ್ಮಾನದಂತೆ ಸಿದ್ದರಾಮಯ್ಯನವರ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಲು ಒಪ್ಪಿದ್ದಾರೆ.

ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ: ತವರೂರು ಸಿದ್ದರಾಮನಹುಂಡಿಯಲ್ಲಿ ಸಂಭ್ರಮವೋ ಸಂಭ್ರಮ



ಮೈಸೂರು, ಮೇ 18(ಎಂಟಿವೈ)- ಕರ್ನಾಟಕದ ನೂತನ ಮುಖ್ಯಮಂತ್ರಿಯನ್ನಾಗಿ ಸಿದ್ದರಾಮಯ್ಯ ಅವರನ್ನು ಹೈಕಮಾಂಡ್ ಆಯ್ಕೆ ಮಾಡಿದ ವಿಚಾರ ಗೊತ್ತಾಗುತ್ತಿದ್ದಂತೆ ಅವರ ಹುಟ್ಟೂರು ಸಿದ್ದರಾಮನಹುಂಡಿಯಲ್ಲಿ ಸಂಭ್ರಮ ಮನೆ ಮಾಡಿದ್ದು, ಗ್ರಾಮಸ್ಥರು ಸಿದ್ದರಾಮಯ್ಯ ಅವರ ಕಟೌಟ್‌ಗೆ ಹಾಲಭಿಷೇಕ ಮಾಡಿ ಸಂಭ್ರಮಿಸಿದರು.

ಗ್ರಾಮದಲ್ಲಿ ಕಳೆದ ಎರಡು ದಿನಗಳಿಂದಲೇ ಶುಭ ಸಮಾಚಾರದ ನಿರೀಕ್ಷೆಯಲ್ಲಿ ಸಂಭ್ರಮ ಮನೆ ಮಾಡಿದ್ದು, ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಹೆಸರನ್ನು ಅಧಿಕೃತವಾಗಿ ಘೋಷಣೆ ಮಾಡುತ್ತಿದ್ದಂತೆ ಇದು ಇಮ್ಮಡಿಯಾಯಿತು.

ಸಿದ್ದರಾಮಯ್ಯ ದೆಹಲಿಗೆ ತೆರಳಿದ ನಂತರ ಎರಡು ದಿನದ ಹಿಂದೆಯೇ 'ನೂತನ ಮುಖ್ಯಮಂತ್ರಿ ನಮ್ಮ ಸಿದ್ದರಾಮಯ್ಯ' ಘೋಷಣೆಯೊಂದಿಗೆ 75 ಅಡಿ ಎತ್ತರದ ಕಟೌಟ್‌ಗೆ ಹಾಲಭಿಷೇಕ ಮಾಡಿದ್ದರು. ಗ್ರಾಮದ ಮುಖ್ಯ ರಸ್ತೆಯಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದ್ದರು. ಊರಿನ ಮಗ ಸಿದ್ದರಾಮಯ್ಯ ಎರಡನೇ ಬಾರಿಗೆ ನಾಡಿನ ದೊರೆಯಾಗಿ ಅಧಿಕಾರವಹಿಸಿಕೊಳ್ಳುವ ಸಂಗತಿಯನ್ನು ಗ್ರಾಮದ ಹಬ್ಬವಾಗಿ ಆಚರಿಸಲು ನಿರ್ಧರಿಸಿದರು.

ಕುಣಿದು ಕುಪ್ಪಳಿಸಿದರು: ಸಿದ್ದರಾಮಯ್ಯರ ಹೆಸರು ಮುಖ್ಯಮಂತ್ರಿ ಸ್ಥಾನಕ್ಕೆ ಫಿಕ್ಸ್ ಆಗುತ್ತಿದ್ದಂತೆಯೇ ಗ್ರಾಮದ ಕೆಲವು ಮುಖಂಡರು ಸಿದ್ದರಾಮಯ್ಯ ಅವರ ಭಾವಚಿತ್ರವುಳ್ಳ ಹಳದಿ ಬಣ್ಣದ ಬಾವುಟ ಹಿಡಿದುಕೊಂಡು ಗ್ರಾಮದ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಸಂಭ್ರಮಿಸಿದರು. ಬುಧವಾರವೂ ಟಗರಿನೊಂದಿಗೆ ಕೆಲ ಗ್ರಾಮಸ್ಥರು ಕುಣಿದು ಕುಪ್ಪಳಿಸಿದ್ದರು.

ಬಾಲ್ಯ ಸ್ನೇಹಿತನ ಸಂಭ್ರಮ: ಗ್ರಾಮದಲ್ಲಿ ಅಳವಡಿಸಿರುವ ಸಿದ್ದರಾಮಯ್ಯ ಅವರ ಬೃಹತ್ ಕಟೌಟ್ ಮುಂದೆ ಅವರ ಬಾಲ್ಯ ಸ್ನೇಹಿತರೊಬ್ಬರು ಕುಣಿದು ಕುಪ್ಪಳಿಸಿದರು. ಚಿಕ್ಕಂದಿನಿಂದಲೂ ಅವರೊಂದಿಗೆ ಮನೆ ದೇವರು ಸಿದ್ದರಾಮೇಶ್ವರನನ್ನು ವೀರಮಕ್ಕಳ ಕುಣಿತ ಪ್ರದರ್ಶಿಸಿ ಆರಾಧಿಸುತ್ತಿದ್ದ ಕರೀಗೌಡ, ಇಂದು ಸಂಭ್ರಮಾಚರಣೆಯಲ್ಲಿ ವೀರಮಕ್ಕಳ ಕುಣಿತ ಪ್ರದರ್ಶಿಸಿ ಗಮನ ಸೆಳೆದರು.

ದಿನವಿಡೀ ಟಿವಿ ಮುಂದೆ ಕುಳಿತ ಗ್ರಾಮಸ್ಥರು: ರಾಜ್ಯದಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದ್ದರೂ ಮುಖ್ಯಮಂತ್ರಿ ಆಯ್ಕೆ ವಿಳಂಬವಾದ್ದರಿಂದ ಯಾರಿಗೆ ಮುಖ್ಯಮಂತ್ರಿ ಪಟ್ಟ ಒಲಿಯುತ್ತದೋ ಎಂಬ ಕುತೂಹಲ ನಾಡಿನೆಲ್ಲೆಡೆ ಮನೆ ಮಾಡಿತ್ತು.

ಗುರುವಾರ ಬೆಳಗ್ಗಿನಿಂದಲೂ ಗ್ರಾಮದ ಜನತೆ ಟಿವಿ ಮುಂದೆಯೇ ಕುತೂಹಲದಿಂದ ಕುಳಿತಿದ್ದರು. ದೆಹಲಿಯಲ್ಲಿ ಸಿದ್ದರಾಮಯ್ಯ ಅವರ ಹೆಸರು ಅಧಿಕೃತವಾಗಿ ಘೋಷಣೆಯಾಗುತ್ತಿದ್ದಂತೆಯೇ ಮನೆಯಿಂದ ಹೊರ ಬಂದು ಸಂಭ್ರಮಾಚರಣೆಯಲ್ಲಿ ಭಾಗಿಯಾದರು.

ಸಿದ್ದರಾಮೇಶ್ವರನ ಗುಡಿಯಲ್ಲಿ ವಿಶೇಷ ಪೂಜೆ: ಸಿದ್ದರಾಮನಹುಂಡಿಯ ಸಿದ್ದರಾಮೇಶ್ವರ ದೇವಾಲಯದಲ್ಲಿ ಗ್ರಾಮಸ್ಥರು ಹಾಗೂ ಸಿದ್ದರಾಮಯ್ಯ ಅವರ ಸಂಬಂಧಿಗಳು ವಿಶೇಷ ಪೂಜೆ ಸಲ್ಲಿಸಿದರು. ಮುಖ್ಯಮಂತ್ರಿ ಸ್ಥಾನಕ್ಕೆ ಮತ್ತೆ ಆಯ್ಕೆಯಾಗುತ್ತಿದ್ದಂತೆಯೇ ಊರಿಗೆ ಊರೇ ಸಂತಸದಲ್ಲಿ ಮುಳುಗಿದೆ.

ಸಿಹಿ ಸುದ್ದಿ ಕೇಳಿ ಸಂಭ್ರಮಿಸಿದ ಸ್ನೇಹಿತ: ಸಿದ್ದರಾಮಯ್ಯ ಅವರ ಬಾಲ್ಯದ ಗೆಳೆಯ ಸಿದ್ದೇಗೌಡ, ವೀರಮಕ್ಕಳ ಕುಣಿತದಲ್ಲಿ ಸಿದ್ದರಾಮಯ್ಯರಿಗೆ ಜೊತೆಯಾಗಿದ್ದರು. ಅನಾರೋಗ್ಯ ಹಾಗೂ ವಯಸ್ಸಿನ ಕಾರಣದಿಂದ ಈಗ ಮನೆಯಲ್ಲೇ ಇರುವ ಸಿದ್ದೇಗೌಡರು, ಟಿವಿಯಲ್ಲಿ ಬಿತ್ತರವಾದ ಸುದ್ದಿ ಕೇಳಿ ಸಂಭ್ರಮಿಸಿದ್ದಾರೆ. ಅಲ್ಲದೆ, ಗೆಳೆಯನಿಗೆ ಶುಭವಾಗಲಿ ಎಂದು ಹಾರೈಸಿದ್ದಾರೆ.

ಪ್ರಮಾಣ ವಚನ ಸ್ವೀಕಾರ ವೀಕ್ಷಿಸಲು ದೌಡು: ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಶನಿವಾರ(ಮೇ 20)ದಂದು ನಡೆಯಲಿರುವ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಕಣ್ತುಂಬಿಕೊಳ್ಳಲು ಈ ಬಾರಿ ಸಿದ್ದರಾಮನಹುಂಡಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಬೆಂಗಳೂರಿಗೆ ತೆರಳಲು ನಿರ್ಧರಿಸಿದ್ದಾರೆ. ತಮ್ಮ ಗ್ರಾಮದ ಹೆಮ್ಮೆಯ ಪುತ್ರ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದನ್ನು ಕಣ್ಣಾರೆ ಕಾಣಬೇಕೆಂಬ ಹಂಬಲ ಹಲವರಲ್ಲಿದ್ದು, ಅದಕ್ಕಾಗಿ ಶನಿವಾರ ಮುಂಜಾನೆಯೇ ಬೆಂಗಳೂರಿನತ್ತ ಪ್ರಯಾಣ ಬೆಳೆಸಲು ಬಯಸಿದ್ದಾರೆ.

ರಾಜ್ಯಕ್ಕೆ ಒಳ್ಳೆ ಕೆಲಸ ಮಾಡ್ತಾರೆ, ಒಳ್ಳೆದಾಗುತ್ತೆ: ಸಿದ್ದರಾಮಯ್ಯ ಸಹೋದರ ಸಿದ್ದೇಗೌಡ

ಮೈಸೂರು, ಮೇ 18(ಎಂಟಿವೈ)- ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುವುದರಿಂದ ಬಡವರಿಗೆ ಸಹಾಯವಾಗುತ್ತದೆ ಎಂದು ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹೋದರ ಸಿದ್ದೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಸಿದ್ದರಾಮನಹುಂಡಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುತ್ತಿರುವುದಕ್ಕೆ ಸಂತೋಷವಾಗುತ್ತಿದೆ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಹಲವು ಭಾಗ್ಯಗಳ ಯೋಜನೆಯನ್ನು ಜಾರಿಗೆ ತಂದು ಬಡವರು, ದೀನದಲಿತರು, ಶೋಷಿತರು ಹಾಗೂ ಎಲ್ಲಾ ವರ್ಗದ ಜನರ ಹಿತ ಕಾಪಾಡಿದ್ದರು. ಈಗ ಮತ್ತೊಮ್ಮೆ ಸಿಎಂ ಆಗುತ್ತಿರುವುದು ಸಂತೋಷ ತಂದಿದೆ. ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂದರು.

ಸಿದ್ದರಾಮಯ್ಯ ಅವರ ತಮ್ಮ ರಾಮಣ್ಣ ಅವರ ಮಗ ರಾಘು ಮಾತನಾಡಿ, ನಮ್ಮ ದೊಡ್ಡಪ್ಪ (ಸಿದ್ದರಾಮಯ್ಯ) ಸಾಮಾಜಿಕ ನ್ಯಾಯದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವರುಣ ಕ್ಷೇತ್ರದ ಎಲ್ಲಾ ಜಾತಿ, ಜನಾಂಗ, ಧರ್ಮದ ಮತದಾರರು ಸಿದ್ದರಾಮಯ್ಯ ಅವರನ್ನು ಅಭೂತಪೂರ್ವವಾಗಿ ಗೆಲ್ಲಿಸಿದ್ದಾರೆ. ಯಾವುದೇ ಜಾತಿ ಭೇದ-ಭಾವ ಮಾಡದೆ ಕೆಲಸ ಮಾಡಿದ್ದಾರೆ. ಈಗಾಗಲೇ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿ ಹಲವು ಕಾರ್ಯಕ್ರಮ ಜಾರಿಗೆ ತಂದಿದ್ದಾರೆ. ಈಗ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುವ ಮೂಲಕ ಗ್ಯಾರಂಟಿ ಕಾರ್ಡ್‌ನಲ್ಲಿ ಉಲ್ಲೇಖಿಸಿರುವ ಯೋಜನೆಗಳನ್ನು ಜಾರಿಗೊಳಿಸುತ್ತಾರೆ. ಬಡ ಜನರ ಕಷ್ಟದ ಬಗ್ಗೆ ಸಿದ್ದರಾಮಯ್ಯ ಅವರಿಗೆ ಅರಿವಿದೆ. ಹಾಗಾಗಿ ಅವರು ಮುಖ್ಯಮಂತ್ರಿಯಾಗುತ್ತಿರುವುದಕ್ಕೆ ಸಂತೋಷವನ್ನುಂಟು ಮಾಡಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯರಿಗೆ ಅದೃಷ್ಟದ ಕ್ಷೇತ್ರ 'ವರುಣ'

●ಒಂದು ಬಾರಿ ವಿಪಕ್ಷ ನಾಯಕ ●2 ಬಾರಿ ಸಿಎಂ ●ಚಾಮುಂಡೇಶ್ವರಿಯಲ್ಲಿ 2 ಬಾರಿ ಡಿಸಿಎಂ

ಮೈಸೂರು, ಮೇ 18(ಎಂಟಿವೈ)- ಕ್ಷೇತ್ರ ಪುನರ್ ವಿಂಗಡಣೆ ಬಳಿಕ 4ನೇ ಚುನಾವಣೆಗೆ ಸಾಕ್ಷಿಯಾಗುತ್ತಿರುವ ವರುಣ ವಿಧಾನಸಭಾ ಕ್ಷೇತ್ರ ಸಿದ್ದರಾಮಯ್ಯನವರ ಪಾಲಿಗೆ ಅದೃಷ್ಟದ ಕ್ಷೇತ್ರವಾಗಿದೆ.

ಮೈಸೂರು, ನಂಜನಗೂಡು, ತಿ.ನರಸೀಪುರ ತಾಲೂಕಿನ ಗ್ರಾಮಗಳನ್ನು ಒಳಗೊಂಡಿರುವ ಈ ವರುಣ ವಿಧಾನಸಭಾ ಕ್ಷೇತ್ರ ಹಲವು ವೈಶಿಷ್ಟ್ಯತೆಯನ್ನು ಹೊಂದಿದೆ.

ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನಹುಂಡಿ ವರುಣ ಕ್ಷೇತ್ರಕ್ಕೆ ಒಳಪಟ್ಟಿದ್ದು, ಮನೆ ದೇವರು ಸಿದ್ದರಾಮೇಶ್ವರರ ಕೃಪೆಯೂ ಸಿದ್ದರಾಮಯ್ಯ ಅವರ ಮೇಲಿರುವುದರಿಂದ ಉನ್ನತ ಅಧಿಕಾರ ಸಿಗುತ್ತಲೇ ಇದೆ ಎಂದು ಗ್ರಾಮಸ್ಥರು ವಿಶ್ಲೇಷಿಸುತ್ತಾರೆ. ಸಿದ್ದರಾಮೇಶ್ವರನ ಆರಾಧನೆಗಾಗಿ ವೀರಮಕ್ಕಳ ಕುಣಿತ ಮಾಡುತ್ತಿದ್ದ ಸಿದ್ದರಾಮಯ್ಯ ಚಿಕ್ಕಂದಿನಿಂದಲೂ ಸಿದ್ದರಾಮೇಶ್ವರರ ಜಾತ್ರೆ ವೇಳೆ ಎರಡು ದಿನಗಳ ಕಾಲ ದೇವಾಲಯದ ಮುಂದೆ ವೀರ ಮಕ್ಕಳ ಕುಣಿತ ಪ್ರದರ್ಶಿಸಿ ದೇವರ ಕೃಪೆಗೆ ಪಾತ್ರರಾಗಿದ್ದಾರೆ ಎಂದು ಅವರ ಆಪ್ತರು ಅಭಿಪ್ರಾಯಪಟ್ಟಿದ್ದಾರೆ.

2008ರಲ್ಲಿ ಮೊದಲ ಬಾರಿ ವರುಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ ಸಿದ್ದರಾಮಯ್ಯ, ಬಳಿಕ ವಿರೋಧ ಪಕ್ಷದ ನಾಯಕರಾಗಿದ್ದರು. ಬಳ್ಳಾರಿಯಲ್ಲಿ ನಡೆಯುತ್ತಿದ್ದ ಗಣಿ ದಂಧೆ ವಿರುದ್ಧ ಸಮರ ಸಾರಿದ್ದ ಅವರು, ವಿಧಾನಸಭೆಯಲ್ಲಿ ಅಂದು ಸಚಿವರಾಗಿದ್ದ ಜನಾರ್ಧನರೆಡ್ಡಿ, ಶ್ರೀರಾಮುಲು, ಕರುಣಾಕರರೆಡ್ಡಿ ಹಾಗೂ ಇನ್ನಿತರರು ನೀಡಿದ ಸವಾಲು ಸ್ವೀಕರಿಸಿ, ಬೆಂಗಳೂರಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಿ, ರಾಜ್ಯದಲ್ಲಿ ಮನೆಮಾತಾದರು.

2013ರಲ್ಲಿ ಎರಡನೇ ಬಾರಿ ಆಯ್ಕೆಯಾದ ಸಿದ್ದರಾಮಯ್ಯನವರು, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾಗಿ 5 ವರ್ಷ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿ, ಹಲವು ಭಾಗ್ಯಗಳನ್ನು ಜಾರಿಗೊಳಿಸುವ ಮೂಲಕ ಜನಪ್ರಿಯರಾದರು. ಮೈಸೂರು ಮೂಲದವರೇ ಆದ, ಡಿ.ದೇವರಾಜ ಅರಸ್ ಅವರ ನಂತರ 5 ವರ್ಷ ಪೂರ್ಣ ಆಡಳಿತ ನಡೆಸಿದ ಹೆಗ್ಗಳಿಕೆಗೆ ಪಾತ್ರರಾದರು.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ 2018ರಲ್ಲಿ ನಡೆದ ಚುನಾವಣೆಯಲ್ಲಿ ವರುಣ ಕ್ಷೇತ್ರ ತೊರೆದು ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಸಿದ್ದರಾಮಯ್ಯ ಚಾಮುಂಡೇಶ್ವರಿಯಲ್ಲಿ ಸೋಲನುಭವಿಸಿ, ಬಾದಾಮಿ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು. ಆದರೂ 5 ವರ್ಷ ವಿರೋಧ ಪಕ್ಷದ ನಾಯಕರಾಗಿದ್ದರು. ಬಿಜೆಪಿ ಸರ್ಕಾರ ಹಾಗೂ ಕೇಂದ್ರದ ಬಿಜೆಪಿ ನಾಯಕರ ವಿರುದ್ಧ ತಮ್ಮ ಮೊನಚಾದ ಮಾತಿನ ಮೂಲಕ ಟಾಂಗ್ ನೀಡುತ್ತಲೇ ಬಂದರು.

ತಮ್ಮ ರಾಜಕೀಯ ಜೀವನದಲ್ಲಿ ಕೊನೆ ಚುನಾವಣೆಯನ್ನು ಸಿದ್ದರಾಮಯ್ಯ ತವರು ಕ್ಷೇತ್ರ ವರುಣದಲ್ಲೇ ಎದುರಿಸಿ ಸಮೀಪ ಪ್ರತಿಸ್ಪರ್ಧಿ, ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ವಿರುದ್ಧ 46006 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ವರುಣ ಕ್ಷೇತ್ರದಲ್ಲಿ ಎದುರಿಸಿದ 3ನೇ ಚುನಾವಣೆಯಲ್ಲೂ ಗೆಲುವು ಸಾಧಿಸಿರುವ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. ಈ ಮೂಲಕ ವರುಣ ಕ್ಷೇತ್ರ ಅವರ ಪಾಲಿಗೆ 'ಲಕ್ಕಿ' ಕ್ಷೇತ್ರ ಎಂದು ಸಾಬೀತಾಗಿದೆ.

ಚಾಮುಂಡೇಶ್ವರಿ ಕ್ಷೇತ್ರ: 1980ರಿಂದ ಚಾಮುಂಡೇಶ್ವರಿ ಕ್ಷೇತ್ರದೊಂದಿಗೆ ಒಡನಾಟ ಹೊಂದಿರುವ ಸಿದ್ದರಾಮಯ್ಯ ಅವರಿಗೆ ರಾಜಕೀಯ ಜನ್ಮ-ಪುನರ್ಜನ್ಮ ನೀಡಿದೆ. ಅಲ್ಲಿ ಗೆದ್ದು ವಿವಿಧ ಇಲಾಖೆಯ ಸಚಿವರಾಗಿ ಅಧಿಕಾರ ನಡೆಸಿದ್ದರು. ಬಳಿಕ 2 ಬಾರಿ ಡಿಸಿಎಂ ಆಗಿ ಆಡಳಿತ ನಡೆಸಿದ್ದರು. ಹಾಗಾಗಿಯೇ ಸಿದ್ದರಾಮಯ್ಯ ಹಲವು ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜನರೊಂದಿಗಿನ ಒಡನಾಟವನ್ನು ಆಗಾಗ ಹೇಳಿಕೊಂಡಿದ್ದರು. ಹಾಗಾಗಿ ಗ್ರಾಮೀಣ ಸೊಗಡಿನ ವರ್ಣರಂಜಿತ ರಾಜಕಾರಣಿ ಸಿದ್ದರಾಮಯ್ಯ ಅವರಿಗೆ ವರುಣ ಹಾಗೂ ಚಾಮುಂಡೇಶ್ವರಿ ರಾಜಕೀಯ ಕರ್ಮಭೂಮಿಯಾಗಿವೆ.

ಸಿದ್ದರಾಮಯ್ಯಗೆ ಮುಖ್ಯಮಂತ್ರಿ ಗದ್ದುಗೆ: ನಿಜವಾಯ್ತು ಮೈಲಾರ ಕಾರ್ಣಿಕರ ಭವಿಷ್ಯ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣಾ ಮತದಾನದ ಫಲಿತಾಂಶ ಹೊರಬಿದ್ದು ಕಾಂಗ್ರೆಸ್ ಪ್ರಚಂಡ ಬಹುಮತದೊಂದಿಗೆ ಜಯಗಳಿಸಿದೆ. ಇದರ ಬೆನ್ನಲ್ಲೇ ತೀವ್ರ ಕಸರತ್ತಿನ ನಂತರ ಸಿದ್ದರಾಮಯ್ಯರನ್ನು ಮುಖ್ಯಮಂತ್ರಿಯನ್ನಾಗಿ ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಿದೆ.



ಆದರೆ ಮೈಲಾರ ಕಾರ್ಣಿಕ ಈ ಭವಿಷ್ಯವನ್ನು ಮೊದಲೇ ಹೇಳಿತ್ತು.

ಚುನಾವಣೆಗೂ ಮುನ್ನ ಅಂದರೆ 2 ತಿಂಗಳ ಹಿಂದೆ ಗೊರವಯ್ಯ ನುಡಿದಿದ್ದ ಭವಿಷ್ಯ ಈಗ ನಿಜವಾಗಿದೆ. ಹೌದು ಕರ್ನಾಟಕದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಆಯ್ಕೆ ಯಾಗುತ್ತಾರೆಂದು ಹೇಳಲಾಗಿತ್ತು. ಗುರುವಾರ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದೆ. ಡಿ.ಕೆ.ಶಿವಕುಮಾರ್ ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿಯೂ ಮಾಡಿದೆ. ಮೇ 20ರಂದು ರಾಜ್ಯದ ಮುಖ್ಯ ಮಂತ್ರಿಯಾಗಿ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

"ಅಂಬಲಿ ಹಳಸಿತು ಕಂಬಳಿ ಬಿಸಿತಲೆ ಪರಾಕ್?" ಎಂದು ಮೈಲಾರ ಕಾರ್ಣಿಕ ಭವಿಷ್ಯ ನುಡಿದಿದ್ದರು. ಮುಖ್ಯಮಂತ್ರಿ ಹೆಸರು ಅಧಿಕೃತ ಆಗುತ್ತಿದ್ದಂತೆ ಎಲ್ಲರಿಗೂ ನೆನಪಾಗಿದ್ದು ಈ ವರ್ಷದ ಕಾರ್ಣಿಕ ನುಡಿ. ಮೈಲಾರ ಲಿಂಗೇಶ್ವರ ದೇವಸ್ಥಾನದ ಧರ್ಮದರ್ಶಿ ವೆಂಕಪ್ಪ ಒಡೆಯರ 'ಮೈಲಾರ ಕಾರ್ಣಿಕ ಕೋಟ್ಯಾಂತರ ಭಕ್ತರ ನಂಬಿಕೆಯ ದೈವವಾಣಿ. ಸಿದ್ದರಾಮಯ್ಯ ರಾಜ್ಯದ ಸಿಎಂ ಆಗುತ್ತಾರೆ ಎಂದು 2 ತಿಂಗಳು ಹಿಂದೆ ಕಾರ್ಣಿಕ ಹೇಳಲಾಗಿತ್ತು. ಸುಮಾರು ಸಾವಿರಾರು ವರ್ಷಗಳ ಕಾರ್ಣಿಕ ಪರಂಪರೆ ಸತ್ಯವಾಗಿದೆ. ಮೈಲಾರ ಲಿಂಗೇಶ್ವರನ ದೈವವಾಣಿಯಂತೆ ಹಾಲುಮತ ಸಮಾಜದವರು ಸಿಎಂ ಆಗಿದ್ದಾರೆ ಎಂದರು.

ಕಾರ್ಣಿಕದ ಅರ್ಥ ವಿವರಿಸಿದ್ದ ಧರ್ಮದರ್ಶಿಗಳು

"ಅಂಬಲಿ ಹಳಿಸಿತು ಕಂಬಳಿ ಬಿಸಿತಲೆ ಪರಾಕ್?" ಎಂದು ಈ ವರ್ಷ ಕಾರ್ಣಿಕ ನುಡಿಯಲಾಗಿತ್ತು. ಅಂಬಲಿ ಹಳಿಸಿತು ಎಂದರೆ ಸದ್ಯ ಇರುವ ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ. ಕಂಬಳಿ ಬಿಸಿತಲೆ ಎಂದರೆ ಕುರುಬ ಸಮಾಜದ ನಾಯಕ ರಾಜ್ಯದ ಸಿಎಂ ಆಗಲಿದ್ದಾರೆ. ಜೊತೆಗೆ ಡಿ.ಕೆ.ಶಿವಕುಮಾರ್ ಅವರಿಗೂ ಕೂಡ ಮುಖ್ಯಮಂತ್ರಿ ಆಗುವ ಯೋಗ ಇದೆ. ಆದ್ರೆ, ಅವರು ಸ್ವಲ್ಪ ತಾಳ್ಮೆಯಿಂದ ಇರಬೇಕು. ಈ ಹಿಂದೆ ಇಂದಿರಾ ಗಾಂಧಿ ಹತ್ಯೆ ಆಗುವ ಮುಂಚೆಯೂ ಕಾರ್ಣಿಕ ನುಡಿಯಲಾಗಿತ್ತು. ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ರಚನೆ ಆದ ಸಂದರ್ಭದಲ್ಲೂ ಕಾರ್ಣಿಕ ಸತ್ಯವಾಗಿತ್ತು ಎಂದು ಹೇಳಲಾಗಿದೆ. ಕೋಡಿ ಶ್ರೀಗಳ ಭವಿಷ್ಯವೂ ಇದೇ ಆಗಿತ್ತು. ಅವರೂ ಸಹ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಾರೆ. ಕೆಲ ಹಿರಿತಲೆಗಳು ಚುನಾವಣೆಯಲ್ಲಿ ಉರುಳುತ್ತವೆ ಎಂದಿದ್ದರು.

ಮೈಸೂರು ಮಿತ್ರ ಶುಕ್ರವಾರ 19 ಮೇ 2023

ಕಾಡಾನೆ ದಾಳಿಗೊಳಗಾಗಿದ್ದ ಕಾರ್ಮಿಕ ಸಾವು

ಅಮ್ಮತ್ತಿ-ಪಾಲಿಬೆಟ್ಟ ರಸ್ತೆ ತಡೆ



ಸಿದ್ದಾಪುರ, ಮೇ 18– ಕಳೆದ ಮೂರು ದಿನಗಳ ಹಿಂದೆ ಪಾಲಿಬೆಟ್ಟದ ಮಸ್ಕಲ್ ತೋಟದಲ್ಲಿ ಆನೆ ದಾಳಿಯಿಂದ ತೀವ್ರ ಗಾಯಗೊಂಡಿದ್ದ ಕಾರ್ಮಿಕ ಬಾಬ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೈಸೂರಿನಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಆಂಬುಲೆನ್ಸ್‌ನಲ್ಲಿ ಪಾಲಿಬೆಟ್ಟಕ್ಕೆ ತಂದು ಮಸ್ಕಲ್ ಕಾಫಿ ತೋಟದ ಮುಂಭಾಗದ ಅಮ್ಮತ್ತಿ–ಪಾಲಿಬೆಟ್ಟ ರಸ್ತೆಯಲ್ಲೇ ಶವ ಇಟ್ಟು ಪ್ರತಿಭಟನೆ ಮಾಡಿ, ಅರಣ್ಯ ಇಲಾಖೆ ಹಾಗೂ ತೋಟದ ಮಾಲೀಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಸ್ಕಲ್ ಕಾಫಿ ತೋಟದಲ್ಲಿ ಕಾರ್ಮಿಕರಿಗೆ ಕಿರುಕುಳ ನೀಡಲಾಗುತ್ತಿದ್ದು, ಕಾಡುಪ್ರಾಣಿಗಳ ಭಯದ ನಡುವೆ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಡಾನೆ ಹಾವಳಿ ಇದ್ದರೂ ಸೂಕ್ತ ರಕ್ಷಣೆ ನೀಡದೆ ಕಾರ್ಮಿಕರ ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ತೋಟದ ಕಾರ್ಮಿಕರಿಗೆ ಪಿಎಫ್ ಸೇರಿದಂತೆ ಮೂಲ ಸೌಕರ್ಯ ನೀಡದೆ ಕಡೆಗಣಿಸಲಾಗುತ್ತಿದೆ. ಅಗತ್ಯ ವಸ್ತುಗಳನ್ನು ಖರೀದಿ ಮಾಡಿ ಮನೆಗೆ ತೆರಳಲು ವಾಹನಗಳನ್ನು ಒಳಬಿಡದೆ ಗೇಟ್ ಲಾಕ್ ಮಾಡಲಾಗುತ್ತಿದೆ. ಆಸ್ಪತ್ರೆ ಸೇರಿದಂತೆ ತುರ್ತು ಸಂದರ್ಭದಲ್ಲಿ ಕಾರ್ಮಿಕರು ಕಿಲೋಮೀಟರ್ ಗಟ್ಟಲೇ ನಡೆದು ತೆರಳ ಬೇಕಾಗಿದೆ. ಹಿಂದೆಯೂ ಹಲವು ಮಂದಿಗೆ ಕಾಡಾನೆ ಹಾವಳಿಯಿಂದ ಗಾಯಗೊಂಡಿದ್ದರು ಸೂಕ್ತ ಚಿಕಿತ್ಸೆಗೆ ಹಣ ನೀಡದೆ ಕಡೆಗಣಿಸಲಾಗಿದೆ.

ತೋಟದ ಮಾಲೀಕರು ಸಂಪರ್ಕಕ್ಕೆ ಸಿಗದೇ ನಮ್ಮ ಬೇಡಿಕೆ ಈಡೇರಿಸದೆ ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಿದ್ದಾರೆ ಎಂದು ತೋಟದ ಮಾಲೀಕರ ವಿರುದ್ಧ ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದಲ್ಲದೆ, ತೋಟದ ವ್ಯವಸ್ಥಾಪಕ ಪದ್ಮನಾಭ ಹಾಗೂ ಸಿಬ್ಬಂದಿ ಸುಬ್ರಮಣಿ ಎಂಬವರನ್ನು ತರಾಟೆಗೆ ತೆಗೆದುಕೊಂಡರು. ಸ್ಥಳದಲ್ಲಿ ಜಮಾಯಿಸಿದ ಬೆಳೆಗಾರರು, ಸ್ಥಳೀಯರು, ಕಾರ್ಮಿಕರು ಸೇರಿ ಅರಣ್ಯ ಇಲಾಖೆ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿ, ಕಾಡು ಪ್ರಾಣಿಗಳ ಹಾವಳಿಯನ್ನು ಕೂಡಲೇ ತಡೆಗಟ್ಟಬೇಕೆಂದು ಒತ್ತಾಯಿಸಿದರು. ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಮಿಕರಿಗೆ ಭರವಸೆ ನೀಡಿ, ಮೊದಲ ಕಂತಿನ ಸರ್ಕಾರದ ಪರಿಹಾರ ಚೆಕ್ ಸ್ಥಳದಲ್ಲೇ ನೀಡಿದ್ದಲ್ಲದೆ ಕುಟುಂಬದ ಒಬ್ಬರಿಗೆ ದಿನಗೂಲಿ ನೌಕರರಾಗಿ ನೇಮಿಸಿಕೊಳ್ಳಲಾಗುವುದು ಎಂದು ಕಾಡಾನೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಕಾಡಾನೆ ಹಾವಳಿ ನಿಯಂತ್ರಣಕ್ಕೂ ಮುಂದಾಗುವುದಾಗಿ ಭರವಸೆ ನೀಡಿದರು.

ಕಾರ್ಮಿಕರ ಬೇಡಿಕೆಯನ್ನು ಮಾಲೀಕರೊಂದಿಗೆ ಚರ್ಚಿಸಿ ಬಗೆಹರಿಸುವ ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು. ದಿಢೀರ್ ಪ್ರತಿಭಟನೆಯಿಂದ ಕೆಲಕಾಲ ಬಿಗುವಿನ ವಾತಾವರಣ ಉಂಟಾಗಿ ನಂತರ ಪೊಲೀಸರು ತಿಳಿಗೊಳಿಸಿದರು. ಪ್ರತಿಭಟನೆ ಸಂದರ್ಭ ಅಮ್ಮತ್ತಿ–ಪಾಲಿಬೆಟ್ಟ ಮಾರ್ಗದ ವಾಹನಗಳು ಗಂಟೆಗಟ್ಟಲೆ ಸಾಲುಗಟ್ಟಿ ನಿಂತಿದ್ದವು. ಈ ಸಂದರ್ಭ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮೂಕೊಂಡ ವಿಜು ಸುಬ್ರಮಣಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪವಿತ್ರ, ಸದಸ್ಯ ಪುಲಿಯಂಡ ಬೋಪಣ್ಣ, ಹೊಸೂರು ಗ್ರಾಪಂ ಅಧ್ಯಕ್ಷೆ ಶಾಂತಿ ಸೋಮಯ್ಯ, ಸದಸ್ಯರಾದ ರತ್ನ ಸುಬ್ಬಯ್ಯ, ಗೋಪಿ ಚಿನ್ನಪ್ಪ, ಅರಣ್ಯ ಇಲಾಖೆಯ ಡಿಎಫ್‌ಓ ಶರಣ ಬಸಪ್ಪ, ಎಸಿಎಫ್ ನೆಹರು, ಆರ್‌ಎಫ್‌ಓ ದೇವಯ್ಯ, ಡಿಆರ್‌ಎಫ್‌ಓ ಸಂಜೀತ್ ಸೋಮಯ್ಯ, ಸಿದ್ದಾಪುರ ಠಾಣಾಧಿಕಾರಿ ದಿಲೀಪ್ ಕುಮಾರ್, ಕಾರ್ಮಿಕರು ಮತ್ತಿತರರು ಹಾಜರಿದ್ದರು.

ಪಾರಂಪರಿಕ ಪರಿಕರಗಳ ವಿಶೇಷ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಚಾಲನೆ



ಮಡಿಕೇರಿ, ಮೇ 18– ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ 'ಅಂತರ ರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ' ಪ್ರಯುಕ್ತ 'ವಸ್ತು ಸಂಗ್ರಹಾಲಯಗಳು ಮತ್ತು ಸುಸ್ಥಿರತೆ ಮತ್ತು ಯೋಗಕ್ಷೇಮ' ಎಂಬ ಘೋಷವಾಕ್ಯದಡಿ ಕೊಡಗು ಜಿಲ್ಲೆಯ ಪಾರಂಪರಿಕ ಪರಿಕರಗಳ ವಿಶೇಷ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಗುರುವಾರ ಚಾಲನೆ ನೀಡಿದರು.

ನಗರದ ಕೋಟೆ ಆವರಣದಲ್ಲಿರುವ ಸರ್ಕಾರಿ ಸಂಗ್ರಹಾಲಯ ಬಳಿ ಪಾರಂಪರಿಕ ಪರಿಕರಗಳ ವಿಶೇಷ ಪ್ರದರ್ಶನ ಉದ್ಘಾಟಿಸಿದರು. ವೈದ್ಯರು ಹಾಗೂ ಪ್ರಾಚೀನ ವಸ್ತುಗಳ ಸಂಗ್ರಹಕಾರರಾದ ಡಾ.ಎಂ.ಜಿ. ಪಾಟ್ಕರ್, ಪ್ರಾಚೀನ ವಸ್ತುಗಳ ಸಂಗ್ರಹಕಾರರಾದ ಪಿ.ಕೆ.ಕೇಶವಮೂರ್ತಿ, ಪೊನ್ನಚ್ಚನ ಮಧು ಸೋಮಣ್ಣ ಇತರರು ಪಾಲ್ಗೊಂಡಿದ್ದರು.

50 ವರ್ಷಗಳ ಹಿಂದೆ ಬಳಸುತ್ತಿದ್ದ ಕಂಚಿನ ಪದಾರ್ಥಗಳಾದ ತಟ್ಟೆ, ಲೋಟ, ಕಡಾಯಿ, ಪಾವು, ಸೇರು, ಕಂಚಿನ ತಪ್ಲ, ಕಂಚಿನ ಚೊಂಬು, ಪೆಟ್ಟಿಗೆ, ಊಟದ ಬಾಕ್ಸ್, ಹಾಗೆಯೇ ಮರದ ವಸ್ತುಗಳಾದ ಸೇವಿಗೆ ಮಣೆ, ಬುಟ್ಟಿ, ತಂಬಿಗೆ, ಕಳಸ, ನೀರಿನ ಫಿಲ್ಟರ್, ಮರದ ದುಡಿ, ಕಂಜಿಕಲ, ಕಳಿ ಕೋಲ್, ಎಲ್‌ತ್ಟೆ ಪಲಿಯ, ಪೋಂದಾಯ ಚಂದುಕ, ಕುರಿ ಕುಟ್ಟ್, ಚೇಕಲ, ಉದಿ, ಪರೆ, ಗುಜಾಯಿ, ಮೀಂಬಾಳ್ ಹೀಗೆ ಹಲವು ವಸ್ತುಗಳು ಗಮನ ಸೆಳೆದವು.

ಸೀಮೆಎಣ್ಣೆ ದೀಪ, ಕ್ಯಾಮರಾ, ತಾಮ್ರದ ಚೊಂಬು, ಲೋಟ, ಚೊಂಬು, ತೂಕದ ಮಾನ, ಮಂಗಳಾರತಿ ಮಾಡುವುದು, ಬುದ್ಧನ ವಿಗ್ರಹ, ಆನೆ, ಹಿತ್ತಾಳೆ ಬಿಂದಿಗೆ, ಮೊಳಕೆಕಾಳುಗಳನ್ನು ಇಡಲು ಬಳಸುತ್ತಿದ್ದ ಪಾತ್ರೆ, ಹೂವಿನ ಬುಟ್ಟಿ, ದೀಪಗಳು, ಕಾಯಿ ತುರಿಯುವ ಮಣೆ, ಮರದ ಕುರ್ಚಿ, ಬುಟ್ಟಿಗಳು, ಕಡುಬ ಪಾತ್ರೆ, ಮರದ ಹೂವಿನ ಬುಟ್ಟಿ, ನೀರಿನಲ್ಲಿ ಹೂವು ಇಡುವ ಪಾತ್ರೆ, ಮಜ್ಜಿಗೆ ಕಡೆಯುವ ಪಾತ್ರೆ, ಊಟ, ಟೀ, ಗಂಜಿ ಪಾತ್ರೆ ದೂಪ ಹಾಕುವ ಪಾತ್ರೆ, ಬ್ಯಾಗ್, ಸಾರಥಿ, ತೊಲ ಹೀಗೆ ಹಲವು ವಸ್ತುಗಳು ಗಮನ ಸೆಳೆದವು. ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ರೇಖಾ, ಇತರರು ಇದ್ದರು.

ಮಾಯಮುಡಿ ಬೋಡ್‌ನಮ್ಮೆಗೆ ತೆರೆ

ಗೋಣಿಕೊಪ್ಪ, ಮೇ 18– ಮಾಯಮುಡಿ ಗ್ರಾಮದ ಬೋಡ್ ನಮ್ಮೆಯು ಗುರುವಾರ ಜರುಗಿದ ಕುದುರೆ ಹಬ್ಬ ಆಚರಣೆಯೊಂದಿಗೆ ಸಂಪನ್ನಗೊಂಡಿತು. ಬಾಳಾಜಿ ಗ್ರಾಮದಲ್ಲಿರುವ ಮಾನಿಲ್ ಅಯ್ಯಪ್ಪ ದೇವರ ಕಾಡಿನಲ್ಲಿರುವ ಮಾನಿಲ್ ದೈವನೆಲೆಯಲ್ಲಿ ನಾಪರೆ ತಾತುವೊ ಆಚರಣೆಯೊಂದಿಗೆ ಕಳೆದ ಶನಿವಾರ ಹಬ್ಬಕ್ಕೆ ಚಾಲನೆ ನೀಡಲಾಗಿತ್ತು. ನಂತರ ಮೂರು ದಿನ ಅಂಬಲದಲ್ಲಿ ದೇವರ ಡೋಳು ಬಡಿದು ಪ್ರಾರ್ಥಿಸಲಾಯಿತು. ಬುಧವಾರ ಮಧ್ಯಾಹ್ನ ಭಂಡಾರ ಹೊತ್ತು ಮಾನಿಲ್ ಅಯ್ಯಪ್ಪ ದೈವನೆಲೆಯಲ್ಲಿ ಪೂಜೆ ಸಲ್ಲಿಸಲಾಯಿತು. ಭಕ್ತರು ಪಟ್ಟಣಿ ಆಚರಣೆ ನಡೆಸಿದರು. ರಾತ್ರಿ ಮನೆ ಮನೆಗೆ ತೆರಳಿ ಕಳಿ ಆಡುವೊ ಆಚರಣೆ ಮಾಡಲಾಯಿತು. ಗುರುವಾರ ಕುದುರೆ ಹೊತ್ತು, ಮಾನಿಲ್ ಅಯ್ಯಪ್ಪ ದೈವನೆಲೆಯಲ್ಲಿ ಕುದುರೆ ಆಚರಣೆಯೊಂದಿಗೆ ತೆರೆ ಎಳೆಯಲಾಯಿತು.

ಎ.ಎಸ್. ಪೊನ್ನಣ್ಣಗೆ ಸಚಿವ ಸ್ಥಾನ ಸಾಧ್ಯತೆ

ಮಡಿಕೇರಿ, ಮೇ 18– ಸರಿ ಸುಮಾರು ಎರಡು ದಶಕಗಳ ಬಳಿಕ ಕೊಡಗಿನ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿ ಸಂಭ್ರಮಿಸಿದ್ದು, ಈ ಬಾರಿ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಕಾಂಗ್ರೆಸ್ ಸರ್ಕಾರದಲ್ಲಿ ವಿರಾಜಪೇಟೆ ಕ್ಷೇತ್ರದಿಂದ ಆಯ್ಕೆಯಾಗಿರುವ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಅವರು ಸಚಿವ ಸ್ಥಾನ ಪಡೆಯುವ ಸಾಧ್ಯತೆಗಳು ದಟ್ಟವಾಗಿವೆ.



ಜಿಲ್ಲೆಯಲ್ಲಿ ಸುದೀರ್ಘ ಕಾಲ ಬಿಜೆಪಿ ಅಧಿಕಾರದಲ್ಲಿತ್ತು. ಅಪ್ಪಚ್ಚು ರಂಜನ್ ಅವರು 5 ಬಾರಿ, ಕೆ.ಜಿ. ಬೋಪಯ್ಯ 4 ಬಾರಿ ಗೆಲುವು ದಾಖಲಿಸಿದ್ದರು. ಇವರಲ್ಲಿ ಅಪ್ಪಚ್ಚು ರಂಜನ್ ಒಮ್ಮೆ ಯಡಿಯೂರಪ್ಪ ಅವರ ಅವಧಿಯಲ್ಲಿ 8 ತಿಂಗಳ ಕಾಲವಷ್ಟೆ ಕ್ರೀಡಾ ಸಚಿವರಾಗಿದ್ದರೆ, ಕೆ.ಜಿ. ಬೋಪಯ್ಯ ಅವರು ವಿಧಾನಸಭಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರೇ ಹೊರತು, ಸಚಿವ ಸ್ಥಾನ ಅವರಿಗೆ ದೊರೆತಿರಲಿಲ್ಲ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿಯೂ ಜಿಲ್ಲೆಯ ಎರಡೂ ಸ್ಥಾನಗಳು ಬಿಜೆಪಿ ಹಿಡಿತದಲ್ಲಿದ್ದ ಹಿನ್ನೆಲೆಯಲ್ಲಿ, ಸ್ಥಳೀಯ ಜನಪ್ರತಿನಿಧಿಗಳಿಗೆ ಉಸ್ತುವಾರಿ ಸಚಿವ ಸ್ಥಾನದ ಭಾಗ್ಯ ದೊರಕುವಂತಿರಲಿಲ್ಲ. ಈ ಹಂತದಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಹೊರ ಜಿಲ್ಲೆಯವರೇ ಕಾರ್ಯನಿರ್ವಹಿಸಿದ್ದರು. ಬಿಜೆಪಿ ಅಧಿಕಾರದಲ್ಲಿದ್ದ ಹಿಂದಿನ ಅವಧಿಯಲ್ಲಿ ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ಇರಲಿಲ್ಲವಾದ್ದರಿಂದ ಉಸ್ತುವಾರಿ ಸಚಿವರಾಗಿ ಸುರೇಶ್ ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಬಿ.ಸಿ. ನಾಗೇಶ್ ಅವರು ಕಾರ್ಯನಿರ್ವಹಿಸಿದ್ದರು.

ಇದೀಗ ಜಿಲ್ಲೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದು, ಧೀಮಂತ ರಾಜಕಾರಣಿ ಎ.ಕೆ. ಸುಬ್ಬಯ್ಯ ಅವರ ಪುತ್ರ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ವಿರಾಜಪೇಟೆ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದಾರೆ. ಇವರಿಗೆ ಸಚಿವ ಸ್ಥಾನ ನೀಡುವ ಮೂಲಕ ಕೊಡಗಿನ ಹಿತ ಕಾಯಲು ಸರ್ಕಾರ ಮುಂದಾಗಲಿದೆ ಎನ್ನುವ ವಿಶ್ವಾಸ ಕಾಂಗ್ರೆಸಿಗರಲ್ಲಿ ಮನೆ ಮಾಡಿದೆ.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿ, ಅಡಿಷನಲ್ ಅಡ್ವೋಕೇಟ್ ಜನರಲ್ ಆಗಿ ಕಾರ್ಯನಿರ್ವಹಿಸಿರುವ ಪೊನ್ನಣ್ಣ ಅವರು, ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೊಡಗಿನ ಮೂಲ ಸಮಸ್ಯೆಗಳ ಆಳ ಅರಿವಿರುವ ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ದೊರಕಿಯೇ ತೀರುತ್ತದೆ ಎನ್ನುವ ಉತ್ಸಾಹ ಜಿಲ್ಲಾ ಕಾಂಗ್ರೆಸ್‌ನಲ್ಲಿ ಕಾಣಿಸಿದೆ. ನೂತನ ಸರ್ಕಾರದಲ್ಲಿ ಎ.ಎಸ್. ಪೊನ್ನಣ್ಣ ಸಚಿವ ಸ್ಥಾನವನ್ನು ಪಡೆದಲ್ಲಿ 2012ರ ಬಳಿಕ ಜಿಲ್ಲೆಯ ಶಾಸಕರೊಬ್ಬರು ಸಚಿವ ಸ್ಥಾನ ಪಡೆದಂತಾಗುತ್ತದೆ.

ಕರಾಟೆಯಲ್ಲಿ ಕೊಡಗು ವಿದ್ಯಾರ್ಥಿಗಳ ಸಾಧನೆ



ಗೋಣಿಕೊಪ್ಪ, ಮೇ 18– ಜಪಾನ್ ಶೋಟಕಾನ್ ಕರಾಟೆ ಸಂಸ್ಥೆ (ಜೆ.ಎಸ್.ಕೆ.ಎ) ವತಿಯಿಂದ ಕೇರಳದ ತ್ರಿಶೂರ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮುಕ್ತ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಜಿಲ್ಲೆಯ ಕರಾಟೆಪಟುಗಳು ಸಾಧನೆ ಮಾಡಿದ್ದಾರೆ.

ಪೊನ್ನಂಪೇಟೆ ಸಂತ ಅಂಥೋಣಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ಪಿ.ಹೆಚ್. ಸ್ವಾಗತ್ ಕಟಾ ವಿಭಾಗದಲ್ಲಿ ಚಿನ್ನದ ಪದಕ, ಪಿ.ಎಸ್. ಗೌರವ್ ಕುಮಿತೆ ವಿಭಾಗದಲ್ಲಿ ಚಿನ್ನ, ಆಕರ್ಷ್ ಸಂತೋಷ್ ಕಂಚಿನ ಪದಕ ಪಡೆದುಕೊಂಡಿದ್ದಾರೆ. ಪ್ರೌಢಶಾಲೆಯ ಅರ್ಜುನ್ ಮಹೇಂದ್ರಗೆ ಚಿನ್ನ ಮತ್ತು ಕಂಚು, ಎನ್. ಎಸ್. ಶ್ರೀಹರಿಗೆ ಕಂಚು, ಡೆಲ್ಸಿಣಿ ಮರಿಯಾಗೆ ಬೆಳ್ಳಿ, ಗೋಣಿಕೊಪ್ಪ ಕಾಪ್ಸ್ ಶಾಲೆಯ ಸಿ.ಬಿ. ನಿಹಾನ್ ಅಯ್ಯಣ್ಣಗೆ ಚಿನ್ನ ಮತ್ತು ಕಂಚು, ಅರ್ವತೊಕ್ಲು ಸರ್ವದೈವತ ಶಾಲೆಯ ಲಿರನ್ ಬೋಪಣ್ಣಗೆ 2 ಬೆಳ್ಳಿ, ಗೋಣಿಕೊಪ್ಪ ಲಯನ್ಸ್ ಶಾಲೆಯ ಎ. ಎನ್. ದ್ರುವಿಕ್‌ಗೆ ಚಿನ್ನ, ಐ.ಎಸ್.ಇಶಾನ್ ಮತ್ತು ಸಿ.ಕೆ.ತಮ್ಮಯ್ಯಗೆ ಬೆಳ್ಳಿ, ಪಿ.ಎ. ಕೃದಯ್‌ಗೆ 2 ಕಂಚು, ಐಕಾನ್ ಇಂಟರ್‌ನ್ಯಾಷನಲ್ ವಿದ್ಯಾಸಂಸ್ಥೆಯ ಅಕ್ಷಿತ್‌ಗೌಡಗೆ ಚಿನ್ನ ಲಭಿಸಿದೆ. ಬಿ.ಎಸ್ ಸೆನ್ಸಾಯಿ ಮತ್ತು ಸಂತೋಷ್‌ಕುಮಾರ್ ತರಬೇತಿ ನೀಡಿದ್ದಾರೆ.

ರಸ್ತೆ ಕಾಮಗಾರಿ; ವಾಹನಗಳ ಸಂಚಾರ ನಿರ್ಬಂಧ

ಮಡಿಕೇರಿ, ಮೇ 18– ಸೋಮವಾರಪೇಟೆ ತಾಲೂಕು ಮಡಿಕೇರಿ–ಕುಟ್ಟ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮಡಿಕೇರಿ–ಕುಟ್ಟ ರಸ್ತೆಯ 8.30 ಕಿ.ಮೀ.ನಿಂದ 10 ಕಿ.ಮೀ.ವರೆಗಿನ ರಸ್ತೆಯಲ್ಲಿ ಮೇ 22 ರಿಂದ ಜುಲೈ 10ರವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಆದೇಶ ಹೊರಡಿಸಿದ್ದಾರೆ. ಸಾರ್ವಜನಿಕರು ಬದಲಿ ರಸ್ತೆಯಾದ ಮಡಿಕೇರಿ–ಸುಂಟಿಕೊಪ್ಪ–ಚೆಟ್ಟಳ್ಳಿ ಮಾರ್ಗವನ್ನು ಬಳಸುವುದು ಎಂದು ಅವರು ಸೂಚಿಸಿದ್ದಾರೆ.

ವಿದ್ಯಾರ್ಥಿ ಎಂ.ಯಶ್ವಿನ್‌ಗೆ 616 ಅಂಕ

ಕುಶಾಲನಗರ, ಮೇ 18– ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಇಲ್ಲಿನ ಫಾತಿಮಾ ಪ್ರೌಢಶಾಲೆಯ ವಿದ್ಯಾರ್ಥಿ ಎಂ.ಯಶ್ವಿನ್ 616 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.



ಕನ್ನಡದಲ್ಲಿ 122,ಇಂಗ್ಲೀಷ್ 100, ಹಿಂದಿ – 100, ಗಣಿತ 100 ವಿಜ್ಞಾನ 99 ಮತ್ತು ಸಮಾಜದಲ್ಲಿ 95 ಅಂಕಗಳನ್ನು ಗಳಿಸಿದ್ದಾನೆ. ಹೌಸಿಂಗ್ ಬೋರ್ಡ್ ನಿವಾಸಿ ಶಿಕ್ಷಕರಾದ ಎ.ಸಿ.ಮಂಜುನಾಥ್ ಹಾಗೂ ಎಂ.ಡಿ.ಮಹಾದೇವಿ ದಂಪತಿಗಳ ಪುತ್ರಯಾಗಿರುವ ಯಶ್ವಿನ್ ಮುಂದೆ ಮೆಡಿಕಲ್ ಪದವಿ ಗಳಿಸಿ ಉನ್ನತ ವ್ಯಾಸಂಗ ಮಾಡುವ ಗುರಿ ಹೊಂದಿದ್ದಾನೆ

ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ; ಚಾಮರಾಜನಗರದಲ್ಲಿ ಸಂಭ್ರಮಾಚರಣೆ



ಚಾಮರಾಜನಗರ, ಮೇ 18– ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಆಯ್ಕೆಯಾದ ಹಿನ್ನೆಲೆ ಚಾಮರಾಜನಗರದ ಭುವನೇಶ್ವರಿ ವೃತ್ತದಲ್ಲಿ ಸಂಗೊಳ್ಳಿ ರಾಯಣ್ಣ ಯುವ ವೇದಿಕೆ ಹಾಗೂ ಸಿದ್ದರಾಮಯ್ಯ ಅಭಿಮಾನಿಗಳ ಬಳಗದಿಂದ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಲಾಯಿತು.

ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಯುವ ವೇದಿಕೆಯ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿ ಆಗುತ್ತಿರುವುದು ಬಹಳ ಸಂತೋಷವಾಗಿದೆ. ಸಿದ್ದರಾಮಯ್ಯ ಎಲ್ಲಾ ಭಾಗ್ಯಗಳ ಸರದಾರ, ಎಲ್ಲಾ ವರ್ಗದ ಜನನಾಯಕರಾಗಿದ್ದಾರೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗುತ್ತಿರುವುದು ಹಾಗೂ ಉಪ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಆಗುತ್ತಿರುವುದು ಸಂತಸ ತಂದಿದೆ ಎಂದರು. ಈ ಸಂದರ್ಭದಲ್ಲಿ ಚಲನಚಿತ್ರ ನಟ ಶಿವು, ನಾಗೇಂದ್ರ, ರಾಮಸಮುದ್ರ ಗೋವಿಂದರಾಜು, ವಕೀಲ ಶಿವರಾಮ್, ಕೋಡಿಮೋಳೆ ಗೋವಿಂದಶೆಟ್ಟಿ, ಕರಿನಂಜನಪುರ ಸ್ವಾಮಿ, ನಂಜುಂಡೇಗೌಡ, ರಾಜಣ್ಣ, ಕಾಗಲವಾಡಿ ಶಿವಸ್ವಾಮಿ, ಚಿನ್ನಸ್ವಾಮಿ, ಮಣಿಕಂಠ, ಸಿ.ಆರ್. ಮಹೇಶ್, ರಾಜೇಂದ್ರ, ರಾಜು, ಸಿದ್ದರಾಮಯ್ಯ ಅಭಿಮಾನಿಗಳು ಹಾಗೂ ಸಂಗೊಳ್ಳಿ ರಾಯಣ್ಣ ಯುವ ವೇದಿಕೆಯ ಕಾರ್ಯಕರ್ತರು ಇದ್ದರು.

ಬಾಲಕಾರ್ಮಿಕ ಪದ್ಧತಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮವಹಿಸಿ

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಸೂಚನೆ

ಚಾಮರಾಜನಗರ, ಮೇ 18– ಜಿಲ್ಲೆಯ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾಗಿ ತಪಾಸಣೆ ನಡೆಸಿ ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಂದ ದುಡಿಸಿಕೊಳ್ಳುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಸೂಚನೆ ನೀಡಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸುವಲ್ಲಿ ವಿಶೇಷ ಪರಿಶ್ರಮ ವಹಿಸಬೇಕು. ಕಾರ್ಮಿಕ ಇಲಾಖೆ ವತಿಯಿಂದ ಹೋಬಳಿವಾರು ತಂಡ ರಚಿಸಿ ಬಾಲ್ಯದಲ್ಲೇ ಮಕ್ಕಳಿಂದ ದುಡಿಸಿಕೊಳ್ಳುವವರು ಎಲ್ಲಿಯೇ ಕಂಡು ಬಂದಲ್ಲಿ ಕೂಡಲೇ ಕಾನೂನು ಪ್ರಕಾರ ಸಂಬಂಧಪಟ್ಟವರ ವಿರುದ್ಧ ಗಂಭೀರ ಕ್ರಮ ತೆಗೆದುಕೊಳ್ಳಬೇಕೆಂದು ಅವರು ತಿಳಿಸಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಬಾಲಕಾರ್ಮಿಕರ ಪತ್ತೆ ಕಾರ್ಯಾಚರಣೆಗೆ ತೊಡಗಿಸಿಕೊಳ್ಳಬೇಕು. ಎಷ್ಟು ಮಕ್ಕಳು ಶಾಲೆ ತೊರೆದಿದ್ದಾರೆ ಎಂಬ ಮಾಹಿತಿ ಸಂಗ್ರಹಿಸಬೇಕು. ಬಾಲ ಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ದಾಖಲು ಮಾಡಬೇಕು. ಮಕ್ಕಳ ಪೋಷಕರಿಗೂ ತಿಳಿವಳಿಕೆ ನೀಡಬೇಕು ಎಂದು ಜಿಲ್ಲಾಧಿಕಾರಿಯವರು ಸೂಚಿಸಿದರು.

ಪಟ್ಟಣ ಪ್ರದೇಶಗಳಲ್ಲಿಯೂ ಬಾಲಕಾರ್ಮಿಕ ಪದ್ಧತಿ ವಿರುದ್ಧ ಅನಿರೀಕ್ಷಿತವಾಗಿ ದಾಳಿ ನಡೆಸಬೇಕು. ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಸೆಕ್ಷನ್ 17ರಡಿ ನೇಮಕಗೊಂಡಿರುವ ವಿವಿಧ ಇಲಾಖೆಗಳ ನಿರೀಕ್ಷಕರು ಕಾಲಕಾಲಕ್ಕೆ ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡಿರುವವರ ವಿರುದ್ಧ ಕಾನೂನು ಕ್ರಮ ವಹಿಸಲು ಅವಕಾಶವಿದೆ. ಇಲಾಖೆಗಳ ನಿರೀಕ್ಷಕರು ವ್ಯಾಪಕವಾಗಿ ತಪಾಸಣೆ ಕೈಗೊಂಡು ಬಾಲಕಾರ್ಮಿಕ ಪದ್ಧತಿ ವಿರುದ್ಧ ಕ್ರಮ ಜರುಗಿಸಬೇಕೆಂದು ಜಿಲ್ಲಾಧಿಕಾರಿಯವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ಸವಿತಾ ಮಾತನಾಡಿ, ಇದೇ ಜೂನ್ ತಿಂಗಳಿನಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ಮಾಸವನ್ನು ಆಚರಿಸಲಾಗುವುದು. ಈ ಅವಧಿಯಲ್ಲಿ ಬಾಲಕಾರ್ಮಿಕ ಪದ್ಧತಿ ಮೂಲೋತ್ಪಾಟನೆಗೆ ಅಗತ್ಯವಿರುವ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಇಲಾಖೆ ವತಿಯಿಂದ ಯೋಜನೆ ಕೈಗೊಳ್ಳಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸರಸ್ವತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿ ಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ಡಿವೈಎಸ್‌ಪಿ ಅನ್ಸರ್ ಅಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಗೀತಾಲಕ್ಷ್ಮಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಯ ಯೋಜನಾ ನಿರ್ದೇಶಕ ಎಂ. ಮಹೇಶ್, ಕಾರ್ಮಿಕ ನಿರೀಕ್ಷಕ ನಾರಾಯಣ ಮೂರ್ತಿ, ಲಕ್ಷ್ಮೀಶ ಇತರರು ಸಭೆಯಲ್ಲಿ ಹಾಜರಿದ್ದರು.

ದ್ವಿತೀಯ ಪಿಯು ಪೂರಕ ಪರೀಕ್ಷೆಗೆ ಅವಕಾಶ

ಚಾಮರಾಜನಗರ, ಮೇ 18– 2022–23 ನೇ ಸಾಲಿನಲ್ಲಿ ಮಾರ್ಚ್–2023 ರ ಮಾಹೆಯಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಸಂಬಂಧ ಹಾಜರಾತಿ ಕೊರತೆಯಿಂದ ಪರೀಕ್ಷೆ ತೆಗೆದುಕೊಳ್ಳಲಾಗದ ಕಲಾ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಮಾತ್ರ (ವಿಜ್ಞಾನ ವಿಭಾಗ ಹೊರತುಪಡಿಸಿ) ಆಯಾ ಕಾಲೇಜುಗಳಿಂದಲೇ (ಸರ್ಕಾರಿ ಮತ್ತು ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ) ಖಾಸಗಿ ಅಭ್ಯರ್ಥಿಗಳಾಗಿ ಮೇ 20ರ ಒಳಗೆ ಪರೀಕ್ಷೆಗೆ ನೊಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳು ಮೇ, ಜೂನ್–2023 ರ ಪೂರಕ ಪರೀಕ್ಷೆ ವೇಳಾಪಟ್ಟಿಯಂತೆ ಪರೀಕ್ಷೆ ಬರೆಯಬಹುದಾಗಿದೆ. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳು, ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಬಗ್ಗೆ ಗಮನ ಹರಿಸಬೇಕೆಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಪ್ರಚಾರದಿಂದ ಬಿಎಸ್‌ಪಿಗೆ ಸೋಲು

ಪಕ್ಷದ ಜಿಲ್ಲಾಧ್ಯಕ್ಷ ನಾಗಯ್ಯ



ಚಾಮರಾಜನಗರ, ಮೇ 18– ಕಾಂಗ್ರೆಸ್ ಮುಖಂಡರು ಮಾಡಿದ ಅಪಪ್ರಚಾರದಿಂದ ಚಾಮರಾಜನಗರ ಕ್ಷೇತ್ರದಲ್ಲಿ ಬಿಎಸ್‌ಪಿಗೆ ಸೋಲಾಯಿತು ಎಂದು ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್. ನಾಗಯ್ಯ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕ್ಷೇತ್ರದಲ್ಲಿ ಸತತ ಎರಡು ವರ್ಷಗಳಿಂದ ನಿರಂತರವಾಗಿ ಪಕ್ಷ ಸಂಘಟನೆ ಮಾಡಿಕೊಂಡು ಬಂದಿದ್ದೆವು. ಕನಿಷ್ಠ 30–40 ಸಾವಿರ ಮತ ಪಡೆಯುವಂತಹ ವಾತಾವರಣ ನಿರ್ಮಾಣವಾಗಿತ್ತು. ಆದರೆ, ಈ ಚುನಾವಣೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮತ ಪಡೆಯಲು ಸಾಧ್ಯವಾಗಿಲ್ಲ. ರಾಜ್ಯದಲ್ಲಿರುವಂತೆ ಜಿಲ್ಲೆಯಲ್ಲೂ ಬಿಜೆಪಿ ವಿರೋಧಿ ಅಲೆ ಇತ್ತು. ವಿ.ಸೋಮಣ್ಣ ಅಭ್ಯರ್ಥಿ ಆದ ಮೇಲೆ ಸಾಕಷ್ಟು ಬದಲಾವಣೆಗಳು ಆದವು. ಕಾಂಗ್ರೆಸ್ ಸೋಲುವ ಭೀತಿಯಿಂದ ಬಿಎಸ್‌ಪಿ ವಿರುದ್ಧ ಅಪಪ್ರಚಾರ ಮಾಡಿದ ಪರಿಣಾಮ ಅತ್ಯಂತ ಕಡಿಮೆ ಮತಗಳನ್ನು ಪಡೆಯಲು ಕಾರಣವಾಯಿತು ಎಂದರು.

ಕಾಂಗ್ರೆಸ್ ಸೋತರೆ ಬಿಜೆಪಿ ಗೆಲ್ಲುತ್ತದೆ ಎಂದು ನಮ್ಮ ವಿರುದ್ಧ ಕರಪತ್ರ ಹಂಚುವ ಮೂಲಕ ಅಪಪ್ರಚಾರ ಮಾಡಲಾಯಿತು. ಶಾಸಕ ಸಿ. ಪುಟ್ಟರಂಗಶೆಟ್ಟಿ ಗೆಲುವಿಗೆ ಅಭಿನಂದನೆ ಸಲ್ಲಿಸುತ್ತೇವೆ. ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಲೇ ಐದು ಗ್ಯಾರಂಟಿಗಳನ್ನು ಈಡೇರಿಸುವ ಕೆಲಸ ಮಾಡಬೇಕು. ಜನರ ಹಿತ ಕಾಪಾಡಲು ಹಿಂದೇಟು ಹಾಕಿದರೆ ನಾವು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಹ.ರಾ. ಮಹೇಶ್ ಮಾತನಾಡಿ, ನಮ್ಮದು ವೀರೋಚಿತವಾದ ಸೋಲಾಗಿದೆಯೇ ಹೊರತು ನಮ್ಮ ಸಿದ್ಧಾಂತ ಸೋತಿಲ್ಲ. ಬಿಎಸ್‌ಪಿಗೆ ಮತ ನೀಡಿದರೆ ಬಿಜೆಪಿ ಗೆದ್ದುಬಿಡುತ್ತದೆ ಎಂಬ ಕಾರಣಕ್ಕೆ ಮತದಾರರು ಕಾಂಗ್ರೆಸ್ ಆಯ್ಕೆ ಮಾಡಿಕೊಂಡಿದ್ದಾರೆ. ಹಣದ ಹೊಳೆ ಹಾಗೂ ಅಪಪ್ರಚಾರದ ನಡುವೆ 6 ಸಾವಿರಕ್ಕಿಂತಲೂ ಅಧಿಕ ಮತ ನೀಡಿದ ಸ್ವಾಭಿಮಾನಿ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಬ.ಮ. ಕೃಷ್ಣಮೂರ್ತಿ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ತಾಲೂಕು ಅಧ್ಯಕ್ಷ ಅಮಚವಾಡಿ ಪ್ರಕಾಶ್, ಎಸ್.ಪಿ. ಮಹೇಶ್, ಬಸವರಾಜ್ ಹಾಜರಿದ್ದರು.

ಕಾಂಗ್ರೆಸ್‌ನ ಗ್ಯಾರಂಟಿಗಳಿಂದಷ್ಟೇ ಗಣೇಶ್‌ಪ್ರಸಾದ್ ಗೆಲುವು

ಬಿಜೆಪಿ ಪರಾಜಿತ ಅಭ್ಯರ್ಥಿ ನಿರಂಜನ್‌ಕುಮಾರ್




ಗುಂಡ್ಲುಪೇಟೆ, ಮೇ 18– ಕಾಂಗ್ರೆಸ್ ನೀಡಿರುವ 5 ಗ್ಯಾರಂಟಿಗಳನ್ನು ನೋಡಿ ಜನರು ಮತ ಕೊಟ್ಟಿದ್ದಾರೆಯೇ ಹೊರತು ಗಣೇಶ್‌ಪ್ರಸಾದ್ ಮುಖ ನೋಡಿ ಮತ ನೀಡಿಲ್ಲ ಎಂದು ಪರಾಜಿತ ಅಭ್ಯರ್ಥಿ ಸಿ.ಎಸ್. ನಿರಂಜನಕುಮಾರ್ ವ್ಯಂಗ್ಯವಾಡಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ಬಿಜೆಪಿ ಪರವಾಗಿ ಮತ ಚಲಾವಣೆ ಮಾಡಿರುವ ಕ್ಷೇತ್ರದ ಎಪ್ಪತ್ತು ಸಾವಿರಕ್ಕೂ ಹೆಚ್ಚು ಮತದಾರರರಿಗೆ ಧನ್ಯವಾದ ಅರ್ಪಿಸುತ್ತಿದ್ದೇನೆ. ಸೋಲು–ಗೆಲುವು ಸಾಮಾನ್ಯವಾಗಿದ್ದು ಇದನ್ನು ನಾನು ಸಮಚಿತ್ತದಿಂದ ಸ್ವೀಕರಿಸುತ್ತೇನೆ. ಮುಂದೆಯೂ ಜನರೊಂದಿಗೆ ಇದ್ದು ಕ್ಷೇತ್ರದ ಸೇವೆ ಮಾಡುತ್ತೇನೆ ಎಂದರು.

ಈ ಬಾರಿ ಕ್ಷೇತ್ರದಲ್ಲಿ ಜಯಗಳಿಸಿರುವ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಈಗ ಕೊಟ್ಟಿರುವ 5 ಗ್ಯಾರಂಟಿಗಳನ್ನು ಕಾಂಗ್ರೆಸ್ ಹೇಳಿರುವಂತೆ ಮೊದಲ ಅಧಿವೇಶನದಲ್ಲಿಯೇ ಈಡೇರಿಸದಿದ್ದರೆ ಬಿಜೆಪಿಯು ಬೀದಿಗಿಳಿದು ಹೋರಾಟ ಮಾಡಿ, ರಾಜ್ಯದ ಜನತೆಗೆ ನೀಡಿರುವ ಭರವಸೆಯನ್ನು ಈಡೇರಿಸುವಂತೆ ಒತ್ತಾಯಿಸುತ್ತದೆ ಎಂದರು. ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಸರ್ಕಾರಿ ಕಟ್ಟಡವಾದ ಪ್ರವಾಸಿ ಮಂದಿರದ ಮೇಲೆ ಕಾಂಗ್ರೆಸ್ ಧ್ವಜ ಹಾರಿಸಿದೆ. ಪೊಲೀಸ್ ಠಾಣೆಯನ್ನು ದುರ್ಬಳಕೆ ಮಾಡಿಕೊಳ್ಳಲು ಮುಂದಾಗಿದ್ದು ಊರಿನಲ್ಲಿಯೇ ಇಲ್ಲದವರ ಮೇಲೆ ಪ್ರಕರಣ ದಾಖಲಿಸಲಾಗಿದೆ. ತಾವು ಅಧಿಕಾರದಲ್ಲಿದ್ದ ಅವಧಿಯಲ್ಲಿ ಎಂದೂ ದ್ವೇಷದ ರಾಜಕಾರಣ ಮಾಡಲಿಲ್ಲ. ಈಗಲೂ ಕ್ಷೇತ್ರದಲ್ಲಿ ಇಂಥಾ ದ್ವೇಷದ ರಾಜಕಾರಣ ಮಾಡುವುದನ್ನು ನಾನು ಸಹಿಸುವುದಿಲ್ಲ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಿರಿಕಾಟಿ ಸೋಮಶೇಖರ್, ಮಂಡಲಾಧ್ಯಕ್ಷ ದೊಡ್ಡಹುಂಡಿ ಜಗದೀಶ್, ಯುವಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಮುಖಂಡ ಎಲ್.ಸುರೇಶ್, ಮಾಧ್ಯಮ ಸಂಚಾಲಕ ಎಸ್.ಸಿ ಮಂಜುನಾಥ್ ಹಾಗೂ ಇತರರು ಇದ್ದರು.

ಆರೋಗ್ಯ ಸೇವೆಯಲ್ಲಿ ನರ್ಸಿಂಗ್ ಪಾತ್ರ ಮುಖ್ಯ



ಚಾಮರಾಜನಗರ, ಮೇ 18– ಸರ್ಕಾರಿ ಆಸ್ಪತ್ರೆಯಾಗಲಿ ಅಥವಾ ಖಾಸಗಿ ಆಸ್ಪತ್ರೆಯಾಗಲಿ ರೋಗಿಗಳ ಸೇವೆಯಲ್ಲಿ ನರ್ಸಿಂಗ್ ಪಾತ್ರ ಅತಿ ಮುಖ್ಯವಾಗಿದೆ ಎಂದು ಮೈಸೂರು ಜೆಎಸ್‌ಎಸ್ ವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗ ನಿರ್ದೇಶಕ ಆರ್. ಮಹೇಶ್ ತಿಳಿಸಿದರು.

ನಗರ ಜೋಡಿ ರಸ್ತೆಯಲ್ಲಿರುವ ಜೆಎಸ್‌ಎಸ್ ನರ್ಸಿಂಗ್ ಕಾಲೇಜು 19ನೇ ವರ್ಷದ ವಿದ್ಯಾರ್ಥಿಗಳಿಂದ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಹಲವರು ಹೊರ ದೇಶದಲ್ಲಿ ಉನ್ನತ ಮಟ್ಟದ ಅಧಿಕಾರಿಯಾಗಿ ಸೇವೆ ಮಾಡುತ್ತಿದ್ದಾರೆ. ಅವರಂತೆ ನೀವು ಕೂಡ ಉತ್ತಮ ವಿದ್ಯಾಭ್ಯಾಸ ಮಾಡಿ ಸಮಾಜಕ್ಕೆ ಸೇವೆ ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಪ್ರಾಂಶುಪಾಲ ಡಾ.ಗಿರೀಶ್ ವಿ.ಪಾಟೀಲ್ ಮಾತನಾಡಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ, ಶಿಕ್ಷಣ ಸಂಸ್ಥೆಗಳ ಜೊತೆಗೆ ದೇಶ–ವಿದೇಶಗಳಲ್ಲಿ ಆಸ್ಪತ್ರೆ ತೆರೆದು ಉತ್ತಮ ಸೇವೆ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನಲ್ಲಿ ನುರಿತ ಬೋಧಕರು ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ಜೊತೆಗೆ ಸಮಯ ಪ್ರಜ್ಞೆ, ಶಿಸ್ತು, ಸೇವಾ ಮನೋಭಾವನೆ ಬೆಳೆಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನರ್ಸಿಂಗ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಕಾಲೇಜಿನ ವಿದ್ಯಾರ್ಥಿಗಳಾದ ದಿವ್ಯಾ, ಮಂಜುಳಾ, ರೇಖಾ, ಸತ್ಯಮೂರ್ತಿ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.



ಕಾರ್ಯಕ್ರಮದಲ್ಲಿ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನರ್ಸಿಂಗ್ ಅಧೀಕ್ಷಕರಾದ ಗೀತಾ ಎನ್ ಅವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾಲೇಜಿನ ಉಪನ್ಯಾಸಕರಾದ ಉಷಾ, ಸಂಧ್ಯಾಶ್ರೀ ಇತರರು ಹಾಜರಿದ್ದರು

ಮೂರನೇ ಪುಟದಿಂದ

ಸಿದ್ದರಾಮಯ್ಯ ಮುಖ್ಯಮಂತ್ರಿ

ಪ್ರಮಾಣವಚನ ಬೋಧಿಸುವಂತೆಯೂ ಮನವಿ ಮಾಡಲಾಗಿದೆ. ಇದಕ್ಕೆ ರಾಜ್ಯಪಾಲರು ಸಮ್ಮತಿಸಿ, ಕಾರ್ಯಕ್ರಮ ರೂಪಿಸಲು ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಆದೇಶ ಮಾಡಿದ್ದಾರೆ. ನಿನ್ನೆ ರಾತ್ರಿಯವರೆಗೂ ಸಿಎಲ್‌ಪಿ ನಾಯಕತ್ವ ಆಯ್ಕೆ ಕಗ್ಗಂಟು ಮುಂದುವರೆದಿತ್ತು. ಕೊನೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸೋನಿಯಾಗಾಂಧಿಯವರನ್ನು ಭೇಟಿ ಮಾಡಿ, ನಾಯಕತ್ವದ ವಿಷಯಕ್ಕೆ ತೆರೆ ಎಳೆಯುವಂತೆ ಮನವಿ ಮಾಡಿದ್ದರು. ನಾಯಕತ್ವಕ್ಕಾಗಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ತಮ್ಮ ಹಕ್ಕು ಪ್ರತಿಪಾದನೆಯಲ್ಲಿ ಹಿಂದೆ ಸರಿಯದಿದ್ದಾಗ ಸೋನಿಯಾ ಅವರು ಶಿವಕುಮಾರ್ ಅವರನ್ನು ಸಂಪರ್ಕಿಸಿ, ನಾವು ಮತ್ತು ಪಕ್ಷ ನಿಮ್ಮ ಪರ ಇದ್ದೇವೆ. ನೀವು ಪಕ್ಷಕ್ಕೆ ಸಲ್ಲಿಸಿರುವ ಸೇವೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮೊದಲ ಅವಧಿಯಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಲಿ, ನಂತರದ ಅವಧಿಯನ್ನು ನೀವು ಪಡೆದುಕೊಳ್ಳಿ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವೇಣುಗೋಪಾಲ್ ಅವರು ನಿಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಲಿದ್ದಾರೆ. ವಿಳಂಬ ಮಾಡದೇ ಸರ್ಕಾರ ರಚನೆ ಮಾಡಿ ಎಂದು ಕಿವಿಮಾತು ಹೇಳಿದರು.

ಅಲ್ಲಿಯವರೆಗೂ ಪಟ್ಟು ಹಿಡಿದಿದ್ದ ಶಿವಕುಮಾರ್, ಕೊನೆಗೆ ತಮ್ಮ ನಿಲುವನ್ನು ಸಡಿಲಿಸಿ, ಸಿದ್ದರಾಮಯ್ಯ ನಾಯಕತ್ವದಲ್ಲಿ ಸರ್ಕಾರ ರಚನೆಗೆ ಸಮ್ಮತಿಸಿದರು. ಇಂದು ಮುಂಜಾನೆ ಖರ್ಗೆ ಹಾಗೂ ವೇಣುಗೋಪಾಲ್ ಸುದೀರ್ಘ ಚರ್ಚೆ ನಡೆಸಿದ ನಂತರ ಶನಿವಾರ ಸರ್ಕಾರ ರಚಿಸಲು ನಾಯಕರು ತೀರ್ಮಾನ ಕೈಗೊಂಡರು.

ಚರ್ಚೆ ಸಂದರ್ಭದಲ್ಲಿ ಶಿವಕುಮಾರ್ ಅವರನ್ನು ಮಾತ್ರ ಉಪಮುಖ್ಯಮಂತ್ರಿಯಾಗಿ ನೇಮಿಸುವುದು, ಅಲ್ಲದೆ ಅವರಿಗೆ ಇಂಧನ ಮತ್ತು ಬೃಹತ್ ನೀರಾವರಿ ಇಲಾಖೆಯ ಹೊಣೆಗಾರಿಕೆ ವಹಿಸುವುದು. ಮುಂಬರುವ ಲೋಕಸಭಾ ಚುನಾವಣೆಯವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಯಲು ಪಕ್ಷ ಸಮ್ಮತಿಸಿತು. ಅವರ ಕೋರಿಕೆಯಂತೆ ನಗರದಲ್ಲಿ ತುರ್ತು ಶಾಸಕಾಂಗ ಸಭೆ ನಡೆಸಿ, ಆ ಸಭೆಯಲ್ಲಿ ಎಐಸಿಸಿಯಲ್ಲಿ ಆಗಿರುವ ಒಪ್ಪಂದವನ್ನು ಶಾಸಕರ ಮುಂದೆ ಸಿದ್ದರಾಮಯ್ಯನವರೇ ಬಹಿರಂಗಪಡಿಸಬೇಕು ಎಂದು ನಿರ್ಧರಿಸಲಾಯಿತು. ಮೊದಲ ಎರಡೂವರೆ ವರ್ಷ ಅವಧಿ ತಮಗೂ, ನಂತರದ ಅವಧಿಯನ್ನು ಶಿವಕುಮಾರ್‌ಗೆ ಬಿಟ್ಟುಕೊಡುವ ಒಪ್ಪಂದಕ್ಕೆ ನಾಲ್ಕು ಗೋಡೆಗಳ ಮಧ್ಯೆ ಶಾಸಕರ ಗಮನಕ್ಕೆ ತರುವುದು ಹಾಗೂ ಅಧಿಕಾರ ಹಂಚಿಕೆ ಸೂತ್ರವನ್ನು ಬಹಿರಂಗಪಡಿಸುವ ನಿರ್ಧಾರ ಕೈಗೊಳ್ಳಲಾಯಿತು. ಅಲ್ಲದೆ ಸಂಪುಟ ರಚನೆ ಸಂದರ್ಭದಲ್ಲಿ ಶಿವಕುಮಾರ್ ಹೆಸರಿಸುವ ಕೆಲವರಿಗೆ ಅವಕಾಶ ಮಾಡಿಕೊಡಲು ಸಹ ಎಐಸಿಸಿ ಸಮ್ಮತಿ ನೀಡಿದೆ. ಈ ಸಮ್ಮತಿಯ ನಂತರವೇ ಇಂದು ಮುಂಜಾನೆ ವೇಣುಗೋಪಾಲ್ ಪತ್ರಿಕಾಗೋಷ್ಠಿ ನಡೆಸಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ಎಲ್ಲಾ ಹಿರಿಯ ನಾಯಕರ ಜತೆ ಚರ್ಚೆ ಮಾಡಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಭಿಪ್ರಾಯ ಪಡೆದು ಸಿದ್ದರಾಮಯ್ಯ ಅವರನ್ನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ರಾಜ್ಯದ ಏಕೈಕ ಉಪಮುಖ್ಯಮಂತ್ರಿ ಹಾಗೂ ಮುಂಬರುವ ಲೋಕಸಭಾ ಚುನಾವಣೆವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಸಲು ತೀರ್ಮಾನಿಸಲಾಗಿದೆ ಎಂದರು.

ಕರ್ನಾಟಕ ರಾಜ್ಯದ ಜನ ಕಾಂಗ್ರೆಸ್ ಪಕ್ಷಕ್ಕೆ ಅಭೂತಪೂರ್ವ ಬೆಂಬಲ ನೀಡಿದ್ದು, ಅವರಿಗೆ ಮೊದಲು ಹೃದಯಪೂರ್ವಕ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ.

ಈ ಚುನಾವಣೆ ರಾಜ್ಯದ ಬಡವರು ಹಾಗೂ ಶ್ರೀಮಂತರ ನಡುವಣ ಚುನಾವಣೆ ಆಗಿತ್ತು. ಹೀಗಾಗಿ ರಾಜ್ಯದ ಬಡ ಹಾಗೂ ಮಾಧ್ಯಮ ವರ್ಗದ ಜನ ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದ್ದಾರೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ ನಮ್ಮ ಪಕ್ಷದ ಎಲ್ಲಾ ನಾಯಕರು ಕಠಿಣ ಶ್ರಮವಹಿಸಿದ್ದಾರೆ.

ನಮ್ಮ ಅಧ್ಯಕ್ಷರಾದ ಖರ್ಗೆ ಅವರು ಒಂದು ತಿಂಗಳ ಕಾಲ ಪ್ರಚಾರದಲ್ಲಿ ನಿರಂತರವಾಗಿ ಭಾಗವಹಿಸಿ ನಮಗೆ ಮಾರ್ಗದರ್ಶನ ನೀಡಿದ್ದರು. ಭಾರತ ಜೋಡೋ ಯಾತ್ರೆ ಮೂಲಕ ಕಾಂಗ್ರೆಸ್ ಪಕ್ಷದ ಪ್ರಚಾರ ಆರಂಭವಾಗಿ, ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಲಾಗಿತ್ತು. ಹೀಗಾಗಿ ನಾನು ರಾಹುಲ್ ಗಾಂಧಿಗೆ ಧನ್ಯವಾದ ಅರ್ಪಿಸುತ್ತೇನೆ. ಪ್ರಿಯಾಂಕಾ ಗಾಂಧಿ ಅವರು ಕೂಡ ನಿರಂತರ ಪ್ರಚಾರ ಮಾಡಿದ್ದು, ಅವರ ಸಭೆಗಳು ಜನಪ್ರಿಯವಾಗಿದ್ದವು. ಇನ್ನು ಸೋನಿಯಾ ಗಾಂಧಿ ಅವರ ಉಪಸ್ಥಿತಿ ಹಾಗೂ ಮಾರ್ಗದರ್ಶನ ಪಕ್ಷದ ಕಾರ್ಯಕರ್ತರಲ್ಲಿ ಶಕ್ತಿ ತುಂಬಿತು. ಮೇ 13ರಂದು ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಕ್ಕಿದ್ದು, 14ರಂದು ಕಾಂಗ್ರೆಸ್ ಶಾಸಕಾಂಗ ಸಭೆ ನಡೆದಿತ್ತು. ಅಧ್ಯಕ್ಷರು, ಮೂವರು ವೀಕ್ಷಕರನ್ನು ಕಳುಹಿಸಿ ಶಾಸಕರ ಅಭಿಪ್ರಾಯ ಸಂಗ್ರಹಿಸಿದರು. ನಮ್ಮದು ಪ್ರಜಾಪ್ರಭುತ್ವ ಪಕ್ಷವಾಗಿದ್ದು, ನಮ್ಮ ಪಕ್ಷದಲ್ಲಿ ಸರ್ವಾಧಿಕಾರದ ನಿರ್ಧಾರಕ್ಕೆ ಅವಕಾಶ ಇಲ್ಲ. ನಮ್ಮಲ್ಲಿ ಒಮ್ಮತದ ತೀರ್ಮಾನಕ್ಕೆ ಪ್ರಯತ್ನ ಮಾಡಲಾಗಿತ್ತು. ಕರ್ನಾಟಕ ರಾಜ್ಯದಲ್ಲಿ ನಮ್ಮ ಪಕ್ಷದಲ್ಲಿ ಅನೇಕ ದೊಡ್ಡ ದೊಡ್ಡ ನಾಯಕರು ಇದ್ದಾರೆ. ಸಿದ್ದರಾಮಯ್ಯ, ಸಾಕಷ್ಟು ಅನುಭವ, ವಿಶಿಷ್ಟ ಆಡಳಿತ ಶೈಲಿ ಹೊಂದಿದ್ದು, ಚುನಾವಣೆಯಲ್ಲಿ ಪಕ್ಷಕ್ಕೆ ಪರಿಶ್ರಮ ಹಾಕಿ ಪ್ರಚಾರ ಮಾಡಿದ್ದಾರೆ. ನಮ್ಮ ಪಕ್ಷದ ಅತ್ಯಂತ ಪ್ರಬಲ ಸಂಘಟನಾಕಾರ ಡಿ.ಕೆ. ಶಿವಕುಮಾರ್, ರಾಜ್ಯದ ಕಾಂಗ್ರೆಸ್ ಕಾರ್ಯಕರ್ತರಿಗೆ ಶಕ್ತಿ ತುಂಬಿದ್ದಾರೆ. ತಳಹಂತದವರೆಗೆ ತಲುಪಿ ಪಕ್ಷ ಸಂಘಟಿಸಿದ್ದರು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರದ್ದು ಅತ್ಯುತ್ತಮ ಜೋಡಿಯಾಗಿದ್ದು, ಇಬ್ಬರೂ ಕಾಂಗ್ರೆಸ್ ಪಕ್ಷದ ಶಕ್ತಿಯಾಗಿದ್ದಾರೆ. ಇವರಿಬ್ಬರೂ ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹರು. ಹೀಗಾಗಿ ಕಾಂಗ್ರೆಸ್ ಅಧ್ಯಕ್ಷರು ಈ ವಿಚಾರವಾಗಿ ಇಬ್ಬರೂ ನಾಯಕರ ಜತೆ ಪ್ರತ್ಯೇಕವಾಗಿ ಹಲವು ಸಭೆ ನಡೆಸಿದ್ದಾರೆ. ಇನ್ನು ಹಿರಿಯ ನಾಯಕರ ಜತೆಯೂ ಚರ್ಚೆ ಮಾಡಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರ ಅಭಿಪ್ರಾಯ ಸಂಗ್ರಹಿಸಿ ಖರ್ಗೆ ಅವರು ಕರ್ನಾಟಕ ರಾಜ್ಯದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಶ್ರೀಯುತ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದಾರೆ ಎಂದರು.

ಸಿಎಂ, ಡಿಸಿಎಂ ಜೊತೆ 12 ಸಚಿವರ ಪ್ರಮಾಣ

ಸರ್ಕಾರದ ಮುಖ್ಯಮಂತ್ರಿಗಳನ್ನು ಆಹ್ವಾನಿಸಲು ಇದೇ ಸಂದರ್ಭದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಖರ್ಗೆ ಅವರೇ ಈ ಎಲ್ಲಾ ನಾಯಕರನ್ನು ಸಂಪರ್ಕಿಸಿ, ಪ್ರಮಾಣ ವಚನ ಸಮಾರಂಭಕ್ಕೆ ಆಹ್ವಾನ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಕೂಡ ಸಂಪರ್ಕ ಮಾಡಿ, ಸರ್ಕಾರ ರಚನೆ ಸಂದರ್ಭದಲ್ಲಿ ಭಾಗವಹಿಸುವಂತೆ ಮನವಿ ಮಾಡಲಿದ್ದಾರೆ. ಪಕ್ಷಕ್ಕಾಗಿ ದುಡಿದ ಹಿರಿಯರನ್ನು ಹೊರಗಿಟ್ಟು, ನಾವಿಬ್ಬರೇ ಅಧಿಕಾರ ಸ್ವೀಕರಿಸುವುದು ಸರಿಯೇ ಎಂಬ ಶಿವಕುಮಾರ್ ಮಾತಿಗೆ ಖರ್ಗೆ ಅವರು ಮೊದಲನೇ ಹಂತದಲ್ಲಿ ಎಲ್ಲಾ ಸಮುದಾಯಕ್ಕೆ ಸೇರಿದ ಹಿರಿಯರನ್ನು ಮಂತ್ರಿಗಳನ್ನಾಗಿ ತೆಗೆದುಕೊಳ್ಳಲು ಅನುಮತಿ ನೀಡಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಮಂತ್ರಿಮಂಡಲ ಅಂದೇ ರಚನೆಯಾದರೆ ಹಿರಿಯ ನಾಯಕರಾದ ಆರ್.ವಿ.ದೇಶಪಾಂಡೆ, ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಬಿ.ಕೆ. ಹರಿಪ್ರಸಾದ್, ಕೆ.ಎಚ್. ಮುನಿಯಪ್ಪ, ಡಾ.ಜಿ. ಪರಮೇಶ್ವರ್, ಯು.ಟಿ. ಖಾದರ್, ಜಮೀರ್ ಅಹಮದ್‌ಖಾನ್, ಎಂ.ಬಿ. ಪಾಟೀಲ್, ಸತೀಶ್ ಜಾರಕಿಹೊಳಿ, ಲಕ್ಷ್ಮಣ್ ಸವದಿ, ಶಿವರಾಜ ತಂಗಡಗಿ ಅವರನ್ನು ಸಚಿವರನ್ನಾಗಿ ಆಯ್ಕೆ ಮಾಡುವ ಪ್ರಸ್ತಾವವಾಗಿದೆ. ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಎಲ್ಲಾ ಹಂತದಲ್ಲೂ ಗೌರವಯುತವಾಗಿ ನಡೆಸಿಕೊಳ್ಳುವಂತೆ ಖರ್ಗೆ ಉಭಯ ನಾಯಕರಿಗೆ ಕಿವಿಮಾತು ಹೇಳಿದ್ದಾರೆ. ಸರ್ಕಾರ ರಚನೆಯಾಗುತ್ತಿದ್ದಂತೆ ಜಗದೀಶ್ ಶೆಟ್ಟರ್‌ಗೆ ಆಡಳಿತ ಮಟ್ಟದಲ್ಲಿ ಒಂದು ದೊಡ್ಡ ಹುದ್ದೆ ದೊರೆಯುವುದರ ಜೊತೆಗೆ ವಿಧಾನಪರಿಷತ್ ಸದಸ್ಯರಾಗಿ ನೇಮಕ ಮಾಡುವ ಬಗ್ಗೆಯು ಚರ್ಚೆಯಾಗಿದೆ. ಬಹುತೇಕ ಇಂದು ಸಿಎಲ್‌ಪಿ ಸಭೆ ಮುಗಿಸಿಕೊಂಡು ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಾಳೆ ಮತ್ತೆ ದೆಹಲಿಗೆ ತೆರಳಿ ರಾಷ್ಟ್ರೀಯ ನಾಯಕರಿಗೆ ಸಮಾರಂಭಕ್ಕೆ ಆಹ್ವಾನ ನೀಡುವುದಲ್ಲದೆ, ಮಂತ್ರಿಮಂಡಲ ರಚನೆ ಕುರಿತಂತೆ ವರಿಷ್ಠರೊಟ್ಟಿಗೆ ಚರ್ಚೆ ಮಾಡಲಿದ್ದಾರೆ ಎನ್ನಲಾಗಿದೆ.

ರಾಜ್ಯಪಾಲರ ಆಹ್ವಾನ

ಎಲ್ಲಾ ಶಾಸಕರು ಒಕ್ಕೊರಲಿನಿಂದ ಸ್ವಾಗತಿಸಿದರು. ನಂತರ ಕೇಂದ್ರದ ವೀಕ್ಷಕರು ಸಿದ್ದರಾಮಯ್ಯ ಅವರಿಗೆ ಹೂಗುಚ್ಛ ನೀಡಿ, ಅಭಿನಂದಿಸಿದರು. ಈ ಸಭೆಯಲ್ಲಿ ನೂತನ ಶಾಸಕರು ಮಾತ್ರವಲ್ಲದೇ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ವೀಕ್ಷಕರಾದ ಮಹಾರಾಷ್ಟ್ರ ಮಾಜಿ ಸಿಎಂ ಸುಶೀಲ್ ಕುಮಾರ್ ಸಿಂಧೆ ಮತ್ತಿತರರಿದ್ದರು. ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸಗಳು ಮಾತ್ರವಲ್ಲದೇ, ಕಾಂಗ್ರೆಸ್ ಕಚೇರಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಆರೋಪಿಗಳ ಸುಳಿವು ಸಿಕ್ಕಿದೆ

ಸಿಸಿಬಿ ತಂಡ ರಚಿಸಲಾಗಿದ್ದು, ನಾನೂ ಮೇಲ್ವಿಚಾರಣೆ ಮಾಡುತ್ತಿದ್ದೇನೆ. ಪ್ರತ್ಯಕ್ಷದರ್ಶಿಗಳು ಹಾಗೂ ಚಂದ್ರುವಿನ ಮನೆಯವರಿಂದ ಮಾಹಿತಿ ಪಡೆಯುತ್ತೇವೆ. ಪ್ರಾಥಮಿಕವಾಗಿ ಒಂದಷ್ಟು ಮಾಹಿತಿ, ಸುಳಿವು ಸಿಕ್ಕಿದ್ದು, ಆರೋಪಿಗಳ ಪತ್ತೆಯ ಬಳಿಕ ಸ್ಪಷ್ಟ ಮಾಹಿತಿ ಲಭ್ಯವಾಗಲಿದೆ ಎಂದರು. ಚಂದ್ರು ಮೇಲೆ ರೌಡಿ ಶೀಟರ್ ಇದೆ. 2008ರಲ್ಲಿ ನಡೆದ ಹುಣಸೂರು ಜೋಡಿಕೊಲೆ, 2016ರ ದೇವು ಮರ್ಡರ್ ಕೇಸ್‌ನಲ್ಲಿ ಜೈಲಿಗೆ ಹೋಗಿ ಬಿಡುಗಡೆಯಾಗಿ ಬಂದಿದ್ದರು. ಚುನಾವಣೆ ಸಂದರ್ಭದಲ್ಲಿ ಪರೇಡ್ ಮಾಡಿದಾಗ 2-3 ಸಾರಿ ಬಂದಿದ್ದರು. ಸಣ್ಣ ಪುಟ್ಟ ಫೈನಾನ್ಸ್ ಮಾಡಿಕೊಂಡಿದ್ದ ಚಂದ್ರು ಮೇಲೆ ಇತ್ತೀಚೆಗೆ ಯಾವುದೇ ಪ್ರಕರಣ ಇರಲಿಲ್ಲ. ಯಾರು ಹತ್ಯೆ ಮಾಡಿದ್ದಾರೆ, ಎಷ್ಟು ಜನ ಇದ್ದರು ಎನ್ನುವುದನ್ನು ಪರಿಶೀಲನೆ ಮಾಡಿ ತಿಳಿಸುತ್ತೇವೆ. 6 ತಿಂಗಳಿಂದ ನಗರದಲ್ಲಿ ರೌಡಿ ಶೀಟರ್‌ಗಳ ನಿಯಂತ್ರಿಸುವ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದೇವೆ. ನಾಲ್ಕು ಬಾರಿ ಮುಂಜಾನೆಯೇ ಮನೆ ಮೇಲೆ ದಾಳಿ ಮಾಡಿ ಪರಿಶೀಲಿಸಿದ್ದೇವೆ. 20 ಜನರಿಗೆ ಗಡಿಪಾರು ಮಾಡಿ, ಒಬ್ಬನನ್ನು ಗೂಂಡಾ ಆಕ್ಟ್‌ನಲ್ಲಿ ಜೈಲಿಗೆ ಕಳುಹಿಸಿದ್ದೇವೆ. ಕುಖ್ಯಾತರ ಮೇಲೆ ಸಿಸಿಬಿ ಪೊಲೀಸರು ನಿರಂತರವಾಗಿ ಕಣ್ಣಾವಲಿಟ್ಟಿದ್ದಾರೆ. ಆದರೂ ಈ ಕೃತ್ಯ ನಡೆದಿದ್ದು, ಆರೋಪಿಗಳನ್ನು ಪತ್ತೆ ಮಾಡಿ ತನಿಖೆ ನಡೆಸಲಾಗುವುದು ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರ ವ್ಯಾಪ್ತಿಯ ಹುಕ್ಕಾಬಾರ್, ಜೂಜಾಟ ಬಂದ್

ಚುನಾವಣೆ ವೇಳೆ ನೀಡಿದ್ದ ಎಲ್ಲಾ ಭರವಸೆ ಈಡೇರಿಸುವ ಗುರಿ: ಚಾಮರಾಜ ಕ್ಷೇತ್ರದ ನೂತನ ಶಾಸಕ ಹರೀಶ್‌ಗೌಡ ಸಂಕಲ್ಪ



ಮೈಸೂರು, ಮೇ 18 (ಎಂಟಿವೈ) – ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಕೆಲವರ ಕುಮ್ಮಕ್ಕಿನಿಂದ ನಡೆಯುತ್ತಿರುವ ಹುಕ್ಕಾಬಾರ್ ಹಾಗೂ ಜೂಜಾಟ ದಂಧೆಯನ್ನು ಮುಚ್ಚಿಸಿ, ಯುವ ಜನರ ರಕ್ಷಣೆಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬಿಜೆಪಿ ಸರ್ಕಾರ ಆಡಳಿತ ನಡೆಸುತ್ತಿತ್ತು. ಚಾಮರಾಜ ಕ್ಷೇತ್ರದಲ್ಲಿ ಐದು ವರ್ಷದಿಂದ ಬಿಜೆಪಿ ಶಾಸಕರಿದ್ದರು. ಆದರೂ, ಅನೇಕ ಕಡೆ ಹುಕ್ಕಾ ಬಾರ್, ಜೂಜು ದಂಧೆ ಎಗ್ಗಿಲ್ಲದೆ ನಡೆಯುತ್ತಿತ್ತು. ಕ್ಯಾಸಿನೋ ಹೆಚ್ಚಾಗಿದ್ದು, ಯುವ ಜನರನ್ನು ಆಕರ್ಷಿಸಿ, ಹಣ ವಸೂಲಿ ಮಾಡಲಾಗುತ್ತಿದೆ ಎಂದರು.

ನಾನು ಒಂಟಿಕೊಪ್ಪಲಿನಲ್ಲಿದ್ದ ಕ್ಯಾಸಿನೊವೊಂದನ್ನು ಪೊಲೀಸ್ ಆಯುಕ್ತರಿಗೆ ಹೇಳಿ ಮುಚ್ಚಿಸಿದ್ದೆ. ಆಗ ಸಚಿವರಾಗಿದ್ದ ಅಶ್ವಥ್‌ನಾರಾಯಣ್ ಅವರು ನನಗೆ ಕರೆ ಮಾಡಿ, ಆ ಕ್ಯಾಸಿನೋ ನಮ್ಮ ಸಂಬಂಧಿಗೆ ಸೇರಿದ್ದು. ಅದಕ್ಕೆ ತೊಂದರೆ ಕೊಡಬೇಡಿ ಎಂದಿದ್ದರು. ಕ್ಯಾಸಿನೋ, ಹುಕ್ಕಾಬಾರ್, ಜೂಜಾಟದ ದಂಧೆಯ ಹಿಂದೆ ಬಿಜೆಪಿಗರು ಇದ್ದಾರೆ. ಆದರೆ, ಪರಾಜಿತ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಹುಕ್ಕಾಬಾರ್‌ಗಳ ಮಾಲೀಕರಿಂದ ನಾನು ಗೆದ್ದಿದ್ದೇನೆ ಎಂದು ಆರೋಪ ಮಾಡಿ ತಮ್ಮ ತಪ್ಪನ್ನು ಮರೆಮಾಚಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ನನಗೆ ಯಾವುದೇ ಹುಕ್ಕಾಬಾರ್‌ಗಳು ತಿಳಿದಿಲ್ಲ. ಈ ಹಿಂದೆ ನಾನು ಯಾವ ಅಧಿಕಾರದಲ್ಲೂ ಇರಲಿಲ್ಲ. ಕ್ಷೇತ್ರದ ಶಾಸಕರಾಗಿದ್ದ ಎಲ್.ನಾಗೇಂದ್ರ ಹುಕ್ಕಾಬಾರ್, ಜೂಜು ಅಡ್ಡೆ, ಕ್ಯಾಸಿನೋ ಮುಚ್ಚಿಸಲು ಯಾಕೆ ಕ್ರಮ ಕೈಗೊಳ್ಳಲಿಲ್ಲ ಎಂದು ಪ್ರಶ್ನಿಸಿದರು.

ಒತ್ತಡ ನಿವಾರಣೆಗಾಗಿ ಮನೋರಂಜನೆಯ ಕ್ಲಬ್‌ಗಳು ಬೇಕು. ಆದರೆ ಜೂಜಾಟ ನಡೆಸುವ ಅಡ್ಡಾಗಳ ಅವಶ್ಯಕತೆ ನಮಗಿಲ್ಲ. ಇದರಿಂದ ಯುವ ಜನತೆ ದಾರಿ ತಪ್ಪುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಜೂಜು ಅಡ್ಡೆಗಳನ್ನು ಮುಚ್ಚಿಸಲೇಬೇಕಾಗಿದೆ. ಮುಖ್ಯಮಂತ್ರಿಗಳ ಗಮನಕ್ಕೆ ತಂದು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇನೆ. ನನ್ನ ನಿರ್ಧಾರಕ್ಕೆ ಸಾರ್ವಜನಿಕರು ಬೆಂಬಲ ನೀಡುತ್ತಾರೆ ಎಂದರು.

ಚುನಾವಣೆ ವೇಳೆ ನಾನು ನೀಡಿದ್ದ ಭರವಸೆಯನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಚಾಮರಾಜ ಕ್ಷೇತ್ರದಲ್ಲಿ ಕಳೆದ 25 ವರ್ಷಗಳಿಂದ ಸೂರಿಲ್ಲದವರಿಗೆ ಮನೆ ನೀಡಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಾಡಿದ ಅಭಿವೃದ್ಧಿ ಹೊರತುಪಡಿಸಿ ಕಳೆದ ಐದು ವರ್ಷ ಯಾವುದೇ ಅಭಿವೃದ್ಧಿ ಮಾಡಿಲ್ಲ. ಯಾರಿಗೂ ಸರ್ಕಾರದ ಯೋಜನೆಯಡಿ ಸೂರು ನೀಡಿಲ್ಲ. ಹೀಗಾಗಿ ಕಳೆದ 20 ವರ್ಷಗಳಿಂದಲೂ ವಾಸಿಸುತ್ತಿರುವವರಿಗೆ ಆದ್ಯತೆ ನೀಡಿ, ಬಳಿಕ ಇತರರಿಗೂ ಸೂರು ಕಲ್ಪಿಸಲು ಶ್ರಮಿಸುತ್ತೇನೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರ ಅಧಿಕಾರಾವಧಿಯಲ್ಲಿ ನಿರ್ಮಿಸಲಾಗಿರುವ ನೂತನ ಜಿಲ್ಲಾಸ್ಪತ್ರೆ, ಟ್ರಾಮಾ ಕೇರ್ ಸೆಂಟರ್ ಸೇರಿದಂತೆ ವಿವಿಧ ಹೊಸ ಆಸ್ಪತ್ರೆಗೆ ಚಿಕಿತ್ಸಾ ಉಪಕರಣಗಳ ಕೊರತೆ ಎದ್ದು ಕಾಣುತ್ತಿದೆ. ಶುಶ್ರೂಷಕರ ಕೊರತೆಯೂ ಇದೆ. ಇದರಿಂದ ಬಡ ರೋಗಿಗಳಿಗೆ ಆರೋಗ್ಯ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗಳಿಗೆ ಮೂಲ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ಹರೀಶ್‌ಗೌಡ ತಿಳಿಸಿದರು.

ನನ್ನ ಗೆಲುವಿಗೆ ಮೂರು ಪಕ್ಷಗಳ ಕಾರ್ಯಕರ್ತರು ಪಕ್ಷಾತೀತವಾಗಿ ಶ್ರಮಿಸಿದ್ದಾರೆ. ಮಾಜಿ ಶಾಸಕ ವಾಸು ಅವರು ಬೆಂಬಲ ನೀಡಿದ್ದಾರೆ. ಪ್ರತಿದಿನ ಮೊಬೈಲ್ ಮೂಲಕ ನನ್ನನ್ನು ಸಂಪರ್ಕಿಸಿ ಸಲಹೆ ಸೂಚನೆ ನೀಡುತ್ತಿದ್ದರು. ನನ್ನ ಗೆಲುವಿಗೆ ಶ್ರಮಿಸಿದ ಎಲ್ಲರಿಗೂ ಚಿರಋಣಿಯಾಗಿರುತ್ತೇನೆ. ಎಲ್ಲರ ವಿಶ್ವಾಸ ಉಳಿಸಿಕೊಂಡು ಸೇವೆ ಸಲ್ಲಿಸುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮಾಜಿ ಮೇಯರ್‌ಗಳಾದ ಪುಷ್ಪಲತ ಟಿ.ಬಿ.ಚಿಕ್ಕಣ್ಣ, ಎಂ.ಸಿ. ರಾಜೇಶ್ವರಿ ಪುಟ್ಟಸ್ವಾಮಿ, ಪಾಲಿಕೆ ಸದಸ್ಯ ಜೆ.ಗೋಪಿ, ಪೈಲ್ವಾನ್ ಶ್ರೀನಿವಾಸ್ ಇದ್ದರು.

ಜನಸೇವೆಯೇ ಜನಾರ್ಧನ ಸೇವೆ : ಶ್ರೀಗಳ ಅಭಿಮತ



ಮೈಸೂರು,ಮೇ 18 (ಜಿಎ)–ಜನಸೇವೆ ಮಾಡುವುದರಿಂದ ಭಗವಂತನನ್ನು ತೃಪ್ತಿಪಡಿಸಬಹುದು ಎಂದು ವಿಶ್ವಕರ್ಮ ಬ್ರಾಹ್ಮಣ ಮಹಾಸಂಸ್ಥಾನ ಮಠದ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥಮಹಾಸ್ವಾಮಿ ತಿಳಿಸಿದರು.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಮೇಸ್ತ್ರೀ ತಿಮ್ಮಯ್ಯಾಚಾರ್ ಕಲ್ಯಾಣ ಮಂಟಪದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಸಿಟಿ, ಲಯನ್ಸ್ ಕ್ಲಬ್ ಆಫ್ ಕಾಮಧೇನು, ಲಯನ್ಸ್ ಕ್ಲಬ್ ಆಫ್ ಸ್ಯಾಂಡಲ್‌ವುಡ್, ಲಯನ್ಸ್ ಕ್ಲಬ್ ಆಫ್ ಮೈಸೂರು ಈಸ್ಟ್, ಸ್ಪರ್ಶ ಆಸ್ಪತ್ರೆ ಹಾಗೂ ಸೇಂಟ್ ಜೋಸೆಫ್ ಆಸ್ಪತ್ರೆ ಬ್ಲಡ್ ಬ್ಯಾಂಕ್ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಿದ್ದ ಉಚಿತ ಕೃತಕ ಕಾಲು ಜೋಡಣೆ, ಆರೋಗ್ಯ ಶಿಬಿರ ಹಾಗೂ ಕಾರ್ಮಿಕರ ಕಾರ್ಡ್ ನೋಂದಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜದಲ್ಲಿ ಅನೇಕ ರೀತಿ ಕಷ್ಟ–ನಷ್ಟಗಳಿವೆ. ಇದರ ಜತೆಗೆ ಅನಾರೋಗ್ಯ ಕೂಡ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಈ ಎಲ್ಲಾ ಸಂಸ್ಥೆಗಳು ಯಾರಿಗೆ ಏನು ಸಹಾಯ ಮಾಡಬೇಕೆಂದು ಅರಿತು ಉಚಿತ ಕೃತಕ ಕಾಲು ಜೋಡಣೆ, ಆರೋಗ್ಯ ಶಿಬಿರ ಹಾಗೂ ಕಾರ್ಮಿಕರ ಕಾರ್ಡ್ ನೋಂದಣಿ ಮಾಡಿಸುವ ಸೇವೆ ಮಾಡುತ್ತಿದ್ದಾರೆ. ಸೇವೆಗಳ ಮೂಲಕವೇ ಭಗವಂತನನ್ನು ತೃಪ್ತಿಪಡಿಸಬಹುದು ಎಂದು ತಿಳಿಸಿದರು.

'ಜನ ಸೇವೆಯೇ ಜನಾರ್ದನ ಸೇವೆ' ಎಂಬಂತೆ ಎಲ್ಲರೂ ಪರೋಪಕಾರ ಮಾಡಬೇಕು. ಪರೋಪಕಾರದ ಬಗ್ಗೆ ರಾಮಾಯಣದಲ್ಲಿ ತಿಳಿಸಿದ್ದಾರೆ. ಸೀತೆಯೂ ವಾಲ್ಮೀಕಿ ಮಹರ್ಷಿಯ ಆಶ್ರಮದಲ್ಲಿ ಲವ–ಕುಶರಿಗೆ ಜನ್ಮ ನೀಡಿದ ನಂತರ ಮಹರ್ಷಿಗಳು ಉಪದೇಶ ನೀಡುತ್ತಾರೆ. ಭೂಮಿ ಮೇಲಿರುವ ಪ್ರತಿಯೊಂದು ಬೆಟ್ಟ, ಗಿಡ್ಡ, ಮರ, ನದಿ ಸೇರಿದಂತೆ ಎಲ್ಲವೂ ಪ್ರಕೃತಿ ಮೂಲಕ ನಮಗೆ ಪರೋಪಕಾರವನ್ನು ಮಾಡುತ್ತಿವೆ. ಅದನ್ನು ನಾವು ಅರಿತು ನಡೆಯಬೇಕು. ನಾವೂ ಪರೋಪಕಾರ ಮಾಡಬೇಕು ಎಂದು ಬೋಧಿಸಿದ್ದರು. ಅದೇ ರೀತಿ ಎಲ್ಲರೂ ಪರೋಪಕಾರ ಮಾಡಿ ಭಗವಂತನಿಗೆ ಪಾತ್ರವಾಗಿ ಎಂದು ಸಂದೇಶ ನೀಡಿದರು.

ಇಂದು ನೇತ್ರ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಿದ್ದಾರೆ. ಎಲ್ಲರೂ ಇದರ ಸದುಪಯೋಗಪಡಿಸಿಕೊಳ್ಳಿ, ವೈದ್ಯರು ಸಾಕ್ಷಾತ್ ಪರಮಾತ್ಮ ಇದ್ದಂತೆ. ಆರೋಗ್ಯವಾಗಿರುವವರು ತಮ್ಮ ಆರೋಗ್ಯವನ್ನು ಹೇಗೆ ಸಂರಕ್ಷಿಸಿಕೊಳ್ಳಬೇಕು ಎಂಬುದನ್ನು ಹಾಗೂ ಆರೋಗ್ಯ ಹದಗೆಟ್ಟಿರುವವರು ಮುಂಬರುವ ಸಮಸ್ಯೆಗಳಿಗೆ ಉಪಯುಕ್ತ ಚಿಕಿತ್ಸೆ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಐವರು ವಿಶೇಷ ಚೇತನರಿಗೆ ಕೃತಕ ಕಾಲು ಜೋಡಣೆ ಮಾಡಲಾಯಿತು. ಅನೇಕರು ನೇತ್ರ ಮತ್ತು ಆರೋಗ್ಯ ತಪಾಸಣೆ ಮಾಡಿಸಿ ಕೊಂಡರು. ಕಾರ್ಮಿಕ ಇಲಾಖೆ ಅಧಿಕಾರಿ ರಾಜೇಶ್ ಕೆ.ಜಾಧವ್, ಲಯನ್ಸ್ ಸಂಸ್ಥೆ ಹಾಗೂ ಬಿಎನ್‌ಎ ಚೇರ್ಮನ್ ಡಾ.ನಾಗರಾಜ್ ವಿ.ಭೈರಿ, ಕೃತಕ ಕಾಲು ಜೋಡಣೆಯ ಸಂಘಟಕ ಲಯನ್ಸ್ ಮಹಾವೀರ ಚಂದ್ ಬನ್ಸಾಲಿ, ಲಯನ್ಸ್ ಕ್ಲಬ್ ಆಫ್ ಸ್ಯಾಂಡಲ್‌ವುಡ್ ಅಧ್ಯಕ್ಷ ವೆಂಕಟೇಶ್, ಕೆಎಂಎಫ್ ಹಿರಿಯ ಉಪ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ, ವಿಶ್ವಕರ್ಮ ಮುಖಂಡ ಜಯಕುಮಾರ್ ಹಾಗೂ ಬಿ.ರವಿಪ್ರಕಾಶ್ ಉಪಸ್ಥಿತರಿದ್ದರು.

ಮೈಸೂರಿನ ವೈದ್ಯರಿಗೆ ವಿದೇಶದ ಅತ್ಯುನ್ನತ ಗೌರವ



ಮೈಸೂರು, ಮೇ 18– ಮೈಸೂರಿನಲ್ಲಿಯೇ ಹುಟ್ಟಿ ಬೆಳೆದು, ಓದಿ, ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ದಂತ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಇತ್ತೀಚೆಗಷ್ಟೆ ನಿವೃತ್ತರಾಗಿದ್ದ ಡಾ. ಅತ್ತಿಗುಪ್ಪೆ ರಾಮ್ ಶೆಟ್ಟಿ ಪ್ರಭಾಕರ್ ಅವರಿಗೆ ಯುನೈಟೆಡ್ ಕಿಂಗ್ಡಮ್‌ನ ಯಡಿನ್‌ಬರೋದ ಸ್ಕಾಟ್ಲೆಂಡ್‌ನಲ್ಲಿ ನಡೆದ ಘಟಿಕೋತ್ಸವದಲ್ಲಿ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಆಶ್ರಯದಲ್ಲಿ ಮುಖ್ಯಸ್ಥರಾದ ಡಾಕ್ಟರ್ ಫಿಲಿಪ್ ಟೇಲರ್ ಅವರಿಂದ FDSRCS ಫೆಲೋಷಿಪ್ ಸ್ವೀಕರಿಸಿದರು. ಈ ಮುಂಚೆ 2021 ರಲ್ಲಿ ಸ್ಕಾಟ್ಲೆಂಡ್‌ನಗ್ಲ್ಯಾಸ್ಗೋದಲ್ಲಿ "ಫೆಲೋ ಆಫ್ ಫಿಜಿಷನ್ ಮತ್ತು ಸರ್ಜನ್" (FDSRCPS)ಪುರಸ್ಕಾರವನ್ನು ಮುಡಿಗೇರಿಸಿಕೊಂಡಿದ್ದರು.

ಡಾ.ಅತ್ತಿಗುಪ್ಪೆ ರಾವ್ ಶೆಟ್ಟಿ ಪ್ರಭಾಕರ್ ಅವರು ಮೈಸೂರಿನ ಕಬೀರ್ ರಸ್ತೆಯ ನಿವಾಸಿ ದಿವಂಗತ ಅತ್ತಿಗುಪ್ಪೆ ಛಾಯಾಕಾಂತ ಶೆಟ್ಟಿ ಅವರ ಮೊಮ್ಮಗ. ಇವರು ಮರಿಮಲ್ಲಪ್ಪ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದರು.

ಇಂದಿನಿಂದ ಗುಜರಾತ್ ಕರಕುಶಲ ಉತ್ಸವ



ಮೈಸೂರು, ಮೇ 18 (ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಶುಕ್ರವಾರ (ಮೇ 19) ದಿಂದ ಮೇ 28ರವರೆಗೆ ಗುಜರಾತ್ ಕರಕುಶಲ ಉತ್ಸವ್ ಆಯೋಜಿಸಲಾಗುತ್ತಿದೆ ಎಂದು ಜೆಎಸ್‌ಎಸ್ ಸಂಸ್ಥೆಯ ರೇವಣ್ಣ ಸ್ವಾಮಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ಕರಕುಶಲ ಉತ್ಪನ್ನಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಉತ್ಸವ ಆಯೋಜಿಸಲಾಗಿದೆ. ಈ ಬಾರಿಯ ಗುಜರಾತ್ ಕರಕುಶಲ ಮೇಳ ವಿಭಿನ್ನವಾಗಿರುತ್ತದೆ. ಈ ಬಾರಿ ಬಹುತೇಕ ಎಲ್ಲಾ ಜಿಲ್ಲೆಗಳ ಕುಶಲಕರ್ಮಿಗಳು ಆಗಮಿಸುತ್ತಿದ್ದು, ಸುಮಾರು 80ಕ್ಕೂ ಅಧಿಕ ಮಳಿಗೆಗಳಲ್ಲಿ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕಿಡಲಾಗುತ್ತದೆ. ಉತ್ಸವದಲ್ಲಿ ಕರಕುಶಲಕರ್ಮಿಗಳು ತಯಾರಿಸಿದ ಪಟೋಲ ಸೀರೆಗಳು, ಬಾಂದಿನಿ ಸೀರೆಗಳು, ಕಸೂತಿ ಮಾಡಿದ ಬೆಡ್ ಶೀಟ್‌ಗಳು, ಟವಲ್‌ಗಳು, ಕುಶನ್ ಕವರ್‌ಗಳು, ಕುರ್ತಿ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ ಎಂದು ತಿಳಿಸಿದರು.

ಮೇ 19 ರಂದು ಸಂಜೆ 4ಕ್ಕೆ ರಾಜ್ಯ ಖಜಾನೆ ಆಯುಕ್ತರಾದ ಡಾ. ಅರುಂಧತಿ ಚಂದ್ರಶೇಖರ್ ಮೇಳವನ್ನು ಉದ್ಘಾಟಿಸಲಿದ್ದಾರೆ. ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ ಮಂಜುನಾಥ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಮೈಸೂರು ರೈಲ್ವೆ ವಿಭಾಗದ ವ್ಯವಸ್ಥಾಪಕರಾದ ಶಿಲ್ಪಿ ಅಗರ್ವಾಲ್ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುಜರಾತ್ ಕರಕುಶಲ ಇಲಾಖೆಯ ಅಧಿಕಾರಿಗಳಾದ ಡಾ.ಸ್ನೇಹಲ್ ಮಕ್ವಾನ್, ಶಿವನಂಜಸ್ವಾಮಿ, ದಯಾಳ್, ಡಿ.ಎಂ. ಶುಕ್ಲ ಇದ್ದರು.

ವೈಜ್ಞಾನಿಕ ಮನೋಧರ್ಮ ಹೆಚ್ಚಿಸಲು ವಿಚಾರ ಸಂಕಿರಣಗಳು ಸಹಕಾರಿ: ಪ್ರೊ.ರಂಗಪ್ಪ



ಮೈಸೂರು,ಮೇ 18(ಜಿಎ)– ಸಂಶೋಧನಾ ಪ್ರಯತ್ನಗಳಲ್ಲಿ ಸಾಮಾಜಿಕ ಪ್ರಯೋಜನಗಳಿಗೆ ಆದ್ಯತೆ ನೀಡಬೇಕೆಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ ಕ್ಯಾಂಪಸ್‌ನ ವಿಜ್ಞಾನ ವಿಭಾಗದ ವತಿಯಿಂದ ಏರ್ಪಡಿಸಲಾಗಿದ್ದ ರಸಾಯನಿಕ ಹಾಗೂ ಭೌತ ವಿಜ್ಞಾನಗಳ ಪ್ರಗತಿ ಕುರಿತಾದ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್ ರಂಗಪ್ಪ ಗುರುವಾರ ಉದ್ಘಾಟಿಸಿ ಮಾತನಾಡಿದರು.

ವೈಜ್ಞಾನಿಕ ಮನೋಧರ್ಮವನ್ನು ಹೆಚ್ಚಿಸಲು ಹಾಗೂ ಅರಿವು ಮೂಡಿಸಲು ಇಂತಹ ವಿಚಾರ ಸಂಕಿರಣಗಳು ಸಹಕಾರಿ. ರಸಾಯನಶಾಸ್ತ್ರ ಹಾಗೂ ಭೌತಶಾಸ್ತ್ರದ ಅಂತರ್‌ಸಂಪರ್ಕವನ್ನು ಒತ್ತಿ ಹೇಳುತ್ತಾ, ರಸಾಯನಶಾಸ್ತ್ರವು ಭೌತಿಕ ವಿಜ್ಞಾನಗಳಿಗೆ ಮೂಲ ಅಡಿಪಾಯಗಳನ್ನು ರೂಪಿಸುತ್ತದೆ ಎಂದರು.

ನಮ್ಮ ದೈನಂದಿನ ಜೀವನದಲ್ಲಿ ರಸಾಯನಶಾಸ್ತ್ರದ ಪ್ರಭಾವವಿದ್ದು, ನಾವು ಸೇವಿಸುವ ಆಹಾರದಿಂದ ಹಿಡಿದು ಬಳಸುವ ವಸ್ತುಗಳವರೆಗೆ ಹಾಗೂ ನಮ್ಮ ಸುತ್ತಲಿನ ಪ್ರಪಂಚವನ್ನು ರೂಪಿಸುವಲ್ಲಿ ರಸಾಯನಶಾಸ್ತ್ರ ಬಹು ಮುಖ್ಯ. ಬಹುಶಿಸ್ತೀಯ ಹಾಗೂ ಅಂತರ್‌ಶಿಸ್ತೀಯ ವಿಧಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯತೆ, ಯಶಸ್ವಿ ಸಂಶೋಧನೆಗಾಗಿ ವೈಜ್ಞಾನಿಕ ಪ್ರಗತಿಯನ್ನು ಹೆಚ್ಚಿಸಲು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆ ಮುಖ್ಯ ಎಂದು ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ ಭೌತ ವಿಜ್ಞಾನ ಕ್ಷೇತ್ರ ಕ್ಷಿಪ್ರ ಬೆಳವಣಿಗೆಯಾಗಿದ್ದು, ತ್ವರಿತ ನಿರ್ಧಾರ ಹಾಗೂ ವೈಜ್ಞಾನಿಕ ಪ್ರಗತಿಯ ಹಿಂದಿನ ಪ್ರೇರಕ ಶಕ್ತಿ, ತಂತ್ರಜ್ಞಾನದ ಪ್ರಗತಿಯಾಗಿದೆ. ಭೌತಿಕ ಪ್ರಪಂಚದ ಬಗ್ಗೆ ತಮ್ಮ ತಿಳುವಳಿಕೆಯನ್ನು ತ್ವರಿತಗೊಳಿಸಲು ತಾಂತ್ರಿಕ ಪ್ರಗತಿಯನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿ, ವಿಜ್ಞಾನಿಗಳು ಸಮಾಜದ ಸವಾಲುಗಳನ್ನು ನೇರವಾಗಿ ಪರಿಹರಿಸುವ ಮತ್ತು ಜನರ ಯೋಗಕ್ಷೇಮವನ್ನು ಸುಧಾರಿಸುವ ಸಂಶೋಧನೆಯತ್ತ ಹೆಚ್ಚು ಗಮನಹರಿಸಬೇಕು. ದೇಶದ ಪ್ರಗತಿ ಹಾಗೂ ಸಮೃದ್ಧಿಗೆ ಕೊಡುಗೆ ನೀಡಿ ಎಂದು ಸಮುದಾಯಕ್ಕೆ ಕರೆ ನೀಡಿದರು.

ವಿಚಾರ ಸಂಕಿರಣದ ಅಂಗವಾಗಿ ವಿವಿಧ ಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ವಿಶ್ವದ ವಿವಿಧ ಭಾಗಗಳಿಂದ ಸುಮಾರು 100 ಪ್ರತಿನಿಧಿಗಳು ಭಾಗವಹಿಸಿದ್ದರು.

ಅಮೃತ ವಿಶ್ವವಿದ್ಯಾಪೀಠಂ ಕ್ಯಾಂಪಸ್ ನಿರ್ದೇಶಕ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಸಂಚಾಲಕ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ಪ್ರಾಂಶುಪಾಲ ಡಾ.ಜಿ. ರವೀಂದ್ರನಾಥ್, ಅಸೋಸಿಯೇಟ್ ಡೀನ್ ಪ್ರೊ.ಶೇಖರ್ ಬಾಬು, ಶೈಕ್ಷಣಿಕ ಸಂಯೋಜಕಿ ಡಾ. ರೇಖಾ ಭಟ್, ಸಂಶೋಧನಾ ಮುಖ್ಯಸ್ಥ ಡಾ.ಕೆ.ಶಿವಪ್ರಸಾದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮುಂಗಾರು ಮುನ್ನವೇ ಒಳಚರಂಡಿ ಸ್ವಚ್ಛತಾ ಕಾರ್ಯ ಚುರುಕು

ಪಾಲಿಕೆ ವ್ಯಾಪ್ತಿಯ ಎಂಟು ವಲಯದಲ್ಲಿ ಎಲ್ಲ ರೀತಿಯ ಸಿದ್ಧತೆ: ಅಧಿಕಾರಿಗಳ ಸ್ಪಷ್ಟನೆ



ಮೈಸೂರು, ಮೇ 18(ಸಿಎನ್)– ಪೂರ್ವ ಮುಂಗಾರು ಆರಂಭಕ್ಕೆ ಇನ್ನು ಕೆಲವೇ ದಿನಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಮೈಸೂರು ನಗರ ಪಾಲಿಕೆಯಿಂದ ತಗ್ಗುಪ್ರದೇಶಗಳಲ್ಲಿ ಮುಂಜಾಗ್ರತಾ ಸಿದ್ಧತೆ ಭರದಿಂದ ಸಾಗುತ್ತಿದೆ.

ನಗರದೆಲ್ಲೆಡೆ ರಾಜಕಾಲುವೆಗಳಲ್ಲಿ ಮಳೆನೀರು ಸರಾಗವಾಗಿ ಹರಿಯಲು ಜೆಸಿಬಿ ಮೂಲಕ ಹೂಳೆತ್ತುವ ಕಾರ್ಯ ಆರಂಭಿಸಲಾಗಿದೆ. ಇನ್ನು ಕೆಲವು ಭಾಗಗಳಲ್ಲಿ ತ್ಯಾಜ್ಯ ತೆರವು ಮಾಡದೇ ಒಳಚರಂಡಿಗಳು ತುಂಬಿ ಅವ್ಯವಸ್ಥೆಯಾಗಿದೆ. ಪಾಲಿಕೆ ಅಧಿಕಾರಿಗಳ ಕಡೆ ಸಾರ್ವಜನಿಕರು ಬೊಟ್ಟು ಮಾಡಿ ತೋರಿಸುತ್ತಿದ್ದಾರೆ.

ನಗರದ ತಗ್ಗು ಪ್ರದೇಶಗಳಾದ ಎನ್‌ಆರ್ ಕ್ಷೇತ್ರ ವ್ಯಾಪ್ತಿಯ ಸತ್ಯನಗರ, ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಗೌರಿಶಂಕರನಗರ, ಐಶ್ವರ್ಯ ನಗರ, ಚಾಮುಂಡೇಶ್ವರಿ ಕ್ಷೇತ್ರ ವಾಪ್ತಿಯ ಬೋಗಾದಿ, ಆನಂದನಗರದಂತಹ ತಗ್ಗು ಪ್ರದೇಶಗಳಲ್ಲಿ ಜೆಸಿಬಿ ಯಂತ್ರಗಳ ಬಳಕೆಯಿಂದ ಮಳೆನೀರು ನಿಲ್ಲದಂತೆ ಚರಂಡಿ ಸ್ವಚ್ಛತಾ ಕಾರ್ಯ ಮುಂದುವರಿದಿದೆ.

ಒಂದೆಡೆ ರಾಜಕಾಲುವೆ, ಒಳಚರಂಡಿಗಳ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದರೆ, ಕೆಲವು ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ ತೀರ ಹದಗೆಟ್ಟಿದೆ. ಪಾದಚಾರಿ ಮಾರ್ಗ ಹಾಗೂ ಮನೆ ಮುಂದಿನ ಮೋರಿಗಳಲ್ಲಿ ತ್ಯಾಜ್ಯ ತುಂಬಿ ಕೊಳಚೆ ನೀರಿನಿಂದಾಗಿ ಸಾಂಕ್ರಾಮಿಕ ಕಾಯಿಲೆಗಳು ಹೆಚ್ಚಾಗುವ ಸಾಧ್ಯತೆ ಇದೆ.


'ಮೈಸೂರು ಮಿತ್ರ'ನೊಂದಿಗೆ ನಗರ ಪಾಲಿಕೆ (ಅಭಿವೃದ್ಧಿ ವಿಭಾಗ) ಉಪ ಆಯುಕ್ತ ಮಹೇಶ್ ಮಾತನಾಡಿ, ಈ ಬಾರಿ ಮಳೆಯಿಂದಾಗಿ ಯಾವುದೇ ಸಮಸ್ಯೆ ಆಗುವುದಿಲ್ಲ, ಪಾಲಿಕೆ ಎಲ್ಲ ರೀತಿಯಲ್ಲೂ ಸಜ್ಜಾಗಿದೆ. ನಗರದ ಎಲ್ಲಾ ರಾಜಕಾಲುವೆ ಹಾಗೂ ತಗ್ಗು ಪ್ರದೇಶಗಳಲ್ಲಿ ಅಗತ್ಯ ಮುಂಜಾಗ್ರತೆ ಕೈಗೊಳ್ಳಲಾಗಿದೆ. ಮನೆ ಅಂಗಳದ ಯುಜಿಡಿ, ಒಳಚರಂಡಿಗಳಲ್ಲಿ ನೀರು ನಿಲ್ಲದಂತೆ ಸ್ವಚ್ಛಗೊಳಿಸುತ್ತಿದ್ದೇವೆ. ನಗರದಲ್ಲಿ ಈ ಹಿಂದೆ ಇದ್ದಂತಹ ಸಮಸ್ಯೆ ಈಗಿಲ್ಲ. ಚರಂಡಿಗಳನ್ನು ಸ್ವಚ್ಛಗೊಳಿಸಿ ಬಿದ್ದಂತ ಮಳೆನೀರು ನಿಲ್ಲದ ರೀತಿ ಸರಾಗವಾಗಿ ಹರಿಯುವಂತೆ ಎಲ್ಲೆಡೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ತ್ಯಾಜ್ಯ ತೆರವುಮಾಡಿ: ಪಾಲಿಕೆ ಸಿಬ್ಬಂದಿಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಅವರ ಕಣ್ಣಿಗೆ ಬಿದ್ದ ಕಸವನ್ನು ಮಾತ್ರ ತೆರವು ಮಾಡುತ್ತಿದ್ದಾರೆ. ಚರಂಡಿಯ ಒಳಭಾಗದಲ್ಲಿ ರಾಶಿರಾಶಿ ಕಸ ಇದ್ದರೂ, ಅದನ್ನ ತೆರವುಗೊಳಿಸುವ ಕೆಲಸಕ್ಕೆ ಮುಂದಾಗಲ್ಲ. ಹಾಗಾಗಿ ಮಳೆ ಹೆಚ್ಚು ಬಂದಾಗ ಚರಂಡಿ ಬ್ಲಾಕ್ ಆಗಿ ಮಳೆ ನೀರಿನೊಡನೆ ಕೊಳಚೆ ನೀರು ಕೂಡ ಮನೆಗಳಿಗೆ ನುಗ್ಗುತ್ತದೆ. ಸಣ್ಣಸಣ್ಣ ಚರಂಡಿಗಳಲ್ಲಿನ ತ್ಯಾಜ್ಯ ತೆರವು ಮೊದಲು ಮಾಡಬೇಕು ಎಂದು ವಾರ್ಡ್ ನಂ.54ರ ಗೌರಿ ಶಂಕರ ನಗರ ನಿವಾಸಿ ಮಲ್ಲಪ್ಪ ಅಭಿಪ್ರಾಯ ತಿಳಿಸಿದರು.

ಮೇಲೆ ಥಳುಕು ಒಳಗೆ ಹುಳುಕು: ಚಾಮರಾಜ ಕ್ಷೇತ್ರ ವ್ಯಾಪ್ತಿಯ ರಾಜರಾಜೇಶ್ವರಿ ಕಾಲೋನಿಯ ನಾರಾಯಣಪ್ಪ ಮಾತನಾಡಿ, ಈ ಹಿಂದೆ ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು, ಅದೇ ರೀತಿ ಈ ಬಾರಿಯಾದರೇ ಯಾರು ಹೊಣೆ? ಫುಟ್‌ಪಾತ್‌ನಲ್ಲಿ ನೀರು ಹೋಗಲ್ಲ, ಚರಂಡಿ ತುಂಬಾ ಕಲ್ಲುಮಣ್ಣು ತುಂಬಿ ಬ್ಲಾಕ್ ಆಗಿದೆ, ತ್ಯಾಜ್ಯ ತೆರವು ಮಾಡಿ ಅನುಕೂಲ ಮಾಡುವುದು ಬಿಟ್ಟು ಎದ್ದು ಕಾಣುವಂತೆ ಬಣ್ಣ ಬಳಿದು ಸಿಂಗಾರ ಮಾಡಿದ್ದಾರೆ. 112 ಮನೆಗಳಿವೆ ಇಲ್ಲಿ. ಇರುವುದು ಒಂದೇ ಬೋರ್‌ವೆಲ್, ಮಳೆ ಬಂದಾಗ ನೀರು ಹರಿದು ಬಂದು ಬೋರ್‌ವೆಲ್‌ಗೆ ಸೇರುತ್ತೆ. ಅದನ್ನೇ ನಾವು ಕುಡಿಯುತ್ತೇವೆ. ಈ ಬಾರಿ ಆ ರೀತಿ ಆಗದೇ ಇದ್ದರೆ ಸಾಕು ಎಂದು ಸ್ಥಳೀಯರು ಪಾಲಿಕೆ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ಪಾಲಿಕೆಯ 8 ವಲಯದ ಆಯಾ ಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ. ರಾಜಕಾಲುವೆ ಚರಂಡಿಗಳಲ್ಲಿ ಜೆಸಿಬಿ ಮೂಲಕ ಹೂಳೆತ್ತುವ ಕೆಲಸ ಮುಂದುವರಿಸಲಾಗಿದೆ. ಈ ಬಾರಿ ಮಳೆಯಿಂದ ಯಾವುದೇ ತೊಂದರೆ ಆಗಲ್ಲ. ಹೆಚ್ಚು ಮಳೆ ಸುರಿದರೂ ಕೂಡ ಅರ್ಧ ತಾಸಿನಲ್ಲಿ ನೀರು ಹರಿಯುತ್ತದೆ. ಮುಂಗಾರು ಹೊತ್ತಿಗೆ ಸಣ್ಣಪುಟ್ಟ ಕೆಲಸಗಳನ್ನು ಮುಗಿಸಿ ಯಾವುದೇ ಸಮಸ್ಯೆ ಆಗದ ರೀತಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.
-ಮಹೇಶ್, ನಗರ ಪಾಲಿಕೆ ಉಪ ಆಯುಕ್ತರು (ಅಭಿವೃದ್ಧಿ ವಿಭಾಗ)





ಟೈಗರ್ ನಾಗೇಶ್ವರರಾವ್
ಫಸ್ಟ್‌ಲುಕ್‌ಗೆ ಶಿವಣ್ಣ ಧ್ವನಿ

ಟಾಲಿವುಡ್‌ನ ರವಿತೇಜ ನಟಿಸುತ್ತಿರುವ ಪಾನ್ ಇಂಡಿಯಾ ಚಿತ್ರ 'ಟೈಗರ್ ನಾಗೇಶ್ವರರಾವ್' ಫಸ್ಟ್ ಲುಕ್ ಸದ್ಯದಲ್ಲೇ ರಿಲೀಸ್ ಆಗಲಿದೆ. ಮೇ 24ರಂದು ಪಂಚ ಭಾಷೆಯಲ್ಲಿ ಅನಾವರಣಗೊಳ್ಳುತ್ತಿರುವ ಈ ಚಿತ್ರದ ಮೊದಲ ನೋಟದ ಕನ್ನಡ ಝಲಕ್‌ಗೆ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಧ್ವನಿ ನೀಡಿದ್ದಾರೆ. ಶಿವಣ್ಣ ಅವರು ತಮ್ಮ ಮ್ಯಾಜಿಕಲ್ ವಾಯ್ಸ್ ಮೂಲಕ 'ಟೈಗರ್ ನಾಗೇಶ್ವರರಾವ್' ಪ್ರಪಂಚಕ್ಕೆ ನಿಮ್ಮನ್ನು ಕೊಂಡೊಯ್ಯಲಿದ್ದಾರೆ. ವಂಶಿ ಅವರ ನಿರ್ದೇಶನದ ಈ ಸಿನಿಮಾವನ್ನು 'ಕಾಶ್ಮೀರಿ ಫೈಲ್ಸ್' ಹಾಗೂ 'ಕಾರ್ತಿಕೇಯ-2'ನಂತಹ ಹಿಟ್ ಚಿತ್ರ ನಿರ್ಮಿಸಿರುವ ಅಭಿಷೇಕ್ ಅಗರವಾಲ್ ತಮ್ಮ ಅಭಿಷೇಕ್ ಅಗರವಾಲ್ ಆರ್ಟ್ಸ್‌ನಡಿ ಅದ್ದೂರಿಯಾಗಿ ನಿರ್ಮಿಸಿದ್ದಾರೆ. 70ರ ಕಾಲಘಟ್ಟದ ಹೈದರಾಬಾದ್‌ನ ಸ್ಟುವರ್ಟ್‌ಪುರಂ ಹಳ್ಳಿಯೊಂದರ ಕುಖ್ಯಾತ ಕಳ್ಳನ ಜೀವನಾಧಾರಿತ ಸಿನಿಮಾ ಇದಾಗಿದ್ದು, ಈ ಹಿಂದಿನ ಎಲ್ಲಾ ಚಿತ್ರಗಳಿಗಿಂತಲೂ ರವಿತೇಜ ಅವರ ಗೆಟಪ್, ಬಾಡಿ ಲಾಗ್ವೇಜ್ ಸಂಪೂರ್ಣವಾಗಿ ವಿಭಿನ್ನವಾಗಿರಲಿದೆ. ನೂಪುರ್ ಸನೋನ್ ಮತ್ತು ಗಾಯತ್ರಿ ಭಾರದ್ವಾಜ್ ಚಿತ್ರದ ನಾಯಕಿಯರಾಗಿದ್ದಾರೆ, ಆರ್. ಮಧಿ ಅವರ ಛಾಯಾಗ್ರಹಣ, ಶ್ರೀಕಾಂತ್ ವೀಸಾ ಅವರ ಸಂಭಾಷಣೆ, ವಿ ಪ್ರಕಾಶ್‌ಕುಮಾರ್ ಸಂಗೀತ ಈ ಚಿತ್ರಕ್ಕಿದೆ. ಅವಿನಾಶ್ ಕೊಲ್ಲಾ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿದ್ದು, ಮಯಾಂಕ್ ಸಿಂಘಾನಿಯಾ ಸಹ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ದಸರಾ ಹಬ್ಬಕ್ಕೆ ಟೈಗರ್ 'ನಾಗೇಶ್ವರರಾವ್ ಬಾಕ್ಸಾಫೀಸ್' ಬೇಟೆಗಿಳಿಯಲಿದ್ದಾರೆ. ಅಂದರೆ ಅಕ್ಟೋಬರ್ 22ರಂದು ವಿಶ್ವಾದ್ಯಂತ ಈ ಸಿನಿಮಾ ರಿಲೀಸಾಗಲಿದೆ.

ಸೈರನ್
ಟ್ರೈಲರ್ ಬಿಡುಗಡೆ

ಮರ್ಡರ್ ಮಿಸ್ಟ್ರಿ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಸೈರನ್' ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಡಾಲಿ ಧನಂಜಯ, ರಾಕ್‌ಲೈನ್ ವೆಂಕಟೇಶ್, ಅಶ್ವಿನಿ, ಹಾಗೂ ಪತ್ರಕರ್ತ ರಂಗನಾಥ್ ಭಾರದ್ವಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ರಾಜು ವೆಂಕಯ್ಯ ಅವರು ಆ್ಯಕ್ಷನ್‌ಕಟ್ ಹೇಳಿರುವ ಈ ಚಿತ್ರವನ್ನು ಡೆಕ್ಕನ್‌ಕಿಂಗ್ ಬ್ಯಾನರ್‌ನಡಿ ಬಿಜು ಶಿವಾನಂದ್ ನಿರ್ಮಾಣ ಮಾಡಿದ್ದಾರೆ. ಕನ್ನಡ ಎಂದಾಗ ಹೋರಾಟ ನೆನಪಾಗುತ್ತದೆ. ನಾನು ಹಲವಾರು ವರ್ಷಗಳಿಂದ ಪ್ರವೀಣ್ ಶೆಟ್ಟಿ ಅವರನ್ನು ನೋಡುತ್ತಾ ಬಂದಿದ್ದೇನೆ. ಅವರ ಮನೆಯಿಂದ ಚಿತ್ರರಂಗಕ್ಕೆ ತಮ್ಮ ಮಗನನ್ನು ಉಡುಗೊರೆಯಾಗಿ ನೀಡುತ್ತಿದ್ದಾರೆ. ಟ್ರೈಲರನ್ನು ನೋಡಿದಾಗ ಆತ ಹೊಸಬ ಅನ್ನಿಸಲ್ಲ. ಅಷ್ಟು ಚೆನ್ನಾಗಿ ಪ್ರವೀರ್ ಶೆಟ್ಟಿ ನಟಿಸಿದ್ದಾರೆ. ಎಂದು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಹೇಳಿದರು. ಚಿತ್ರದ ನಾಯಕ ಪ್ರವೀರ್ ಶೆಟ್ಟಿ ಮಾತನಾಡಿ ನಾನು ಈ ದಿನಕ್ಕಾಗಿ ಹಲವು ವರ್ಷಗಳಿಂದ ಕಾಯುತ್ತಿದೆ. ಶ್ರೀ ಮುರಳಿ ಅವರು ನಮ್ಮ ಚಿತ್ರದ ಟ್ರೈಲರ್‌ಗೆ ಧ್ವನಿ ಕೊಟ್ಟಿರುವುದು ನಮಗೆ ಮತ್ತಷ್ಟು ಶಕ್ತಿ ತಂದಿದೆ. ನಿರ್ದೇಶಕರು ತುಂಬಾ ಶ್ರಮವಹಿಸಿ ಈ ಸಿನಿಮಾ ಮಾಡಿದ್ದಾರೆ. ಇದೊಂದು ಮರ್ಡರ್ ಮಿಸ್ಟ್ರಿಯಾಗಿದ್ದು, ಈ ಚಿತ್ರದಲ್ಲಿ ನಾನೊಬ್ಬ ಯಂಗ್ ಪೊಲೀಸ್ ಆಫೀಸರ್ ಪಾತ್ರವನ್ನು ನಿರ್ವಹಿಸಿದ್ದೇನೆ ಎಂದು ಹೇಳಿದರು.


ಚಿತ್ರದ ನಿರ್ದೇಶಕ ರಾಜಾ ವೆಂಕಯ್ಯ ಮಾತನಾಡುತ್ತಾ, ಮೂಲತಃ ನಾನು ಚೆನ್ನೈನವನು. ಸೈರನ್ ಚಿತ್ರದ ಮೂಲಕ ಪ್ರವೀರ್ ಶೆಟ್ಟಿ ಹೀರೋ ಆಗಿದ್ದಾರೆ. ಆತ ಮುಂದೆ ಒಳ್ಳೆಯ ನಟನಾಗುವ ಎಲ್ಲಾ ನಿರೀಕ್ಷೆಯೂ ಇದೆ, ಚಿತ್ರ ತುಂಬಾ ಚೆನ್ನಾಗಿ ಬಂದಿದೆ ಎಂದು ಹೇಳಿದರು. ತಮಿಳು ನಟ ದೀನಾ, ಚಿತ್ರದ ನಾಯಕಿ ಲಾಸ್ಯ, ನಟಿ ಸ್ಪರ್ಶ ರೇಖಾ, ಛಾಯಾಗ್ರಾಹಕ ನಾಗೇಶ್ ಆಚಾರ್ಯ ಮಾತನಾಡುತ್ತಾ, ಚಿತ್ರದ ಕುರಿತಂತೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ತೆಲುಗಿನ ಖ್ಯಾತ ಗಾಯಕಿ ಮಂಗ್ಲಿ ಅವರು ಈ ಚಿತ್ರದ ಹಾಡೊಂದನ್ನು ಹಾಡಿದ್ದಾರೆ. ಅಲ್ಲದೆ ಈ ಚಿತ್ರಕ್ಕೆ ಮೈ ಆಟೋಗ್ರಾಫ್ ಖ್ಯಾತಿಯ ಭಾರದ್ವಾಜ್ ಅವರ ಸಂಗೀತ ಸಂಯೋಜನೆ, ಕಲೈ ಮಾಸ್ಟರ್ ಅವರ ನೃತ್ಯವಿದೆ.



'ಪೆಪೆ'ನಲ್ಲಿ ವಿನಯ್ ರಾಜ್‌ಕುಮಾರ್ ಮಾಸ್ ಲುಕ್

ಡಾ.ರಾಜ್ ಕುಟುಂಬದ ಮೂರನೇ ಕುಡಿ ವಿನಯ್ ರಾಜಕುಮಾರ್ ನಟಿಸಿರುವ ಪೆಪೆ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಹಳ್ಳಿಯ ಬ್ಯಾಕ್‌ಡ್ರಾಪ್‌ನಲ್ಲಿ ಮೂಡಿಬಂದಿರುವ ಈ ಟೀಸರ್‌ನಲ್ಲಿ ವಿನಯ್ ರಾಜ್‌ಕುಮಾರ್, ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಪೆಪೆ ಒಂದು ಗ್ಯಾಂಗ್‌ಸ್ಟರ್ ಕಥಾಹಂದರ ಹೊಂದಿದ ಚಿತ್ರವಾಗಿದ್ದು, ಶ್ರೀಲೇಶ್ ನಾಯರ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಈ ಟೀಸರ್ ಮೂಲಕ ತಾನು ಮಾಸ್‌ಗೂ ಸೈ, ಕ್ಲಾಸ್‌ಗೂ ಸೈ ಅನ್ನೋದನ್ನು ವಿನಯ್ ರಾಜಕುಮಾರ್ ನಿರೂಪಿಸಿದ್ದಾರೆ, ಸದ್ಯ ವಿನಯ್ ಕೈಲಿರೋ ಎಲ್ಲಾ ಸಿನಿಮಾಗಳು ಒಂದಕ್ಕಿಂತ ಒಂದು ವಿಭಿನ್ನವಾದ ಕಂಟೆಂಟ್ ಒಳಗೊಂಡಿವೆ. ಅದರಲ್ಲಿ ಪೆಪೆ ಗ್ಯಾಂಗ್‌ಸ್ಟರ್ ಕಥೆಯ ಚಿತ್ರವಾಗಿದೆ. ವಿನಯ್ ರಾಜಕುಮಾರ್ ಹುಟ್ಟುಹಬ್ಬದ ಪ್ರಯುಕ್ತ 'ಪೆಪೆ' ಚಿತ್ರತಂಡ ಟೀಸರನ್ನು ರಿಲೀಸ್ ಮಾಡುವ ಮೂಲಕ ತಮ್ಮ ನಾಯಕನಿಗೆ ಗಿಫ್ಟ್ ನೀಡಿದೆ. ರಿಲೀಸ್ ಆಗಿರೋ ಟೀಸರ್ ನೋಡಿದ ಅಭಿಮಾನಿಗಳು ಸಖತ್ ಥ್ರಿಲ್ ಆಗಿದ್ದಾರೆ. ವಿನಯ್ ರಾಜಕುಮಾರ್ ಎಂದೂ ಇಂತಹ ರಗಡ್ ಲುಕ್‌ನಲ್ಲಿ ಕಾಣಿಸಿರಲಿಲ್ಲ. 'ಪೆಪೆ' ವಿನಯ್ ರಾಜಕುಮಾರ್‌ಗೆ ಹೊಸ ಇಮೇಜ್ ನೀಡಲಿದೆ ಎಂದವರು ಹೇಳಿದ್ದಾರೆ.

ಅಂದ್ಹಾಗೆ, 'ಪೆಪೆ' ಹಳ್ಳಿಯ ಬ್ಯಾಕ್ ಡ್ರಾಪ್‌ನಲ್ಲಿ ಮೂಡಿಬಂದಿರುವ ಚಿತ್ರವಾಗಿದ್ದು, ವಿನಯ್ ಮಾಸ್ ಲುಕ್ ಪ್ರೇಕ್ಷಕರನ್ನು ಸೆಳೆಯುತ್ತಿದೆ. ಪೆಪೆ ಚಿತ್ರದ ಟೀಸರ್‌ನ ಕೊನೆಯಲ್ಲಿ ಸ್ವಾತಂತ್ರ್ಯಕ್ಕಾಗಿ, ಸ್ವತಂತ್ರವಾಗಿ ವೋಟ್ ಮಾಡಿ ಎಂಬ ಸಂದೇಶವಿದೆ, ಅಂದ್ಹಾಗೆ ಈ ಸಿನಿಮಾದಲ್ಲಿ ವಿನಯ್ ರಾಜಕುಮಾರ್ ಜೋಡಿಯಾಗಿ ಕಾಜಲ್ ಕುಂದರ್ ಕಾಣಿಸಿ ಕೊಂಡಿದ್ದಾರೆ. ಚಿತ್ರದ ಉಳಿದ ಪಾತ್ರಗಳಲ್ಲಿ ಮಯೂರ್ ಪಟೇಲ್, ಯಶ್‌ಶೆಟ್ಟಿ, ಬಲ ರಾಜ್‌ವಾಡಿ, ಮೇದಿನಿ ಕೆಳಮನೆ, ಅರುಣಾ ಬಾಲರಾಜ್, ನವೀನ್ ಡಿ.ಪಡೀಲ್ ನಟಿಸಿದ್ದಾರೆ. 'ಪೆಪೆ' ಸಿನಿಮಾಗೆ ಅಭಿಷೇಕ್ ಜಿ.ಕಾಸರಗೋಡು ಅವರ ಕ್ಯಾಮೆರಾ ವರ್ಕ್, ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತವಿದೆ. ಡಾ.ರವಿವರ್ಮಾ, ಚೇತನ್ ಡಿಸೋಜಾ, ಡಿಫರೆಂಟ್ ಡ್ಯಾನಿ, ನರಸಿಂಹ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ, ಬೆಂಗಳೂರು, ಮೈಸೂರು, ಕೊಡಗು, ಸಕಲೇಶಪುರ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ. ಉದಯ್ ಸಿನಿವೆಂಚರ್, ದೀಪ ಫಿಲಂಸ್ ಬ್ಯಾನರ್ ಅಡಿ ಉದಯ್ ಶಂಕರ್ ಮತ್ತು ಶ್ರೀರಾಮ್ ಬಿ.ಎಮ್. ಕೋಲಾರ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.



ಪೂರ್ಣಚಂದ್ರ ತೇಜಸ್ವಿ ಅವರ ಜನಪ್ರಿಯ ಕಥೆಯನ್ನು ಅವರ ಓದುಗರೇ ಹಣಹಾಕಿ ಸಿನಿಮಾ ಮಾಡಿ ರಿಲೀಸ್ ಮಾಡುತ್ತಿದ್ದಾರೆ. ಅದೇ ಡೇರ್ ಡೆವಿಲ್ ಮುಸ್ತಫಾ. ಇಂದಿನಿಂದ ಈ ಚಿತ್ರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಅಂದಹಾಗೆ 'ಡೇರ್‌ಡೆವಿಲ್ ಮುಸ್ತಫಾ' ಸಿನಿಮಾಗೆ ಶಶಾಂಕ್ ಸೋಗಾಲ್ ನಿರ್ದೇಶನ ಮಾಡಿದ್ದಾರೆ. ಈ ಹಿಂದೆ ಕಿರುಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದ ಶಶಾಂಕ್, ಈ ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಮೊದಲ ಹೆಜ್ಜೆ ಇಟ್ಟಿದ್ದಾರೆ.

ಆರಂಭದಿಂದಲೂ ಸಿನಿರಸಿಕರ ಗಮನ ಸೆಳೆಯುತ್ತಿರುವ 'ಡೇರ್‌ಡೆವಿಲ್ ಮುಸ್ತಫಾ' ಸಿನಿಮಾದ ನಿನ್ನಂಥೋರ್ ಯಾರೂ ಇಲ್ವಲ್ಲೋ ಎಂಬ ಹಾಡು ಸೂಪರ್‌ಹಿಟ್ ಹಾಡುಗಳ ಲೀಸ್ಟ್ ಸೇರಿದೆ. ಈ ಹಾಡಿಗೆ ವಾಸುಕಿ ವೈಭವ್ ಹಾಗೂ ಸಿದ್ದಾರ್ಥ್ ಬೆಳ್ಮಣ್ಣು ದನಿಯಾಗಿದ್ದಾರೆ. ಇನ್ನು ಈ ಚಿತ್ರದ ಟ್ರೈಲರ್ ಕೂಡ ದೊಡ್ಡ ಮಟ್ಟದಲ್ಲಿ ವೀಕ್ಷಣೆಯಾಗಿದ್ದು, ಎಲ್ಲಾ ಕಡೆಯಿಂದ ಮೆಚ್ಚುಗೆ ವ್ಯಕ್ತವಾಗಿದೆ. ಯೂಟ್ಯೂಬ್ ಸೆನ್ಸೇಷನ್ ಡಾ.ಬ್ರೋ ಗಗನ್ ಶ್ರೀನಿವಾಸ್ ಅವರ ಧ್ವನಿಯಿಂದ ಪೂಚಂತೇ ಪ್ರಪಂಚ ಪರಿಚಯ ಮಾಡಿಕೊಡಲಾಗುತ್ತದೆ. ಬಾಲ್ಯದ ಆಟ ಪಾಠ, ತುಂಟಾಟದ 'ಡೇರ್ ಡೆವಿಲ್ ಮುಸ್ತಫಾ' ಚಿತ್ರದ ಮೊದಲ ನೋಟ ನೋಡುಗರಿಗೆ ಇಂಪ್ರೆಸ್ ಮಾಡುತ್ತಿದೆ. ಈ ಸಿನಿಮಾಗೆ ನಟ ಡಾಲಿ ಧನಂಜಯ ಬೆಂಬಲವಾಗಿ ನಿಂತಿದ್ದಾರೆ. ಹೇಳಿ ಕೇಳಿ ಸಾಹಿತ್ಯ ಪ್ರೇಮಿಯಾಗಿರುವ ಧನಂಜಯ್ ಈ ಚಿತ್ರವನ್ನು ಜನರಿಗೆ ಪ್ರೆಸೆಂಟ್ ಮಾಡುತ್ತಿದ್ದು, ಕೆಆರ್‌ಜಿ ಸ್ಟುಡಿಯೋಸ್ ರಾಜ್ಯದೆಲ್ಲೆಡೆ ರಿಲೀಸ್ ಮಾಡುತ್ತಿದೆ.

ರಾಹುಲ್‌ರಾಯ್ ಅವರ ಛಾಯಾಗ್ರಹಣ, ಶಶಾಂಕ್ ಸೋಗಾಲ್, ಸಂಪತ್ ಸಿರಿಮನೆ, ಡಾಲಿ ಧನಂಜಯ್ ಅವರ ಸಾಹಿತ್ಯದ ಹಾಡುಗಳಿಗೆ ನವನೀತ್ ಶ್ಯಾಮ್ ಅವರ ಸಂಗೀತವಿದೆ. ಶಿರ್ಶಿ ಬೈಕಾಡಿ, ಆದಿತ್ಯ ಆಶ್ರೀ, ಅಭಯ್, ಸುಪ್ರೀತ್ ಭಾರದ್ವಾಜ್, ಆಶಿತ್, ಶ್ರೀವತ್ಸ, ಪ್ರೇರಣಾ, ಎಂ.ಎಸ್.ಉಮೇಶ್, ಮಂಡ್ಯ ರಮೇಶ್, ಮೈಸೂರು ಆನಂದ್, ಸುಂದರ ವೀಣಾ, ನಾಗಭೂಷಣ್, ಪೂರ್ಣಚಂದ್ರ ಮೈಸೂರು ಸೇರಿದಂತೆ ಅನೇಕ ಕಲಾವಿದರು ಈ ಸಿನಿಮಾದಲ್ಲಿ ನಟಿಸಿದ್ದಾರೆ.

ಮತ್ತೆ ಮದುವೆ ಬಗ್ಗೆ ಮಾತಾಡಿದ ಪವಿತ್ರಾ ಲೋಕೇಶ್-ನರೇಶ್...!




ಟಾಲಿವುಡ್ ನಟ ನರೇಶ್ ಕೃಷ್ಣ ಹಾಗೂ ಪವಿತ್ರಾ ಲೋಕೇಶ್ ಅಭಿನಯದ ಮತ್ತೆ ಮದುವೆ ಚಿತ್ರವು ತೆಲುಗು ಹಾಗೂ ಕನ್ನಡ ಭಾಷೆಯಲ್ಲಿ ಬಿಡುಗಡೆಯಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಪವಿತ್ರಾ ಹಾಗೂ ನರೇಶ್ ಜೋಡಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸಿನಿಮಾ ಹಾಗೂ ವೈಯಕ್ತಿಕ ಜೀವನದ ಬಗ್ಗೆ ವಿಷಯ ಹಂಚಿಕೊಂಡರು.

ಇದು ನಿಮ್ಮ ಜೀವನದ ರಿಯಲ್ ಲೈಫ್ ಸ್ಟೋರಿನಾ? ಟೀಸರ್ ನೋಡಿದರೆ ಇದುವರೆಗೂ ನಡೆದ ಘಟನೆಗಳನ್ನೇ ಅಲ್ಲಿ ತೋರಿಸಲಾಗಿದೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಪವಿತ್ರಾ ಲೋಕೇಶ್, ಒಂದೆರಡು ನಿಮಿಷದ ಟೀಸರ್, ಟ್ರೇಲರ್ ನೋಡಿ ಯಾವ ನಿರ್ಧಾರಕ್ಕೂ ಬರಬೇಡಿ, ಸಿನಿಮಾ ನೋಡಿದರೆ ನಾವು ಏನು ಹೇಳಲು ಹೊರಟಿದ್ದೇವೆ ಎನ್ನುವುದು ಅರ್ಥವಾಗುತ್ತದೆ. ಸಮಾಜಕ್ಕೆ ಒಂದೊಳ್ಳೆ ಸಂದೇಶ ಇದರಲ್ಲಿದೆ. ಈಗಲೇ ಕಥೆಯನ್ನು ಹೇಳಲು ಸಾಧ್ಯವಿಲ್ಲ. ನಮ್ಮ ಜೀವನಕ್ಕೂ, ಸಿನಿಮಾಗೂ ಏನೂ ಸಂಬಂಧವಿಲ್ಲ, ಸಿನಿಮಾ ಬೇರೆ, ವೈಯಕ್ತಿಕ ಜೀವನವೇ ಬೇರೆ. ನನ್ನ ವೃತ್ತಿಗೂ, ವೈಯಕ್ತಿಕ ವಿಚಾರಕ್ಕೂ ಲಿಂಕ್ ಮಾಡುವುದು ನನಗೆ ಇಷ್ಟವಿಲ್ಲ. ನನ್ನನ್ನು ಒಬ್ಬ ನಟಿಯಾಗಿ ಮಾತ್ರ ನೋಡಿ, ಬೇಕಂತಲೇ ಯಾರೂ ಸುದ್ದಿಯಾಗುವುದಿಲ್ಲ. 1994ರಲ್ಲಿ ಅಂಬರೀಶ್ ಅವರು ನನ್ನನ್ನು ಚಿತ್ರರಂಗಕ್ಕೆ ಪರಿಚಯಿಸಿದರು. ಅಲ್ಲಿಂದ ಇದುವರೆಗೂ ನಾನು ಯಾವುದೇ ವಿಚಾರವನ್ನು ಮಾಧ್ಯಮಗಳ ಮುಂದೆ ಬಂದು ಹೇಳಿಕೊಂಡಿರಲಿಲ್ಲ. ದುರುದ್ದೇಶ ಪೂರ್ವಕವಾಗಿ ನನ್ನ ಹೆಗಲಮೇಲೆ ಗನ್‌ಇಟ್ಟು ನರೇಶ್ ಅವರನ್ನು ಶೂಟ್ ಮಾಡುವ ಪಿತೂರಿ ನಡೆದಿತ್ತು ಎಂದು ಪವಿತ್ರಾ ಹೇಳಿದರು. ನಂತರ ನರೇಶ್ ಮಾತನಾಡಿ, ಹಿಂದೆ ದೇವಾನು ದೇವತೆಗಳೇ ಬಹುಪತ್ನಿತ್ವದಲ್ಲಿದ್ದರು. ರಾಜರೂ ಒಂದಕ್ಕಿಂತ ಹೆಚ್ಚು ಮದುವೆ ಆಗುತ್ತಿದ್ದರು. ಅದೆಲ್ಲವನ್ನೂ ನಾವು ಸ್ವೀಕರಿಸಿ, ಒಪ್ಪಿಕೊಂಡಿದ್ದೇವೆ. ಈಗಲೂ ಸುಪ್ರೀಂ ಕೋರ್ಟ್ ಲಿವ್‌ಇನ್ ರಿಲೇಶನ್ ಶಿಪ್ ತಪ್ಪಲ್ಲ ಎಂದು ತೀರ್ಪು ನೀಡಿದೆ ಎಂದು.

ಚುನಾವಣಾ ವಿಶೇಷ

ಸಿನಿಪದಬಂಧ-474

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ವಿಜೇತರು: ಗೌರಮ್ಮಣಿ, ಜಿ.ಡಿ.ಎಸ್.ಎಂ.ಪಿ, ಕುವೆಂಪುನಗರ ಅಂಚೆ ಕಛೇರಿ, ಮೈಸೂರು-23

ಸಿನಿ ಪದಬಂಧ 473ರ ಸರಿ ಉತ್ತರ

ಅ	ಧಿ	ಪ	ತಿ			ನಿ	ನ	ಗೋ	ಸ್ಕ	ರ
ತಿ				ಗ	ಗ	ನ		ಪಿ		
ರ	ಮ್ಯ	ಕೃ	ಷ್ಣ			ಗಾ		ಕೃ	ನ	ಅ
ಥ		ಷ್ಣ		ಏ	ಕಾಂ	ಗಿ		ಷ್ಣ		ಮ
ಮ				ಕ						ರ
ಹಾ		ಸು	ಮ	ಲ	ತಾ		ಪ್ರೇ	ಮ	ಕಾ	ಮ
ರ	ವ	ಳಿ		ವ್ಯ			ಮ			ಧು
ಥ		ಗಾ			ಹೊ		ಖೈ		ಬ	ರ
	ಗ	ಳಿ	ಗೆ		ಸ	ನಾ	ದಿ			ಪ್ರೇ
	ಲಾ				ಮ			ಸಂ	ಭ್ರ	ಮ
ಬೇ	ಟೆ	ಗಾ	ರ		ನೆ	ರ	ಳು			

ಎಡದಿಂದ ಬಲಕ್ಕೆ

1. ದೇವು, ಸಾಯಿ ಅಭಿನಯದ ತುರ್ತು ಸ್ಥಿತಿ 4
2. "ಹಾಡು ಬಾ ಕೋಗಿಲೆ... ನಲಿದಾಡು ಬಾರೇ ನವಿಲೇ...", ಗೀತೆಯ ಚಿತ್ರ 5
4. ವೃಕ್ಷದ ನಡುವೆ ದ್ವೇಷವಿದೆ 3
5. ವಿಷ್ಣು ಕುಂಚ ಹಿಡಿದ ಕಲಾವಿದ 4
7. ಕ್ರೈಸ್ತ ನಾಮವುಳ್ಳ ದರ್ಶನ್ ಇಲ್ಲಿ ಅಸ್ತವ್ಯಸ್ತ 3
9. ವಿಠಲನಿಗಾಗಿ ಮಣ್ಣು ತುಳಿದ 'ಭಕ್ತ' 3
10. ಶಶಿಕುಮಾರ್ – ಇಂದ್ರಜಾ ಅಭಿನಯದ ಚಿತ್ರ 4
11. ರವಿಚಂದ್ರನ್ ಅರಸ ಅಂತಾ ಹೇಳಿಕೊಳ್ಳಲು ಪಿ.ವಿ.ರಾಜೇಂದ್ರನ್ ನಿರ್ದೇಶಕ 4
12. ಪ್ರಮೀಳಾ ಜೋಷಾಯ್‌ಯ ಸೀರೆಯ ತುದಿ 3
14. ಕಾಗೆಯ ಕೂಗಿನಲ್ಲಿ ಚಿಕ್ಕಪ್ಪ ಇದ್ದಾನೆ 2
15. ಆಸೆಯ ಬಲೆಯಲ್ಲಿ ಬಿದ್ದ ನಟಿ 3
16. " _ _ _ ಹರನೇ ಗುರುವೇ ಶರಣು, ಕಣ್ಣಪ್ಪ ಕೊಟ್ಟನು ಕಣ್ಣನು...., " 3
17. ಬೆಟ್ಟದ ತಾಯಿ ಚಂಡಿ ಹಿಡಿದಿದ್ದಾಳೆ 3
18. ಅಂಬಿ ಕಲ್ಕಿ ಅವತಾರ ಎತ್ತಲು ಕೆ.ವಿ.ರಾಜು ನಿರ್ದೇಶಕ 4
19. _ _ _ ಡೆತ್ 3

ಮೇಲಿನಿಂದ ಕೆಳಕ್ಕೆ

1. ಪ್ರತಿ ಕುಟುಂಬದಲ್ಲೂ ಸಮಸ್ಯೆಗಳು ಇದ್ದೆ ಇರುತ್ತೇ ಅಂದ್ಮೇಲೆ ತೂತಲ್ಲವೇ !? 8
2. ದೇವರಾಜ್ – ತ್ಯಾಗರಾಜ್ ಇಬ್ಬರೂ ಪರಾಕ್ರಮಿಗಳು 4
3. ಗೋಧೂಳಿ ಸಮಯದ ಹಾಡಿಗೆ ರಾಜ್ ಕುಮಾರ್ ಅಭಿನಯವಿದೆ 4
6. ರಾಮಕುಮಾರ್‌ನ ಬೆಲೆಬಾಳುವ ಮಣಿ 2
8. ವಿಧಿ ಅದರ ಸಾಹೇಬ ಎನ್ನುವ ಮೊದಲೇ ಜೀವನ ಕುದುರೆ ಗಾಡಿ ಇದ್ದಂತೆ... 8
9. ಗು, ಗೂ, ಗೆ, ಗೋ, ಗೌ, ಸ, ಸಾ, ಸಿ, ಸು, ದಾ, ಸೋ, ಸೌ, ದ, 4
10. ಹಾಡೊಂದರಲ್ಲಿ ಮಿರ್ಚಿ ಮಸಾಲೆಗೆ ಮೆಯ್ಯೋ ಮೇಕೆಯಾದರೆ ಖಾರ ಮಸಾಲೆಗೆ ? 4
11. ಉಪ್ಪಿ – ಸಾಕ್ಷಿ ಶಿವಾನಂದ್ ಅಭಿನಯದ ಚಿತ್ರ 4
13. ಚಂದ್ರನ ಬಿಂದು ಈ ನಟಿ ನೆನಪು ಮಾತ್ರ 4
15. ಇಂದ್ರನ ಗೆದ್ದವನು "ಜಗ್ಗೇಶ್" 3

ಮೈಸೂರು ಮಿತ್ರ

ಕೈ ಗ್ಯಾರಂಟಿಗಳನ್ನು ಈಡೇರಿಸದಿದ್ದರೆ ಬೀದಿಗಿಳಿದು ಹೋರಾಟ

ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಎಚ್ಚರಿಕೆ

ತಿ.ನರಸೀಪುರ, ಮೇ 18– ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ಜನತೆಗೆ ಗ್ಯಾರಂಟಿ ಭರವಸೆಗಳನ್ನು ನೀಡಿ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದು, ಕೊಟ್ಟ ಮಾತಿನಂತೆ ನೂತನ ಶಾಸಕರು ಭರವಸೆಗಳನ್ನು ಈಡೇರಿಸದಿದ್ದಲ್ಲಿ ಜೆಡಿಎಸ್ ಬೀದಿಗಿಳಿದು ಹೋರಾಡಲಿದೆ ಎಂದು ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.



ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಪೂರ್ವದಲ್ಲಿ ಮನೆ ಮನೆಗೆ ತೆರಳಿ ನೀವು ಗ್ಯಾರಂಟಿ ಕಾರ್ಡ್‌ಗಳನ್ನು ನೀಡಿ ಮತಯಾಚಿಸಿ, ಜಯ ಸಾಧಿಸಿದ್ದೀರಿ. ಈಗ ಕೊಟ್ಟಿರುವ ಗ್ಯಾರಂಟಿಗಳನ್ನು ಈಡೇರಿಸಬೇಕು. ಭರವಸೆಗಳ ಈಡೇರಿಕೆಗೆ ವಿಫಲರಾದಲ್ಲಿ ಕ್ಷೇತ್ರದ ಜನತೆ ಸಹಕಾರದೊಂದಿಗೆ ವಿಪಕ್ಷವಾಗಿ ಬೀದಿಗಿಳಿದು ಹೋರಾಡುವ ಸಾಮರ್ಥ್ಯ ನಮಗಿದೆ ಎಂದು ಎಚ್ಚರಿಸಿದರು.

ನಾನು ಶಾಸಕನಾಗಿದ್ದ ವೇಳೆ ಆರಂಭವಾದ ಅಭಿವೃದ್ಧಿ ಕೆಲಸಗಳನ್ನು ಪೂರ್ಣಗೊಳಿಸಬೇಕು. ಕಳೆದ ಚುನಾವಣೆಯಲ್ಲಿ ಜನ ನಿಮ್ಮನ್ನು ತಿರಸ್ಕಾರ ಮಾಡಿದ್ದರು. ಈಗ ಮತ್ತೆ ಅವಕಾಶ ನೀಡಿದ್ದಾರೆ. ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಂಡು ತಾಲೂಕಿನ ಅಭಿವೃದ್ಧಿ ಕಡೆ ಗಮನಹರಿಸಬೇಕೆಂದು ಶಾಸಕ ಮಹದೇವಪ್ಪ ಅವರಿಗೆ ಮನವಿ ಮಾಡಿದರು.

ಸೌಹಾರ್ದತೆ ಮುಂದುವರೆಸಿ: ಚುನಾವಣೆಯಲ್ಲಿ ಗೆಲುವು ಸಾಧಿಸಿದ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅಭಿನಂದನೆ ಸಲ್ಲಿಸಿದ ಅಶ್ವಿನ್, ನನ್ನ ಅಧಿಕಾರಾವಧಿಯಲ್ಲಿ ತಾಲೂಕಿನಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸಲಾಗಿತ್ತು. ತಾವು ಸಹ ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಯಾವುದೇ ತಾರತಮ್ಯ ಮಾಡದೇ ಹಾಗೂ ಸಂಘರ್ಷಕ್ಕೆ ಅವಕಾಶ ಕೊಡದೇ ಅಧಿಕಾರ ನಡೆಸುವಂತೆ ಮನವಿ ಮಾಡಿದರು.

ಮತದಾರರಿಗೆ ಕೃತಜ್ಞತೆ: ಚುನಾವಣೆಯಲ್ಲಿ ನನಗೆ 59 ಸಾವಿರ ಮತಗಳು ದೊರೆತಿದ್ದು, ಮತ ನೀಡಿದ ಎಲ್ಲಾ ಮತದಾರರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದ ಅಶ್ವಿನ್ ಕುಮಾರ್, ಚುನಾವಣೆಯಲ್ಲಿ ಕಾರ್ಯಕರ್ತರು ನನ್ನ ಪರ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಅದರ ಫಲವಾಗಿ ಹೆಚ್ಚಿನ ಮತ ಬಂದಿದೆ. ಪ್ರತಿ ಹೋಬಳಿ, ಗ್ರಾಮದಲ್ಲೂ ಮತದಾರರು ಪ್ರೀತಿ ತೋರಿ ಮತ ಹಾಕಿದ್ದಾರೆ. ಅಲ್ಲದೇ ಅಧಿಕಾರವಧಿಯಲ್ಲಿ ಸಹಕಾರ ನೀಡಿದ ತಾಲೂಕಿನ ಜನತೆ ಹಾಗೂ ಅಧಿಕಾರಿ ವರ್ಗದವರಿಗೆ ಕೃತಜ್ಞತೆ ಸಲ್ಲಿಸಿದರು.

ಸುದ್ದಿಗೋಷ್ಠಿಯಲ್ಲಿ ಬನ್ನೂರು ಹೋಬಳಿ ಘಟಕದ ಅಧ್ಯಕ್ಷ ಕುಮಾರಸ್ವಾಮಿ, ರಾಜ್ಯ ಕಾರ್ಯದರ್ಶಿ ವೈಎಸ್.ರಾಮಸ್ವಾಮಿ, ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ್, ಪುರಸಭಾ ಸದಸ್ಯ ಆನಂದ್, ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಮುಖಂಡರಾದ ಕೊಡಗಳ್ಳಿ ಜವರೇಗೌಡ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ರಾಜು, ಸ್ವಾಮಿ ಸೇರಿದಂತೆ ಇತರರಿದ್ದರು.

> ಪ್ರಸಕ್ತ ಚುನಾವಣೆಯಲ್ಲಿ ನಮಗೆ ಸೋಲಾಗಿರಬಹುದು. ಇದಕ್ಕೆ ಕಾರ್ಯಕರ್ತರು ಧೃತಿಗೆಡಬೇಕಾಗಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು–ಗೆಲುವಿನ ಹಾವು–ಏಣಿ ಆಟ ಇದ್ದೇ ಇರುತ್ತದೆ. ಮತ್ತೆ ಪುಟಿದೆದ್ದು 2028ರ ಚುನಾವಣೆಯಲ್ಲಿ ಗೆಲ್ಲಲು ಬೇಕಾಗುವ ಕಾರ್ಯತಂತ್ರ ರೂಪಿಸಲು ಕಾರ್ಯಕರ್ತರು ಮುಂದಾಗಬೇಕು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕಟ್ಟಿರುವ ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಣ್ಣನವರ ನೇತೃತ್ವದಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಅನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ಮಹತ್ತರ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ. ಯಾವುದೇ ಕಾರಣಕ್ಕೂ ಪಕ್ಷ, ನಮ್ಮ ಕಾರ್ಯವೈಖರಿ ಹಾಗು ಚುನಾವಣೆ ಫಲಿತಾಂಶದ ಬಗ್ಗೆ ಯಾರೂ ಬೇಸರಗೊಳ್ಳದೇ ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸೋಣ.
>
> –ಎಂ.ಅಶ್ವಿನ್ ಕುಮಾರ್, ಮಾಜಿ ಶಾಸಕ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕರುಂಗಾ ಪಿಯಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿ ಕ ಭಾಯಿ ಕಿಸಿ ಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ಟಡಿ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಫಾಸ್ಟ್ ಎಕ್ಸ್ (ಇಂ) 2 ಪ್ರದರ್ಶನಗಳು ದಿ ಕೇರಳ ಸ್ಟೋರಿ(ಹಿಂ)	2 ಪ್ರದರ್ಶನಗಳು
ಸಂಗಂ	
ಶ್ರೀಮಂತ (ಕ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಏಜೆಂಟ್ (ತೆ)	4 ಪ್ರದರ್ಶನಗಳು
ಪ್ರಭಾ	
ಸುಮನ್ (ಕ)	4 ಪ್ರದರ್ಶನಗಳು

ಪ್ರತಿಯೊಬ್ಬರೂ ಶುಚಿತ್ವ ಕಾಪಾಡಲು ಸಲಹೆ



ಹೆಚ್.ಡಿ.ಕೋಟೆ, ಮೇ 18– ಪ್ರತಿಯೊಬ್ಬರೂ ಶುಚಿತ್ವ ಕಾಪಾಡಬೇಕು ಎಂದು ಗ್ರಾ.ಪಂ ಅಧ್ಯಕ್ಷ ಹೆಚ್.ಕೆ.ದಿನೇಶ್ ಮನವಿ ಮಾಡಿದರು.

ತಾಲೂಕಿನ ಹೈರಿಗೆ ಗ್ರಾಮದಲ್ಲಿ ಗ್ರಾಪಂನಿಂದ ಮನೆ ಮನೆಗೆ ಕಸ ಸಂಗ್ರಹಿಸಲು ಬಕೆಟ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ನಮ್ಮ ಸುತ್ತಮುತ್ತಲಿನ ಪರಿಸರ ಹಾಳಾಗುವುದರ ಜೊತೆಗೆ ರೋಗಗಳು ಹರಡುತ್ತವೆ. ಹೀಗಾಗಿ ಕಸವನ್ನು ಎಲ್ಲೆಂದರಲ್ಲಿ ಎಸೆಯದೇ ಒಣ ಹಾಗೂ ಹಸಿ ಎಂದು ಮನೆಯಲ್ಲೇ ಬೇರ್ಪಡಿಸಿ ಕಸ ಸಂಗ್ರಹಿಸಲು ಬರುವವರಿಗೆ ನೀಡಬೇಕು. ಕಸವನ್ನು ಮೂಲದಲ್ಲೇ ಬೇರ್ಪಡಿಸುವುದರಿಂದ ವಿಲೇವಾರಿ ಮಾಡಲು ಅನುಕೂಲವಾಗುತ್ತದೆ ಎಂದರು.

ಈ ವೇಳೆ ಉಪಾಧ್ಯಕ್ಷೆ ಪುಷ್ಪ ಗೋವಿಂದೇಗೌಡ, ಪಿಡಿಓ ಮೋಹನ್, ಮಾಜಿ ಅಧ್ಯಕ್ಷ ಹೆಚ್.ಜಿ.ಶಿವಣ್ಣ ಸೇರಿದಂತೆ ಇನ್ನಿತರರಿದ್ದರು.

ಸಿದ್ದು ಸಿಎಂ, ಡಿಕೆಶಿ ಡಿಸಿಎಂ: ಸಂಭ್ರಮಾಚರಣೆ

ನಂಜನಗೂಡು, ಮೇ 18– ರಾಜ್ಯದ ಮುಖ್ಯಮಂತ್ರಿಯಾಗಿ 2ನೇ ಬಾರಿಗೆ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾದ ಹಿನ್ನೆಲೆಯಲ್ಲಿ ನಗರ ಕಾಂಗ್ರೆಸ್ ಘಟಕದಿಂದ ಸಂಭ್ರಮಾಚರಣೆ ನಡೆಸಲಾಯಿತು.



ನಗರದ ಕಾಂಗ್ರೆಸ್ ಕಚೇರಿ ಎದುರು ಸಮಾವೇಶಗೊಂಡ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ, ಸಿದ್ದರಾಮಯ್ಯ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡುವ ಮೂಲಕ ಸಂಭ್ರಮಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್ ಮಾತನಾಡಿ, ಬಿಜೆಪಿ ಭ್ರಷ್ಟಾಚಾರ, ಬೆಲೆ ಏರಿಕೆ, ದುರಾಡಳಿತದಿಂದ ಆಕ್ರೋಶಗೊಂಡು ಕಾಂಗ್ರೆಸ್ ಪಕ್ಷಕ್ಕೆ ನಿಚ್ಚಳ ಬಹುಮತ ನೀಡಿರುವ ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಕಾಂಗ್ರೆಸ್ ಪಕ್ಷದ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ರಾಜ್ಯ ಉಸ್ತುವಾರಿ ಸುರ್ಜೆವಾಲ, ವೇಣುಗೋಪಾಲ್ ಸೇರಿ ರಾಜ್ಯಕ್ಕೆ ಅನೇಕ ಭಾಗ್ಯಗಳನ್ನು ಕೊಟ್ಟು ಭಾಗ್ಯರಾಮಯ್ಯ ಎನಿಸಿರುವ ಸಿದ್ದರಾಮಯ್ಯ ಅವರನ್ನು 2ನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿರುವುದು ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ಉಪ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿರುವುದು ಕಾರ್ಯಕರ್ತರಲ್ಲಿ ಹೊಸ ಚೈತನ್ಯ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಿಸಲಾಗುತ್ತಿದೆ ಎಂದರು.

ಈ ವೇಳೆ ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ಪುರಸಭಾ ಮಾಜಿ ಅಧ್ಯಕ್ಷ ಚೆಲುವರಾಜು, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಪ್ರದೀಪ್, ಗಂಗಾಧರ್, ಮುಖಂಡರಾದ ಗೋವಿಂದರಾಜು, ನಾಗರಾಜು, ಲೋಕೇಶ್, ಮಹದೇವು, ಪರ್ವೀಜ್, ಅಬ್ದುಲ್‌ಖಾದರ್, ಗಣೇಶ್, ಸೌಭಾಗ್ಯ ಸೇರಿದಂತೆ ಇತರರಿದ್ದರು.

ನಂ.ಗೂಡಿನ ನಂಜುಂಡೇಶ್ವರನ ಭಕ್ತರಿಗೆ ವಸತಿ ಸಮಸ್ಯೆ

- ಇನ್ನೂ ಆರಂಭವಾಗದ 75 ಕೊಠಡಿಗಳ ವಸತಿ ಗೃಹ ಕಾಮಗಾರಿ
- ಮೂಲಸೌಲಭ್ಯ ಕಲ್ಪಿಸಲು ಭಕ್ತರ ಆಗ್ರಹ



● ಎಚ್.ಡಿ. ರಂಗಸ್ವಾಮಿ

ನಂಜನಗೂಡು, ಮೇ 18– ದಕ್ಷಿಣಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ನಂಜುಂಡೇಶ್ವರ ದೇವಾಲಯಕ್ಕೆ ರಾಜ್ಯದ ನಾನಾ ಭಾಗ, ಹೊರ ರಾಜ್ಯಗಳಿಂದ ಭಕ್ತರು ಆಗಮಿಸುತ್ತಾರೆ. ಆದರೆ ದೇವಸ್ಥಾನದ ಗಿರಿಜಾ ಕಲ್ಯಾಣ ಮಂಟಪದಲ್ಲಿರುವುದು ಕೇವಲ 24 ಕೊಠಡಿ. ಹೀಗಾಗಿ ವಸತಿ ಸಮಸ್ಯೆ ಎದುರಾಗಿ ಖಾಸಗಿ ವಸತಿ ಗೃಹಗಳಲ್ಲಿ ವಿಶ್ರಾಂತಿ ಪಡೆಯಲು ದಿನಕ್ಕೆ 1,500 ರೂ. ಹಾಗೂ ವಿಶೇಷ ದಿನಗಳಲ್ಲಿ ಅದಕ್ಕೂ ಹೆಚ್ಚು ಹಣ ನೀಡಲೇಬೇಕಾದ ಅನಿವಾರ್ಯತೆ ಎದುರಾಗಿದೆ.

ಪ್ರತಿ ತಿಂಗಳು ಹುಂಡಿ ಹಣದಿಂದಲೇ ಕೋಟಿಗೂ ಹೆಚ್ಚು ಆದಾಯ ಬರುವ ರಾಜ್ಯದ 'ಗ್ರೇಡ್ 1' ದೇವಾಲಯಗಳಲ್ಲಿ ಇದೂ ಒಂದು. ಆದರೆ ಭಕ್ತರಿಗೆ ವಸತಿ, ಮೂಲ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಅಧಿಕಾರಿಗಳು, ರಾಜಕಾರಣಿಗಳು ವಿಫಲರಾಗಿದ್ದಾರೆ. ಇದರಿಂದ ವಿಶೇಷ ದಿನಗಳಲ್ಲಿ ದೇವಾಲಯಕ್ಕೆ ಬರುವ ಭಕ್ತರು ಖಾಸಗಿ ವಸತಿ ಗೃಹಗಳಲ್ಲಿ ದುಪ್ಪಟ್ಟು ಹಣ ನೀಡಿ ಉಳಿದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೇ ಬಹುತೇಕ ಭಕ್ತರು ಬಡವರಾಗಿರುವ ಕಾರಣ ದೇವಾಲಯದ ಮುಂಭಾಗ, ದೇಗುಲದ ಆವರಣದ ಅಂಗಡಿ ಮಳಿಗೆ ಪಡಸಾಲೆ, ದೇವಾಲಯದ ಕೈಸಾಲೆಯಲ್ಲಿ ಆಶ್ರಯ ಪಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ದೇವಾಲಯಕ್ಕೆ ಸುಸಜ್ಜಿತ ವಸತಿಗೃಹ ಬೇಕು ಎಂಬ ಭಕ್ತರ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ಸಲುವಾಗಿ ಶಾಸಕರಾಗಿದ್ದ ಬಿ.ಹರ್ಷವರ್ಧನ್ ದೇವಾಲಯದ ಹುಂಡಿ ಹಣದಿಂದ ದಾಸೋಹ ಭವನದ ಮುಂಭಾಗ 75 ಕೊಠಡಿಗಳ ವಸತಿ ಗೃಹ ನಿರ್ಮಾಣಕ್ಕೆ ಮುಂದಾಗಿ ಸರ್ಕಾರದಿಂದ ಮಂಜೂರಾತಿ ಪಡೆದರು. ಆದರೆ ಮೂರಂತಸ್ತಿನ ಕಟ್ಟಡ ನಿರ್ಮಾಣವಾದರೆ ದೇವಾಲಯದ ರಾಜಗೋಪುರದ ಸೌಂದರ್ಯಕ್ಕೆ ಧಕ್ಕೆಯಾಗಬಹುದೆಂದು ಪ್ರಾಚ್ಯವಸ್ತು ಸಂರಕ್ಷಣಾ ಇಲಾಖೆ ಹೇಳಿದ ಕಾರಣದಿಂದಾಗಿ ಆಡಳಿತಾತ್ಮಕ ತೊಡಕು ಉಂಟಾಗಿ ಕಾಮಗಾರಿ ನನೆಗುದಿಗೆ ಬಿದ್ದಿತ್ತು. ಈ ತೊಡಕು ನಿವಾರಿಸಿ ಎರಡಂತಸ್ತಿನ 75 ಕೊಠಡಿಯುಳ್ಳ ವಸತಿ ಗೃಹ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ಪಡೆದು, 13.5 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಆದರೆ ಕಾಮಗಾರಿ ಮಾತ್ರ ಆರಂಭವಾಗಿಲ್ಲ. ಕಾಮಗಾರಿಗೆ ಅಗತ್ಯವಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಭಕ್ತರ ವಸತಿ ಗೃಹ ನಿರ್ಮಾಣ ಕಾಮಗಾರಿ ಆರಂಭಿಸಬೇಕಾದ ಜವಾಬ್ದಾರಿ ಈಗಿನ ಶಾಸಕ ದರ್ಶನ್ ಧ್ರುವನಾರಾಯಣ್ ಮೇಲಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ದೊರಕಿಸಿ ಸೌಕರ್ಯ ಕಲ್ಪಿಸ ಬೇಕೆಂಬುದು ಭಕ್ತರ ಬೇಡಿಕೆಯಾಗಿದೆ.

ಭಕ್ತರಿಗೆ ಅನುಕೂಲ ಕಲ್ಪಿಸಿ: ದೇವಾಲಯದ ಹುಂಡಿ ಹಣವೇ 150 ಕೋಟಿಗಿಂತಲೂ ಹೆಚ್ಚಾಗಿದೆ. ಆ ಹಣ ಸದ್ಬಳಕೆ ಮಾಡಿಕೊಂಡು ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ತಿರುಪತಿ ಮಾದರಿ ದೇವಾಲಯ ಅಭಿವೃದ್ಧಿಪಡಿಸಿ ಭಕ್ತರಿಗೆ ಅನುಕೂಲ ಕಲ್ಪಿಸಬೇಕು ಎಂಬುದು ಭಕ್ತರ ದಶಕಗಳ ಬೇಡಿಕೆಯಾಗಿದೆ. ಅಧಿಕಾರಿಗಳು ಮತ್ತು ರಾಜಕಾರಣಿಗಳು ಆಸಕ್ತಿ ತೋರಿಸಿ ಭಕ್ತರಿಗೆ ಅನುಕೂಲ ಕಲ್ಪಿಸುವರೇ ಎಂಬುದನ್ನು ಕಾದು ನೋಡಬೇಕಿದೆ.

ಕಾಂಗ್ರೆಸ್ ಕಾರ್ಯಕರ್ತರಿಂದ ಅಭಿನಂದನೆ



ಹೆಬ್ಬಾಳು, ಮೇ 18– ಕೆ.ಆರ್.ನಗರ ತಾಲೂಕಿನ ಬೀರ್ನಹಳ್ಳಿ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡರನ್ನು ಅಭಿನಂದಿಸಿದರು.

ಈ ವೇಳೆ ದೊಡ್ಡಸ್ವಾಮೇಗೌಡ ಮಾತನಾಡಿ, ಬೀರ್ನಹಳ್ಳಿ ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ಉತ್ತಮ ಬೆಂಬಲ ನೀಡಿ, ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಗೆಲುವಿಗೆ ಮತದಾರರು ಕಾರಣರಾಗಿದ್ದಾರೆ. ಅದಕ್ಕಾಗಿ ನಮ್ಮ ಕುಟುಂಬ ಕ್ಷೇತ್ರದ ಜನತೆಗೆ ಋಣಿಯಾಗಿರುತ್ತದೆ ಎಂದರು.

ಮೇ 20ರಂದು ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಮತ್ತು ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಆನಂತರ ನೂತನ ಶಾಸಕರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಎಲ್ಲಾ ಪ್ರಕ್ರಿಯೆ ಮುಗಿದ ನಂತರ ಶಾಸಕ ಡಿ.ರವಿಶಂಕರ್ ಕ್ಷೇತ್ರ ಪ್ರವಾಸ ಮಾಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸಲಿದ್ದಾರೆ ಎಂದರು.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಪರಿಶ್ರಮದಿಂದ ಕಾಂಗ್ರೆಸ್ 135 ಕ್ಷೇತ್ರಗಳಲ್ಲಿ ಜಯಗಳಿಸಲು ಸಾಧ್ಯವಾಯಿತು. ಇಬ್ಬರು ಮುಖ್ಯಮಂತ್ರಿಯಾಗಲು ಸಮರ್ಥ ನಾಯಕರಾಗಿದ್ದರೂ, ಹೈಕಮಾಂಡ್ ತೀರ್ಮಾನದಂತೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯಾಗುತ್ತಿರುವುದು ನಮಗೆಲ್ಲರಿಗೂ ಸಂತಸ ತಂದಿದೆ ಎಂದರು.

ಹೆಬ್ಬಾಳು ಗ್ರಾಮ ಪಂಚಾಯಿತಿ ಸದಸ್ಯ ಬಿ.ಆರ್. ನವೀನ್, ಮುಖಂಡರಾದ ಪುಟ್ಟಸ್ವಾಮಿ, ಬಸವರಾಜು, ಬಿ.ಆರ್.ಸುಧಾಕರ್, ಬಿ.ಆರ್. ರವಿ, ಸುರೇಶ್, ದಿನೇಶ್, ಆನಂದ್, ಗಿರೀಶ್, ಹೇಮಚಂದ್ರ, ಪ್ರಕಾಶ್, ಬಸವರಾಜು, ಚಂದ್ರಣ್ಣ, ಮಂಜುನಾಥ್, ಸುಬ್ಬಣ್ಣ ಮತ್ತಿತರರಿದ್ದರು.

ಮಿನಿ ಬಸ್ ಪಲ್ಟಿ: ಪ್ರಯಾಣಿಕರು ಪಾರು

ನಂಜನಗೂಡು, ಮೇ 18– ಬೈಕ್ ಸವಾರನಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಚಾಲಕನ ನಿಯಂತ್ರಣ ಕಳೆದುಕೊಂಡ ಮಿನಿ ಬಸ್ ಪಲ್ಟಿಯಾಗಿ ಬಸ್‌ನಲ್ಲಿದ್ದ 21 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಗರದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ ಗುರುವಾರ ನಡೆದಿದೆ.

ಹೊಸಪೇಟೆಯಿಂದ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಮಿನಿ ಬಸ್‌ನಲ್ಲಿ 21 ಯಾತ್ರಿಗಳು ಬಂದಿದ್ದರು. ದೇವರ ದರ್ಶನ ಪಡೆದು ಹಿಂದಿರುಗುವಾಗ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ ಏಕಾಏಕಿ ಅಡ್ಡ ಬಂದ ಬೈಕ್ ಸವಾರರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಚಾಲಕನ ನಿಯಂತ್ರಣ ಕಳೆದುಕೊಂಡ ಮಿನಿ ಬಸ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಪರಿಣಾಮ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರಿಗೆ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.



ಇದೇ ವೇಳೆ ಸಂಚಾರಿ ಪೊಲೀಸರು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಮಿನಿ ಬಸ್ ಅನ್ನು ಕ್ರೇನ್ ಮೂಲಕ ತೆರವುಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸೌಲಭ್ಯ ತಲುಪಿಸಲು ಸನ್ನದ್ಧರಾಗಿ

ಕಾರ್ಯಕರ್ತರಿಗೆ ಶಾಸಕ ಡಾ.ಹೆಚ್.ಸಿ. ಮಹದೇವಪ್ಪ ಕರೆ

ಬನ್ನೂರು, ಮೇ 18– ತಿ.ನರಸೀಪುರ ಸೇರಿದಂತೆ ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿರುವುದರಿಂದ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಜನಸಾಮಾನ್ಯರಿಗೆ ಸರ್ಕಾರದ ಸೌಲಭ್ಯ ತಲುಪಿಸಲು ಸನ್ನದ್ಧರಾಗಬೇಕು ಎಂದು ಶಾಸಕ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.



ತಾಲೂಕಿನ ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಮುನವರ್ ಪಾಷ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದ ಎಲ್ಲಾ ವರ್ಗದ ಜನರು ನನ್ನನ್ನು ಬೆಂಬಲಿಸಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ. ಹೀಗಾಗಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಅರ್ಹರಿಗೆ ಸರ್ಕಾರದ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸಲು ಕಾರ್ಯಪ್ರವೃತ್ತರಾಗಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಬಡವರು ಮತ್ತು ಮಧ್ಯಮ ವರ್ಗದ ಜನಪರ ಸರ್ಕಾರವನ್ನು ಅಧಿಕಾರಕ್ಕೆ ತರಬೇಕೆಂಬ ಉದ್ದೇಶದಿಂದ ಅಹಿಂದ ಹಾಗೂ ಮೇಲ್ವರ್ಗದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಜನಾದೇಶ ನೀಡಿದ್ದಾರೆ. ಮುಖ್ಯಮಂತ್ರಿಗಳ ಪ್ರಮಾಣ ವಚನ ಹಾಗೂ ಸಚಿವ ಸಂಪುಟ ರಚನೆಯಾದ ಬಳಿಕ ಕ್ಷೇತ್ರದಲ್ಲಿ ಸಂಚರಿಸಿ ನನೆಗುದಿಗೆ ಬಿದ್ದಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುದಾನ ಮಂಜೂರು ಮಾಡಿ, ಕೈ ಹಿಡಿದ ಜನರ ಒತ್ತಾಸೆಗಳಿಗೆ ಎಲ್ಲರೂ ಸ್ಪಂದಿಸೋಣ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ


ತಿ.ನರಸೀಪುರ, ಮೇ 18– ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.60ಕ್ಕೂ ಹೆಚ್ಚು ಅಂಕ ಗಳಿಸಿದ ತಾಲೂಕಿನ ಗಾಣಿಗ ಸಮಾಜದ ಅರ್ಹ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.


ವಿದ್ಯಾರ್ಥಿಗಳು ಭಾವಚಿತ್ರ, ಅಂಕಪಟ್ಟಿ, ಆಧಾರ್ ಕಾರ್ಡ್ ಸೇರಿದಂತೆ ಇನ್ನಿತರ ಅಗತ್ಯ ದಾಖಲಾತಿಗಳೊಂದಿಗೆ ಜೂ.16ರೊಳಗೆ ಅರ್ಜಿ ಸಲ್ಲಿಸುವಂತೆ ಸಂಘದ ಅಧ್ಯಕ್ಷ ರಾಮಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಮೊ.9916621138, 9902287198 ಸಂಪರ್ಕಿಸಿ.

ಹುಣಸೂರಲ್ಲಿ ಬಿರುಸಿನಿಂದ ಸಾಗಿದ ಬಿತ್ತನೆ ಕಾರ್ಯ

ಇಲ್ಲಿವರೆಗೆ 85.6 ಮಿಮೀ ಮಳೆ: ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮಾಹಿತಿ

ಹುಣಸೂರು, ಮೇ 18– ತಾಲೂಕಿನಲ್ಲಿ ಇಲ್ಲಿವರೆಗೆ ಸಾಕಷ್ಟು ಮಳೆಯಾಗಿದೆ. ಈ ಹಿನ್ನೆಲೆಯಲ್ಲಿ ರೈತರು ಕೃಷಿ ಚಟುವಟಿಕೆಯಲ್ಲಿ ನಿರತರಾಗಿದ್ದು, ಬಿತ್ತನೆ ಕಾರ್ಯ ಬಿರುಸಿನಿಂದ ಸಾಗಿದೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ತಿಳಿಸಿದ್ದಾರೆ.





ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಏಪ್ರಿಲ್ ತಿಂಗಳಲ್ಲಿ ವಾಡಿಕೆ ಮಳೆ 71 ಮಿಮೀ ಆಗಬೇಕಿದ್ದು, ಈ ಪೈಕಿ 20 ಮಿಮೀ ಮಳೆಯಾಗಿದೆ. ಮೇ ಮಾಹೆಯ 15ರ ವೇಳೆಗೆ ವಾಡಿಕೆ 27ಮಿಮೀ ಮಳೆ ಯಾಗಬೇಕಿದ್ದು, 59 ಮಿಮೀನೊಂದಿಗೆ ಶೇ.111ರಷ್ಟು ಮಳೆಯಾಗಿದೆ. ಒಟ್ಟಾರೆ ಇಲ್ಲಿವರೆಗೆ ವಾಡಿಕೆಯಂತೆ 117 ಮಿಮೀ ಮಳೆಯಾಗಬೇಕಿದ್ದು, 85.6 ಮಿಮೀ ಮಳೆಯಾಗಿದೆ. ಹೀಗಾಗಿ ಹುಣಸೂರು ತಾಲೂಕಿನಲ್ಲಿ ಕೃಷಿ ಚಟುವಟಿಕೆ ಗರಿಗೆದರಿದೆ.

ತಾಲೂಕಿನಲ್ಲಿ 270 ಹೆಕ್ಟೆರ್‌ನಲ್ಲಿ ನೆಲಗಡಲೆಯನ್ನು ಬಿತ್ತನೆ ಮಾಡುವ ಗುರಿ ಹೊಂದಿದ್ದು, ಈಗಾಗಲೇ 14 ಹೆಕ್ಟೆರ್, 16800 ಹೆಕ್ಟೆರ್‌ನಲ್ಲಿ ಮುಸುಕಿನ ಜೋಳ ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 150 ಹೆಕ್ಟೆರ್, 4950 ಹೆಕ್ಟೆರ್‌ನಲ್ಲಿ ಅಲಸಂದೆ ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 695 ಹೆಕ್ಟೆರ್, 50 ಹೆಕ್ಟೆರ್‌ನಲ್ಲಿ ಹೆಸರು ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 29 ಹೆಕ್ಟೆರ್, 50 ಹೆಕ್ಟೆರ್‌ನಲ್ಲಿ ಉದ್ದು ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 16 ಹೆಕ್ಟೆರ್, 11300 ಹೆಕ್ಟೆರ್‌ನಲ್ಲಿ ಅವರೆ ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 10 ಹೆಕ್ಟೆರ್, 1500 ಹೆಕ್ಟೆರ್‌ನಲ್ಲಿ ಎಳ್ಳು ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 21 ಹೆಕ್ಟೆರ್, 750 ಹೆಕ್ಟೆರ್‌ನಲ್ಲಿ ಹತ್ತಿ ಬಿತ್ತನೆ ಗುರಿ ಹೊಂದಿದ್ದು, ಈಗಾಗಲೇ 250 ಹೆಕ್ಟೆರ್‌ನಲ್ಲಿ ಬಿತ್ತನೆ ಮಾಡಲಾಗಿದೆ. 28100 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ನಾಟಿ ಮಾಡುವ ಗುರಿ ಹೊಂದಿದ್ದು, ಈಗಾಗಲೇ 18100 ಹೆಕ್ಟೆರ್‌ನಲ್ಲಿ ತಂಬಾಕು ನಾಟಿ ಮಾಡಲಾಗಿದೆ ಎಂದರು.

ಬಿತ್ತನೆ ಬೀಜಗಳ ವಿತರಣೆ: ತಾಲೂಕಿನ ವಿವಿಧ ರೈತ ಸಂಪರ್ಕ ಕೇಂದ್ರಗಳಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದ್ದು, ರೈತರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದ ಅವರು, ತಾಲೂಕಿಗೆ 11820 ಕೆಜಿ ಅಲಸಂದೆ ಬಂದಿದ್ದು, ಈ ಪೈಕಿ ಇದುವರೆಗೆ 9455 ಕೆಜಿ ವಿತರಿಸಲಾಗಿದ್ದು, 2365 ಕೆಜಿ ದಾಸ್ತಾನಿದೆ. ಹೆಸರು 145 ಕೆಜಿ ಬಂದಿದ್ದು, ಈವರೆವಿಗೆ 90 ಕೆಜಿ ವಿತರಿಸಿದ್ದು 55 ಕೆಜಿ ದಾಸ್ತಾನಿದೆ. ಉದ್ದು 130 ಕೆಜಿ ಬಂದಿದ್ದು, ಈ ಪೈಕಿ 110 ಕೆಜಿ ವಿತರಿಸಿದ್ದು, 20 ಕೆಜಿ ದಾಸ್ತಾನಿದೆ. ಮುಸುಕಿನ ಜೋಳ 3 ಸಾವಿರ ಕೆಜಿ ಬಂದಿದ್ದು, ಶುಕ್ರವಾರದಿಂದ ವಿತರಿಸಲಾಗುವುದು ಎಂದರು.

ರಸಗೊಬ್ಬರ ಪರಿಶೀಲನೆ: ತಂಬಾಕು ಹರಾಜು ಮಾರುಕಟ್ಟೆಯಿಂದ ತಾಲೂಕಿನ ತಂಬಾಕು ರೈತರಿಗೆ ನೀಡಿದ್ದ ರಸಗೊಬ್ಬರದ ಸ್ಯಾಂಪಲ್ ಅನ್ನು ಕೃಷಿ ಇಲಾಖೆಯಿಂದ ಮಂಡ್ಯದ ಪ್ರಯೋಗಾಲಯಕ್ಕೆ ಪರಿಶೀಲನೆಗೆ ಕಳುಹಿಸಲಾಗಿತ್ತು. ರೈತರಿಗೆ ನೀಡಿದ್ದ ರಸಗೊಬ್ಬರ ಉತ್ತಮ ಗುಣಮಟ್ಟದಿಂದ ಕೂಡಿದೆ ಎಂದು ಪ್ರಯೋಗಾಲಯ ದೃಢೀಕರಿಸಿ ಪ್ರಮಾಣ ಪತ್ರ ನೀಡಿದೆ ಎಂದು ವೆಂಕಟೇಶ್ ತಿಳಿಸಿದರು.

ರಸಗೊಬ್ಬರ ವ್ಯಾಪಾರಿಗಳು, ರೈತ ಮುಖಂಡರ ಸಭೆ: ತಾಲೂಕಿನಲ್ಲಿ ಸಾಕಷ್ಟು ಮಳೆಯಾಗಿ ಕೃಷಿ ಚಟುವಟಿಕೆ ಬಿರುಸಿನಿಂದ ಸಾಗಿದ್ದು, ರೈತರಿಗೆ ಸಕಾಲದಲ್ಲಿ ಸಾಕಷ್ಟು ರಸಗೊಬ್ಬರ ಲಭಿಸುವ ಮೂಲಕ ಮಾರಾಟಗಾರರು ಮತ್ತು ರೈತರ ನಡುವೆ ಉತ್ತಮ ಸಂಬಂಧ ನಿರ್ಮಾಣ ಮಾಡಲು ಸದ್ಯದಲ್ಲೇ ರಸಗೊಬ್ಬರ ವ್ಯಾಪಾರಿಗಳು, ರೈತ ಮುಖಂಡರ ಸಭೆ ಕರೆದು ಸಾಮರಸ್ಯ ಮೂಡಿಸಲಾಗುವುದು ಎಂದು ತಿಳಿಸಿದರು.

ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆ



ತಾಲೂಕಿನ ರೈತ ಸಂಪರ್ಕ ಕೇಂದ್ರಗಳಲ್ಲಿ ಪ.ಜಾತಿ ಮತ್ತು ಪ.ಪಂಗಡದವರಿಗೆ ಶೇ.75ರಷ್ಟು ಮತ್ತು ಉಳಿದವರಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜವನ್ನು ವಿತರಿಸಲಾಗುವುದು. ರೈತರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮನವಿ ಮಾಡಿದರು.